॥ ಶ್ರೀ ಗಣೇಶಾಯ ನಮಃ ॥

॥ ಜಯ ಶ್ರೀ ರಾಮ ॥

॥ ಜಯ ಜಯ ರಘುವೀರ ಸಮರ್ಥ॥

**ಸಂತ : ಸಮರ್ಥ ಶ್ರೀರಾಮದಾಸ ಸ್ವಾಮಿಯವರು (ಮರಾಠಿ ಭಾಷೆಯಲ್ಲಿ) ಬರೆದ**
**'ಶ್ರೀ ದಾಸಬೋಧ' ಈ ಗ್ರಂಥದ ಶ್ರೀ ಶ್ರೀಕಾಂತ ರಘುನಾಥ ಘಾಟಕ**
**ಕೃತ ಸಮವೃತ್ತ (ಓವಿ ಬದ್ಧ) ಕನ್ನಡ ಅನುವಾದ.**

॥ ಶ್ರೀ ರಾಮ ॥

ಶುಕನ ಹಾಗೆ ಪೂರ್ಣ ವೈರಾಗ್ಯ ಯಾವಗೆ ।
ವಸಿಷ್ಠನ ಸಮ ಜ್ಞಾನ ಯೋಗೇಶ್ವರಂಗೆ ।
ಯಾವನು ಮಾನ್ಯ ಕವಿ ವಾಲ್ಮಿಕಿಯ ಹಾಗೆ ।
ನಮಸ್ಕಾರ ನನ್ನ ಸದ್ಗುರು ರಾಮದಾಸಗೆ ॥

ಪ್ರಕಾಶಕ : 'ಸಮರ್ಥ ವಿಚಾರ' ಪ್ರಕಾಶನ

ದ್ವಾರಾ : ಶ್ರೀ ಶ್ರೀಕಾಂತ ರ. ಘಾಟಕ
'ರಘುವಂಶ',ಮುರಲೀಧರ ಆಳಿ, ಪಾರನಾಕಾ,
ಕಲ್ಯಾಣ (ಪಶ್ಚಿಮ), ಜಿ. ಠಾಣೆ, ಮಹಾರಾಷ್ಟ್ರ ರಾಜ್ಯ
ದೂರಧ್ವನಿ : ೦೨೫೧-೨೨೦೭೫೮೩

ಹಕ್ಕುಗಳು : ಈ ಗ್ರಂಥದ ಎಲ್ಲ ಹಕ್ಕುಗಳು
ಅನುವಾದಕನ ಪತ್ನಿ ಸೌ. ಋಚಾ ಶ್ರೀಕಾಂತ. ಘಾಟಕ
ಅವಳ ಕಡೆಗೆ

ಪ್ರಥಮ ಆವೃತ್ತಿ : ೯ ಜಾನೇವಾರಿ ೨೦೧೧

ಮುದ್ರಕರು : ಶ್ರೀ ಪಂಡಿತ ದೀಕ್ಷಿತ
ದೀನ ದಯಾಳ ಕ್ರಾಸ್ ರೋಡ್,
ಗಣಪತಿ ನಿವಾಸ,
ಡೊಂಬಿವಲಿ (ಪಶ್ಚಿಮ) - ೪೨೧ ೨೦೨.
ದೂರಧ್ವನಿ : ೦೨೫೧-೨೪೮೬೬೩೪

ಬೆಲೆ : ರೂ. ೨೫೦/- ಮಾತ್ರ (Rs.: 250/- ಮಾತ್ರ)

॥ ಶ್ರೀ ಗಣೇಶಾಯ ನಮಃ ॥
॥ ಜಯ ಶ್ರೀ ರಾಮ ॥

# ಅರ್ಪಣ ಪತ್ರಿಕೆ

ಸಂತ ಸಮರ್ಥ ಶ್ರೀ ರಾಮದಾಸ ಸ್ವಾಮಿಯವರು ಮರಾಠಿ ಭಾಷೆಯಲ್ಲಿ ಬರೆದ,
'ದಾಸಬೋಧ' ಗ್ರಂಥದ ಸಮವೃತ್ತ (ಓವಿಬದ್ಧ) ಕನ್ನಡ ಭಾವಾನುವಾದದ
ಈ ಗ್ರಂಥವನ್ನು ಶ್ರೀ ಸಮರ್ಥರಿಗೇ ಸಮರ್ಪಿಸುತ್ತೇನೆ.

ಶ್ರೀ ಶ್ರೀಕಾಂತ ರಘುನಾಥ ಘಾಟಕ

॥ ಜಯ ಜಯ ರಘುವೀರ ಸಮರ್ಥ ॥

।। श्री राम समर्थ ।।

**।। श्री रामदास स्वामी संस्थान, सज्जनगड ।।**

श्री रामदास स्वामींचा मठ, सज्जनगड, जिल्हा सातारा -४१५०१३ (महाराष्ट्र)
सज्जनगड कार्यालय (०२१६२)२७८२२१, २७८३७५ सातारा कार्यालय (०२१६२) २८२४०१
वेबसाईट www.samartharamdas.com




रघुनाथ स्मरोनि कार्य करावें । तें तत्काळ चि सिध्दी पावे।
कर्ता राम हें असावें। अभ्यांतरी।।

दिनांक:

''जये वेदवेदांत तो बोधियेला।
विवेके विचारे बरा शोधियेला।
तया दासबोधासि बरें वीवरावे।
गुरू रामदासासि आधी भजावे।''

प्रत्येक मनुष्यास आपले जीवन जगताना तीन गोष्टींची जाणीव असणे आवश्यक असते.पहिली म्हणजे मी कशासाठी व का जगायचं आहे,माझ्या जीवनाचं अंतिम ध्येय काय आहे.दुसरी गोष्ट त्या ध्येयाकडे जाण्याचा योग्य मार्ग कोणता व तिसरी गोष्ट तो मार्ग आक्रमत असताना येणारी अनुकुल - प्रतिकुल वळणं व अडथळे यांच्याबाबतीत मार्गदर्शक कोण? श्री समर्थ रामदास स्वामींनी अत्यंत खडतर परिश्रमाने,विवेकी वैराग्य धारण करून घेतलेल्या शुध्द प्रत्ययाने श्रीमत् दासबोध ग्रंथाच्या माध्यमातुन हे समजावुन दिले आहे. व्यक्तीगत जीवनात मनाची धारणा व सामाजिक जीवनात तारतम्य कसे असावे याचे सहजसुलभ मार्गदर्शन करणारा 'श्रीमत् दासबोध' हा खऱ्या अर्थाने भारताकरिता राष्ट्रग्रंथ व विश्वाचा विश्वग्रंथच म्हणावा लागेल.

'स्वाराज्यं च स्वराज्य च रामदास्येन लभ्यते'

आत्मराज्याबरोबरच स्वराज्यप्राप्ती व सुराज्यप्राप्तीही रामदास्याने लाभेल असा बोध देणारा 'दासबोध' हा एकमेवव्दितीय ग्रंथ असल्याने याचा सर्वही प्रांतातील विविध भाषिक समाजाने अभ्यास करणे राष्ट्रहिताचे ठरणार आहे.

याबाबतीत स.भ.श्री श्रीकांत फाटक यांनी केलेला श्रीमत् दासबोधाचा समश्लोकी ओवीबध्द कन्नड भावानुवाद हे एक समर्थ राष्ट्रकार्यच होय. श्रीसमर्थांची उपासक व भक्त मंडळी कर्नाटक प्रांतात गोठ्या संख्येने असुन दिवसेंदिवस ही संख्या वाढत आहे.अशा स्थितीत हा कन्नड भावानुवादित दासबोध ही कन्नड भाषिक समर्थ भक्तांवरील श्रीसमर्थ कृपाच होय.

श्रीमत् दासबोधातील आत्मदर्शी विचार कन्नड भाषिक भक्तांपर्यंत पोहोचावेत यासाठी हा सेतु बांधण्याचे कार्य स.भ.श्री फाटक यांनी केलेले कार्य श्रीसमर्थ कृपेस पात्र आहे.अशीच श्रीसमर्थ सेवा त्यांनेकडुन घडावी.हीच श्रीसमर्थ चरणी प्रार्थना व पुढील कार्यास आमच्या शुभेच्छा !

।। जय जय रघुवीर समर्थ ।।

आपला विश्वासु,

(सु.ग.स्वामी)
चार्टर्ड अकौंटंट
विश्वस्त
श्री रामदास स्वामी संस्थान,
सज्जनगड

# ಪ್ರಸ್ತಾವನೆ

ಡಾ॥ ವಾಮನ ಬೇಂದ್ರೆ

ನಾರಾಯಣ ಸುರ್ಯಾಜೀ ಠೋಸರ ಜನಿಸಿದ್ದು ೧೬೦೮ರ ರಾಮನವಮಿ. ನಿರ್ವಾಣ ಹೊಂದಿದ್ದು ೧೬೮೧ರ ಮಾಘವದ್ಯ ನವಮಿ. ಸಜ್ಜನಗಡದ ಶ್ರೀರಾಮ ದೇವರ ಸಮ್ಮುಖದಲ್ಲಿ ಭಜನೆ ಮಾಡುತ್ತ, ಮೂರು ಸಲ ರಾಮ ನಾಮದ ಗರ್ಜನೆ ಮಾಡಿ, ಶ್ರೀರಾಮನಲ್ಲಿಯೇ ಐಕ್ಯವಾದರು. ಅವರು ಬದುಕಿದ ಕಾಲಾವಧಿ ಕೇವಲ ಎಪ್ಪತ್ತ ಮೂರು ವರ್ಷ ಮಾತ್ರ. ಅದರಲ್ಲಿ ಪ್ರಾರಂಭದ ಹನ್ನೆರಡು ವರ್ಷ ಬಾಲ್ಯ. ಅನಂತರದ ಹನ್ನೆರಡು ವರ್ಷ ಟಾಕಳಿ ಎಂಬ ಊರಿನಲ್ಲಿ ನಿರ್ಗುಣ ಆತ್ಮಸಾಕ್ಷಾತ್ಕಾರದ ಸಾಧನೆ. ಮುಂದಿನ ಹನ್ನೆರಡು ವರ್ಷ ಅಖಂಡ ಭಾರತ ಪರ್ಯಟನೆ, ಧಾರ್ಮಿಕ ಹಾಗೂ ಸಾಮಾಜಿಕ ಪರಿವರ್ತನೆಯ ಅವಲೋಕನ. ಅರ್ಧ ಆಯುಷ್ಯ ಸತತ ದೈಹಿಕ ಶ್ರಮ ಹಾಗೂ ಅಂತರಂಗದ ಉಪಾಸನೆ ಮಾಡಿ ಸಮರ್ಥರಾದ, ಸಾಕ್ಷೇಪಿ-ಪ್ರಯತ್ನಗಳಿಂದ ಸಮರ್ಥರಾದ ನಾರಾಯಣ ಅವರು 'ಜಯ ಜಯ ರಘುವೀರ ಸಮರ್ಥ' ಎಂಬ ಘೋಷಣೆಯೊಂದಿಗೆ, ರವಿಕುಲ ಭೂಷಣನಾದ ಪ್ರಭು ರಾಮಚಂದ್ರನ ದಾಸರಾಗಿ ಸಂತ ಸಮರ್ಥ ರಾಮದಾಸರಾಗಿ ತಮ್ಮ ಅಲೌಕಿಕವಾದ, ಅನನ್ಯ ಭಕ್ತಿ-ಜ್ಞಾನ ಪ್ರಸಾರದ ಕಾರ್ಯವನ್ನು ಚಾಫಳ ಎಂಬ ಊರಿನಿಂದ ಪ್ರಾರಂಭಿಸಿದರು. ಮಹಾರಾಷ್ಟ್ರದಲ್ಲಿ ಹನ್ನೊಂದು ಮಾರುತಿಯ = ಹನುಮಾನ್ ಮಂದಿರಗಳನ್ನು ಕಟ್ಟಿಸಿ ಮಾರುತಿಯ ಅವತಾರ ಎನಿಸಿಕೊಂಡರು. ಮಹಾರಾಷ್ಟ್ರದಲ್ಲಿ ಸುಮಾರು ನೂರು ಮಠಗಳನ್ನು ಕಟ್ಟಿ, ಮಹಂತರನ್ನು ಮಠಾಧಿಪತಿಗಳನ್ನು ಸಿದ್ಧಪಡಿಸಿದರು. ಅನುಭಾವ ಪಡೆಯುವ ವಿಚಾರ, ತರ್ಕ, ಹಾಗೂ ಪಾಂಡಿತ್ಯಪೂರ್ಣ -ಇಪ್ಪತ್ತು ದಶಕ ಹಾಗೂ ಎರಡನೂರು ಸಮಾಸಉಳ್ಳ ''ದಾಸಬೋಧ'' ಎಂಬ ಗ್ರಂಥವನ್ನು ಹಂತ ಹಂತವಾಗಿ ರಚಿಸುತ್ತ ೧೬೫೯ರಲ್ಲಿ ತಮ್ಮ ಐವತ್ತೊಂದನೆಯ ವರ್ಷ ಪೂರ್ಣಗೊಳಿಸಿದರು.

ಮಹಾರಾಷ್ಟ್ರದ ಸ್ವರಾಜ್ಯ ಸ್ಥಾಪನೆಯ ಶಿಲ್ಪಿ ಶಿವಾಜಿ ಮಹಾರಾಜರು ಭಾರತದ ಹದಗೆಟ್ಟ ಸ್ಥಿತಿಯನ್ನು ಕಂಡು ಮರುಗಿದರು. ಉತ್ತರ ಭಾರತದ ಪೂರ್ವ ಪಶ್ಚಿಮ ಭಾಗಗಳನ್ನು ಕಬಳಿಸಿ ಪಾಕಿಸ್ತಾನ ನಿರ್ಮಾಣ ಮಾಡಿದವರ ಲಕ್ಷ್ಯ ದಕ್ಷಿಣ ಭಾರತದತ್ತ ಹೊರಳಿತು. ಮುಸುಲ್ಮಾನರ ಆಕ್ರಮಣ, ಧರ್ಮಾಂತರ ಬಿರುಗಾಳಿ, ಹಿಂದೂ ಧರ್ಮ ವಿಧ್ವಂಸಗೊಳಿಸುವ ಗುಪ್ತಕಾರ್ಯ ಸತತವಾಗಿ ಸಾಗಿತ್ತು. ಇಂಥ ಈ ಗಂಡಾಂತದ ಕಾಲದಲ್ಲಿ ಸಮರ್ಥಯೋಗಿ ರಾಮದಾಸರು ಲೌಕಿಕರಲ್ಲಿ ಆತ್ಮಶಕ್ತಿ ಜಾಗೃತ ಪಡಿಸುವ ಮಾರ್ಗವನ್ನು ಸಂಶೋಧಿಸಿದರು. ಆ ಸಂಶೋಧನೆಯ ಮೊದಲ ಫಲ ಕೇವಲ ಏಳು ಸಮಾಸಗಳುಳ್ಳ ದಾಸಬೋಧ. ಅನಂತರ ಅದಕ್ಕೇ ಎಂಟನೆಯ ಜ್ಞಾನ-ದಶಕ ಎಂಬ ಅಧ್ಯಾಯದ ಸೇರ್ಪಡೆ ಆಯಿತು. ರಾಮದಾಸರ ವಿಭೂತಿ ಮತ್ವದ ಅರಿವನ್ನು ಜನರಲ್ಲಿ ಬಿತ್ತುವಾಗ, ವಿಪುಲವಾದ ಭಕ್ತಿ ಸಂಪ್ರದಾಯದ ಸಾಹಿತ್ಯವನ್ನು ರಚಿಸುತ್ತ ತಮ್ಮ ವಿಚಾರಗಳನ್ನು ೧) ಉಪನ್ಯಾಸ ೨) ಅಭಂಗ ಗೇಯ ಗೀತ ೩) ಭಜನೆಗಳಿಂದ ಶ್ರೀಮಂತಗೊಳಿಸುತ್ತ ಸಾಗಿದರು. ಈ ಅವಧಿಯಲ್ಲಿ ಮುಂದಿನ ಹನ್ನೆರಡು ದಶಕಗಳ ಸೃಷ್ಟಿ ಆಯಿತು. ರಾಮದಾಸರ ಪ್ರಬಲ ಶಿಷ್ಯ, ಕಲ್ಯಾಣ ಲೇಖನಿಕನಾಗಿ ಎಲ್ಲವನ್ನೂ ಬರೆದುಕೊಳ್ಳುತ್ತಿದ್ದ. ೧೬೫೯ ರಲ್ಲಿ ತಮ್ಮಿಂದ ಸೃಷ್ಟಿಯಾದ ಭಕ್ತಮಾರ್ಗ ಪ್ರಚಾರದ ಪ್ರೌಢ ವಿದ್ವತ್ ಪೂರ್ಣ ''ದಾಸಬೋಧ'' ಇಪ್ಪತ್ತು ದಶಕ ಹಾಗೂ ಎರಡನೂರು ಸಮಾಸಗಳಾಗಿ ಸುವ್ಯವಸ್ಥಿತವಾಗಿ ಪರಿಷ್ಕರಿಸಲಾಯಿತು. ಎಲ್ಲ ಮಠಗಳಲ್ಲಿ ಇದರ ಪ್ರಚಾರವಾಗಿ ಅನೇಕ ಪಾಠಾಂತರಗಳಿಗೆ ಎಡೆ ಆಯಿತು. '' ದಾಸಬೋಧ'' ವೆಂದರೆ ಭಕ್ತಿ ಪಂಥದ ಮಹಾರಾಷ್ಟ್ರದ ಮೌಲಿಕ ಗ್ರಂಥವಾಗಿ ಕೀರ್ತಿ ಪಡೆಯಿತು. ''ವ್ಯಾಸೋಚ್ಛಿಷ್ಟಂ ಜಗತ್ ಸರ್ವಂ'' ಎಂಬಂತೆ ಮಹಾರಾಷ್ಟ್ರದಲ್ಲಿ ದಾಸಬೋಧಕ್ಕೆ ಅಗ್ರಸ್ಥಾನ ಲಭಿಸಿತ್ತು. ಸಾತಾರಾ ಜಿಲ್ಲೆಯ ಸಜ್ಜನಗಡದಲ್ಲಿ ಭವ್ಯವಾದ ರಾಮಮಂದಿರವಾಗಿ ರಾಮಭಕ್ತಿ ಬೆಳೆಯುತ್ತ ಹೋಯಿತು. ಇದರ ಬೆಳಕು ಕರ್ನಾಟಕದ ರಾಮಭಕ್ತರಲ್ಲಿ ''ದಾಸಬೋಧ'' ಗ್ರಂಥದ ಆಕರ್ಷಣೆ ಉಂಟಾಯಿತು. ಇದರಲ್ಲಿ ವ್ಯಕ್ತಿಧರ್ಮ, ಸಾಮಾಜಿಕ ಧರ್ಮದ ಸಮನ್ವಯ ಸಾಧಿಸಲಾಗಿತ್ತು. ಆತ್ಮ ದರ್ಶನ, ಆತ್ಮವಿಕಾಸ, ಆತ್ಮಸಾಕ್ಷಾತ್ಕಾರ, ಸ್ವರೂಪ ಸಾಕ್ಷಾತ್ಕಾರ ಮಾಡಿಕೊಳ್ಳ ಬಯಸುವವರಿಗೆ ಖಚಿತವಾದ ಮಾರ್ಗದರ್ಶನವಿತ್ತು.

ಸಾಮಾಜಿಕ ಸಂಘಟನೆ ಹಾಗೂ ಸಮಾಜಾಭಿವೃದ್ಧಿಯ ದಿಕ್ ದರ್ಶನವಿತ್ತು.

ಅತಿ ಪ್ರಚಾರ ಪಡೆದ 'ದಾಸಬೋಧ'ವನ್ನು ಶಂಕರ ಶ್ರೀ ಕೃಷ್ಣ ದೇವ ಎಂಬ ವಿದ್ವಾಂಸರು ೧೯೦೫ರಲ್ಲಿ ಪರಿಷ್ಕಾರಗೊಳಿಸಿ ಒಂದ ನೂರಾ ಹತ್ತು ಪುಟದ ವಿಸ್ತಾರವಾದ ಪ್ರಸ್ತಾವನೆ ಬರೆದರು. ಅದರ ಕೊನೆಗೆ 'ದಾಸಬೋಧ' ಕುರಿತು ಆದ ಕಾರ್ಯವನ್ನು ೧) ಲೇಖನ ಸೂಚಿ ೨) ವೃತ್ತ ಪತ್ರಿಕೆಗಳ ಆಕರ ಸೂಚಿ ೩) ವ್ಯಾಖ್ಯಾನಗಳ ಸೂಚಿ ೪) ರಾಷ್ಟ್ರೀಯ ಶಿಕ್ಷಕರ ಸೂಚಿ ೫) ಕೀರ್ತನಕಾರರ ಸೂಚಿ ೬) ದಾಸಬೋಧ ಅಭ್ಯಾಸ ಮಾಡಿದ ದೇಶ ಭಕ್ತ ಹಾಗೂ ವಿದ್ಯಾರ್ಥಿಗಳ ಸೂಚಿ ಜೋಡಿಸಲಾಗಿದೆ. ಇದರ ಅರ್ಥ ಮಹಾರಾಷ್ಟ್ರದ ಆ ಕಾಲದ ಉಪನ್ಯಾಸಕರು, ಶಿಕ್ಷಕರು, ಸ್ವಯಂಸೇವಕರು, ಮಹಂತರು, ಕೀರ್ತನಕಾರರು, ದೇಶಭಕ್ತರು, ಭಾರತ ರಾಷ್ಟ್ರ ಭಕ್ತಿಯ ಪ್ರಚಾರಕರೂ ''ದಾಸಬೋಧ'' ಆಕರ ಗ್ರಂಥವಾಗಿ ಅವತರಣಿಕೆಗಳ ಉದಾಹರಣೆಗಳಾಗಿ ಬಳಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಜನಪ್ರಿಯತೆಯ ಮೂಲಕ ಲೋಕ ಸಂಗ್ರಹಕ್ಕೆ ಈ ಗ್ರಂಥ ಸಹಾಯಕವಾಗುತ್ತಿತ್ತು. ಪ್ರತಿಯೊಂದು ರಾಮ ಹಾಗೂ ಹನುಮಾನ ದೇವಸ್ಥಾನಗಳಲ್ಲಿ ಇದರ ಪಾರಾಯಣ ಹಾಗೂ ಇದನ್ನು ಕುರಿತು ಕೀರ್ತನೆಗಳು ನಡೆಯ ತೊಡಗಿದವು. ಮಹಾರಾಷ್ಟ್ರ ಹಾಗೂ ಕರ್ನಾಟಕದ ಸಂಸ್ಥಾನಿಕರೂ 'ರಾಮಜಯಂತಿ' ಉತ್ಸವದಲ್ಲಿ ಈ ಗ್ರಂಥ ಕುರಿತು ಕಾರ್ಯಕ್ರಮ ನಡೆಸುತ್ತಿದ್ದರು.

೧೮೪೫ ರಲ್ಲಿ ಜನಿಸಿದ ಗೋಂದವಲೇಕರ ಬ್ರಹ್ಮಚೈತನ್ಯ ಮಹಾರಾಜರ ಮೂಲಕ ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲೂ ರಾಮಭಕ್ತಿ ಬೆಳೆಯುತ್ತ ಹೋಯಿತು. ಬ್ರಹ್ಮಚೈತನ್ಯರ ಪಟ್ಟ ಶಿಷ್ಯರಾದ ಬ್ರಹ್ಮಾನಂದ ಸ್ವಾಮಿಗಳ ಮೂಲಕ ಕರ್ನಾಟಕದಲ್ಲಿ ರಾಮಭಕ್ತಿ ಜನಪ್ರಿಯವಾಯಿತು. ಅಧ್ಯಾತ್ಮದ ಹಾದಿಯಲ್ಲಿದ್ದವರಿಗೆಲ್ಲ ''ದಾಸಬೋಧ'' ಆಧಾರ ಗ್ರಂಥವಾಗಿ ಬಿಟ್ಟಿತ್ತು. ಇದರ ಪ್ರಮುಖ ಪರಿಣಾಮ ವಿಜಾಪೂರ ಜಿಲ್ಲೆಯ ನಿಂಬರಗಿಯ ನಿಂಬರಗೀಕರ ಮಹಾರಾಜ, ಉಮದಿಯ-ಭಾವು ಸಾಹೇಬ ಮಹಾರಾಜ ಇವರ ಮೇಲಾಯಿತು. ರಾಮದಾಸೀ ಸಂಪ್ರದಾಯವೇ ಸೃಷ್ಟಿ ಆಯಿತು. ಕನ್ನಡ ಮರಾಠಿ ದ್ವಿಭಾಷಾ ಪರಿಣತರಾಗಿದ್ದ 'ರಾಮದಾಸಿ'ಗಳು ರಾಮಭಕ್ತಿ ಕುರಿತು ಪ್ರವಚನ ಮಾಡುವವರು ಅವರವರಿಗೆ ಲಭ್ಯವಿದ್ದ ''ದಾಸಬೋಧ'' ಗ್ರಂಥ ಆಧರಿಸಿ, ಉಪನ್ಯಾಸ ಮಾಡ ತೊಡಗಿದರು. ಜಮಖಂಡಿಯ ಗುರುದೇವ ರಾನಡೆ ಹಾಗೂ ಸೊಲ್ಲಾಪುರದ ಪೂಜ್ಯ ಪ್ರಭಾಕರ ಸ್ವಾಮಿಗಳೂ ಪ್ರಾರಂಭದಲ್ಲಿ ಉಮದಿಯ ಭಾವು ಸಾಹೇಬರ ''ದಾಸಬೋಧ'' ಪ್ರವಚನ ಕೇಳಿದವರು. ತಮ್ಮ ತಮ್ಮ ರೀತಿಯಲ್ಲಿ ದಾಸಬೋಧ ಕುರಿತು ಪ್ರವಚನ ಮಾಡುತ್ತಿದ್ದರು. ಈ ಗ್ರಂಥ ಪಂಡಿತ ಹಾಗೂ ಪಾಮರರಲ್ಲಿ ಮನ್ನಣೆ ಪಡೆದ ಆರಾಧನೆಯ ಗ್ರಂಥವಾಯಿತು.

ಇದನ್ನು ತಿಳಿಸಿಕೊಡುವುದಕ್ಕಾಗಿ ಸಾಹಿತ್ಯ ಅಭ್ಯಾಸ ಮಾಡಿದ ಪ್ರಾಧ್ಯಾಪಕರು ಸಂಶೋಧನೆ ಪ್ರಾರಂಭಿಸಿದರು. ಸಾಧು ಸಂತರ ದಾಸಾನುದಾಸ ಎಂದೇ ಪ್ರಸಿದ್ಧರಾದ ಲಕ್ಷ್ಮಣ ರಾಮಚಂದ್ರ ಪಾಂಗಾರಕರ ಅವರು ೧೯೨೩ರಲ್ಲಿ ಕಲ್ಯಾಣಸ್ವಾಮಿ ಹಸ್ತಲಿಖಿತ – ಡೋಮಗಾವ ಪ್ರತಿ ಹಾಗೂ ನಾರಾಯಣಗಾವದ ದತ್ತಾತ್ರೇಯ ಸ್ವಾಮಿ ಹಸ್ತ ಪ್ರತಿಗಳ ಅಭ್ಯಾಸಮಾಡಿ ''ದಾಸಬೋಧ'' ಶುದ್ಧ ಪ್ರತಿಯ ಪ್ರಥಮ ಮುದ್ರಣ ಪ್ರಕಟ ಪಡಿಸಿದರು. ಹೀಗಾಗಿ 'ದಾಸಬೋಧ' ದ ಅನೇಕ ಆವೃತ್ತಿಗಳು ಉಪಲಬ್ಧ. ಪ್ರಾ. ನ.ರ. ಫಾಟಕ ವಿಶ್ವಕೋಶಕಾರ ಲಕ್ಷ್ಮಣ ಶಾಸ್ತ್ರಿ ಜೋಶಿ, ಪ್ರಾ ಕೇಶವ ವಿಷ್ಣು ಬೆಲಸರೆ ಮೊದಲಾವರು 'ದಾಸಬೋಧ' ಕುರಿತು ವಿದ್ವತ್ ಪೂರ್ಣ ಗ್ರಂಥ ರಚಿಸಿದ್ದಾರೆ. ಸಜ್ಜನಗಡದ ಮಠದವರು ಪ್ರಕಟಿಸಿದ ಪ್ರಾ. ಬೆಲಸರೆ ಅವರ ಶ್ರೀಮತ್ ದಾಸಬೋಧ' ಈಗ ಎಲ್ಲರಿಂದ ಆಧಾರ ಗ್ರಂಥವಾಗಿ ಮನ್ನಣೆ ಪಡೆದಿದೆ. 'ದಾಸಬೋಧ'ದ ಸಂಗ್ರಹ, ಕನ್ನಡ ಅನುವಾದ, ವಿವರಣ ಗ್ರಂಥ ಕನ್ನಡ ಹಾಗೂ ಮರಾಠಿಯಲ್ಲಿ ವಿಪುಲವಾಗಿ ಪ್ರಕಟಗೊಂಡಿದೆ. ಪ್ರತಿವರ್ಷವೂ ಪ್ರಕಟಗೊಳ್ಳುತ್ತಲೆ ಇವೆ. ವಿಜಾಪೂರ ಜಿಲ್ಲೆಯ ಕನ್ನೂರಿನ ಶ್ರೀ ಗಣಪತ ಮಹಾರಾಜ ಅವರು 'ದಾಸಬೋಧ'ದ ಗದ್ಯಾನುವಾದವನ್ನು ೧೯೬೭ರಲ್ಲಿ ಪ್ರಕಟಪಡಿಸಿದ್ದೂ ಜನಪ್ರಿಯವಾಗಿದೆ. ೧೯೯೦ರವರೆಗೆ ಇದರ ನಾಲ್ಕು ಮುದ್ರಣಗಳಾಗಿವೆ. ಕರ್ನಾಟಕದಲ್ಲಿ ಧಾರವಾಡ ಜಿಲ್ಲೆಯ

ರೋಣ ತಾಲೂಕಿನ – ಮೆಣಸಗಿ ಗ್ರಾಮದ ಪಾಂಡುರಂಗ ತಮ್ಮಾಜಿ ಕುಲಕರ್ಣಿಯವರು ೧೯೫೪ರಲ್ಲಿ ಪ್ರಾ. ಬೆಲಸರೆ ಅವರ ಮೂಲ ಮರಾಠಿ, 'ದಾಸಬೋಧ' ಹಾಗೂ ಅದರ ಗದ್ಯಾನುವಾದ ಉಳ್ಳ ಸುಮಾರು ಒಂಭತ್ತು ನೂರು ಪುಟದ ಗ್ರಂಥ ಪ್ರಕಟಿಸಿದ್ದಾರೆ. 'ದಾಸಬೋಧ' ಕುರಿತು ಮರಾಠಿ ಹಾಗೂ ಕನ್ನಡದಲ್ಲಿ ಪ್ರಕಟಗೊಂಡಿರುವ ಗ್ರಂಥಗಳನ್ನೇ ಕುರಿತು ಸ್ವತಂತ್ರ ಅಭ್ಯಾಸ ಮಾಡಬಹುದು.

ಸಜ್ಜನಗಡದ ಮಠದವರು 'ದಾಸಬೋಧ' ಅಭ್ಯಾಸವನ್ನು ಪತ್ರಗಳ ಮೂಲಕ, ಅಭ್ಯಾಸ ವರ್ಗ ಹಾಗೂ ಅಭ್ಯಾಸ ಶಿಬಿರಗಳನ್ನು ಏರ್ಪಡಿಸಿ ಮಹಾರಾಷ್ಟ್ರದಲ್ಲಿ ಒಂದು ಹೊಸ ಅಭಿರುಚಿಯನ್ನು ಸೃಷ್ಟಿಸಿದರು. ಇದಕ್ಕಾಗಿ ಮೂರು ಪಠ್ಯಗ್ರಂಥ ಪ್ರಕಟಗೊಂಡವು. ಅವುಗಳನ್ನು ಪ್ರಚಾರಮಾಡುವ ಪ್ರಬೋಧಕರು, ಪರೀಕ್ಷೆಗಳನ್ನು ಏರ್ಪಡಿಸಿ 'ದಾಸಬೋಧ' ಪರಿಣತರನ್ನು ಸಿದ್ಧಪಡಿಸ ತೊಡಗಿದರು. ಇದನ್ನೆ ಆಧರಿಸಿ ಗದಗಿನ ಡಾ। ಅರವಿಂದ ಚಾಫೇಕರ ಅವರು೧೯೫೨ರಿಂದ ಮರಾಠಿ ವಾಙ್ಮಯ ಪ್ರೇಮಿ ಮಂಡಲದಿಂದ ಪತ್ರಗಳ ಮೂಲಕ ದಾಸಬೋಧ ಶಿಕ್ಷಣ ಪ್ರಚಾರಕ್ಕಾಗಿ ಮೂರು ಪಠ್ಯ ಪುಸ್ತಕಗಳ ಕನ್ನಡ ಗದ್ಯಾನುವಾದ ಪ್ರಕಟ ಪಡಿಸಿದರು. ರಾಮದಾಸ ಬದುಕು ಬರಹ ಕುರಿತು ಮಹಾರಾಷ್ಟ್ರ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಮಹಾ ಪ್ರಬಂಧಗಳೂ ಪ್ರಕಟಗೊಂಡಿವೆ. ಕಳೆದ ಹದಿಮೂರು ವರ್ಷಗಳಿಂದ 'ಸಮರ್ಥ ಸಂದೇಶ' ಕನ್ನಡ ಪತ್ರಿಕೆ ಹಾಗೂ ಒಂಭತ್ತು ವರ್ಷಗಳಿಂದ 'ಸ್ವರೂಪಯೋಗ' ಎಂಬ ಮರಾಠಿ ಪತ್ರಿಕೆ ಅಧ್ಯಾತ್ಮ ಪ್ರೀತಿ, ಅಧ್ಯಾತ್ಮ ಸಾಧನೆ, ಆಧ್ಯಾತ್ಮಿಕ ಮನೋವೃತ್ತಿ ಬೆಳೆಸುವ ಪ್ರಯತ್ನ ಮಾಡುತ್ತಿವೆ. ಈ ಪತ್ರಿಕೆಗಳಲ್ಲಿ ಇಂದಿಗೂ 'ದಾಸಬೋಧ' ಕುರಿತು ಲೇಖನ ಪ್ರಕಟವಾಗುತ್ತಲೆ ಇವೆ.

೧೬೫೯ ರಿಂದ ೨೦೦೬ ರ ವರೆಗೆ ಸತತವಾಗಿ ಮೂರು ನೂರಾ ನಲವತ್ತೇಳು ವರ್ಷ ಜನಪ್ರಿಯವಾಗಿ, ಸತತವಾಗಿ ಅಭ್ಯಾಸ ನಡೆದಿರುವ ಗ್ರಂಥ ''ದಾಸಬೋಧ''! ಇಂಥ ಈ ಗ್ರಂಥದ ಅನುವಾದವನ್ನು ಸಮವೃತ್ತ ಪದ್ಯ ರೂಪದಲ್ಲಿ ಪರಿವರ್ತಿಸುವ ಸಾಹಸ ಯಾರೂ ಮಾಡಿರಲಿಲ್ಲ. ಏಕೆಂದರೆ ಇದು ಅತ್ಯಂತ ಕಷ್ಟದ ಕೆಲಸ. ಧಾರವಾಡದ ಹೆಬ್ಬಳ್ಳಿಯ ಮಠದ ದತ್ತಾವಧೂತರು ಕಳೆದ ೨೫ ವರ್ಷಗಳಿಂದ ಬ್ರಹ್ಮಚೈತ್ಯನ್ಯ ಮಹಾರಾಜರಿಗೆ ತಮ್ಮ ಜೀವನವನ್ನು ಸಮರ್ಪಿಸಿಕೊಂಡು, ಅಧ್ಯಾತ್ಮ ಮಾರ್ಗದಲ್ಲಿ ಸಾವಿರಾರು ಜನರಿಗೆ ಮಾರ್ಗದರ್ಶಕರಾಗಿ, ರಾಮೋಪಾಸನೆಯ ತಾರಕಮಂತ್ರದ ಉಪದೇಶದ ಅನುಗ್ರಹ ಪಾಲಿಸುತ್ತ, ಪ್ರಾ. ಕೆ. ವಿ. ಬಲಸರೆ ಯವರು ಬರೆದ ಎಲ್ಲ ಪ್ರೌಢ ಗ್ರಂಥಗಳ ಕನ್ನಡ ಅನುವಾದ ಮಾಡುತ್ತ, ಮಹಾರಾಷ್ಟ್ರದ ಪಾರಾಯಣ ಗ್ರಂಥಗಳಾದ ''ಗುರುಚರಿತ್ರೆ'' ಹಾಗೂ ''ಜ್ಞಾನೇಶ್ವರಿ'' ಅನುವಾದ ಪ್ರಕಟಿಸುತ್ತ ಜನಪ್ರಿಯಗೊಳಿಸಿದ್ದಾರೆ. ಇಂಥ ಸಮರ್ಥರಿಂದ ಸಮವೃತ್ತ ಪದ್ಯರೂಪದಲ್ಲಿ 'ಜ್ಞಾನೇಶ್ವರಿ' ಹಾಗೂ ''ದಾಸಬೋಧ' ಪ್ರಕಟಗೊಳ್ಳುತ್ತಿರುವುದು ಒಂದು ರೀತಿಯಲ್ಲಿ ಆಶ್ಚರ್ಯದ ಮಾತಲ್ಲ. ಏಕೆಂದರೆ ಅಧ್ಯಾತ್ಮ ಮಾರ್ಗದಲ್ಲಿ ಅಧಿಕಾರಿ, ಅನುಗ್ರಹ ಸಮರ್ಥರಿಗೆ ಇದೆಲ್ಲ ದೈವದತ್ತಕಾರ್ಯ. ತಮ್ಮ ಸಮಗ್ರ ಜೀವನವನ್ನೇ ಅಧ್ಯಾತ್ಮಕ್ಕೆ ಸಮರ್ಪಿಸಿಕೊಂಡವರು ಇವರು.

ಈ ಹಿನ್ನೆಲೆಯಲ್ಲಿ ಶ್ರೀ ಶ್ರೀಕಾಂತ ರಘುನಾಥ ಘಾಟಕ ಅವರು ಮಾಡಿದ ''ದಾಸಬೋಧ'' ಗ್ರಂಥದ ಪದ್ಯ ಅನುವಾದ ಗ್ರಂಥದ ಮಹತಿ ಅಚ್ಚರಿಯನ್ನು ಉಂಟುಮಾಡುತ್ತದೆ. ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ಮ್ಯಾಟ್ರಿಕ್‌ವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತವರು. ಇವರಿಗೆ ಕನ್ನಡ ಭಾಷೆ ಕಲಿಸಿದ ಶಿಕ್ಷಕರು ಪುಣ್ಯವಂತರು. ಕನ್ನಡ ಭಾಷೆಯ ಶುದ್ಧಿಯನ್ನು ಕಾಪಾಡಿಕೊಂಡು, ಮಹಾರಾಷ್ಟ್ರದ ಕಲ್ಯಾಣದಲ್ಲಿದ್ದು, ಮುಂಬೈ ಮಹಾನಗರ ಪಾಲಿಕೆಯಲ್ಲಿ ಉಪ ಪ್ರಮುಖ ಲೇಖಾ ಪಾಲ (ಶಿಕ್ಷಣ) ಎಂದೇ ಜೀವನ ವೃತ್ತಿ ಸಾಗಿಸಿ ನಿವೃತ್ತರಾದವರು. ಆದರೆ ಇವರ ಹುಟ್ಟುಗುಣ ಸಾಹಿತ್ಯ ಹಾಗೂ ಸಂಗೀತ ಉಪಾಸನೆ. ಕನ್ನಡ ಹಾಗೂ ಮರಾಠಿ ಭಾಷೆಗಳಲ್ಲಿ ಪರಿಣತಿಯನ್ನು ಸಾಧಿಸಿ, ಆಳವಾಗಿ ಎಲ್ಲ ಪ್ರಕಾರದ ಸಾಹಿತ್ಯವನ್ನು ಅಭ್ಯಸಿಸುತ್ತ 'ಅಪ್ರಮೇಯ' ಹಾಗೂ 'ಮಹಾರುದ್ರ' ಎಂಬ ಕಾದಂಬರಿಗಳನ್ನು ಪ್ರಕಟ ಪಡಿಸಿ, ಒಬ್ಬ 'ಕಾದಂಬರಿ ಕಾರ'ರೆಂದು ಸಾಹಿತ್ಯಲೋಕ ಪ್ರವೇಶಿಸಿದರು. ಅನಂತರದ ಕಾಲದಲ್ಲಿ ಕನ್ನಡ ಹಾಗೂ ಮರಾಠಿ ಭಾವ ಗೀತಗಳ ಗಾಯಕರೆಂದು ಪ್ರಚಾರ ಪಡೆದರು. ಇದರ ಜೊತೆಗೆ ಸಂತ

ವಾಙ್ಮಯ ಕುರಿತು ಮರಾಠಿ ಹಾಗೂ ಕನ್ನಡದಲ್ಲಿ ಪರಿಣಾಮಕಾರಿಯಾಗಿ ಉಪನ್ಯಾಸ ಮಾಡುವುದನ್ನೂ ಬೆಳೆಸಿಕೊಂಡರು. ವಾದಿ, ವಾಗ್ಮಿ ಹಾಗೂ ಗಮಕಿ ಎಂಬ ಪ್ರಖ್ಯಾತಿ ಪಡೆದ ಘಾಟಕ ಅವರು ತಮ್ಮ ಜೀವನವನ್ನು ಸಂತ ವಾಙ್ಮಯ ಸೇವೆಗೆ ಅರ್ಪಿಸುವುದಾಗಿ ನಿರ್ಣಯಿಸಿ ಕನ್ನಡ ಹಾಗೂ ಮರಾಠಿ ಭಾಷೆಯ ಶಬ್ದಕೋಶ, ವ್ಯಾಕರಣ, ಛಂದಸ್ಸು, ಅಲಂಕಾರ ಶಾಸ್ತ್ರಗಳನ್ನು ಅಭ್ಯಸಿಸಿ, ಪರಿಣತರಾಗಿ ಮರಾಠಿಸಂತ ವಾಙ್ಮಯವನ್ನು ಕನ್ನಡಿಗರಿಗೆ ಪರಿಚಯಿಸುವ ವ್ಯವಸ್ಥಿತ ಕಾರ್ಯ ಪ್ರಾರಂಭಿಸಿದ್ದು ೧೯೯೭ರಲ್ಲಿ. ಘಾಟಕ ಅವರು ಅವರ ೧) 'ಸಂತ ತುಕಾರಾಮ, ನಾಮದೇವರ ಜನಪ್ರಿಯ ಅಭಂಗಗಳನ್ನು ಮೂಲ ಮರಾಠಿ ಹಾಗೂ ಸಮವೃತ್ತ ಪದ್ಯದಲ್ಲಿ ಕನ್ನಡ ಅನುವಾದ ಮಾಡಿಕೊಂಡೇ ನನಗೆ ೧೯೯೭ ರಲ್ಲಿ ಭೇಟ್ಟಿಯಾದರು. ಮೊದಲ ಭೆಟ್ಟಿ. ಅವರು ಅಭ್ಯಾಸ ಮಾಡುವ ರೀತಿ, ಸಂತರ ಸಮಗ್ರ ಚರಿತ್ರೆಯನ್ನು ಅರಿತುಕೊಂಡು ಲೇಖನ ಬರೆಯುವ ಪ್ರವೃತ್ತಿ, ಹಾಗೂ ಗ್ರಂಥ ರೂಪದಲ್ಲಿ ಪ್ರಕಟಿಸುವ ಧೈರ್ಯ ಮೆಚ್ಚಿಕೊಂಡೆ. ಅವರು ಮಾಡುವ ಕನ್ನಡ ಅನುವಾದದಲ್ಲಿಯ ಭಾಷಾ ಶುದ್ಧಿ, ಸ್ಪಷ್ಟತೆ, ಸರಳತೆ, ಮೊದಲಾದ ಸಾಹಿತ್ಯಗುಣ ನನಗೆ ಬೆರಗು ಗೊಳಿಸಿದವು. ಘಾಟಕ ಅವರಿಗೆ ಕರ್ನಾಟಕ- ಬೈಲಹೊಂಗಲ, ಗದಗ, ಹುಬ್ಬಳ್ಳಿ ಹಾಗೂ ಮಹಾರಾಷ್ಟ್ರದ ಕಲ್ಯಾಣದ ಸುತ್ತಮುತ್ತ ಸಾಹಿತ್ಯ ಪ್ರಿಯ, ಲೇಖಕ ಹಾಗೂ ಸ್ನೇಹಿತರ ಬಳಗ ಸಾಕಷ್ಟು ಉಂಟು. ಸಂಘಟನಾ ಚಾತುರ್ಯ ಉಳ್ಳ ಇವರು ತಮ್ಮ ಪ್ರಥಮ ಪುಷ್ಪ ಪ್ರಕಟಿಸುವಲ್ಲಿ ಸಫಲರಾದರು. ಅದೇ ರೀತಿ ಅವರು ೨) ಸಮಥ ರಾಮದಾಸರ ಭಕ್ತಿ ರಚನೆಗಳ ಸಮವೃತ್ತ ಪದ್ಯ ಕನ್ನಡ ಅನುವಾದ ಹಾಗೂ ೩) ಜ್ಞಾನೇಶ್ವರ-ಏಕನಾಥರ ಹಾಗೂ ಇನ್ನುಳಿದ ಇಪ್ಪತ್ತೆರಡು -ಮರಾಠಿ ಸಂತರ ಭಕ್ತಿ ರಚನೆಗಳ ಸಮವೃತ್ತ ಕನ್ನಡ ಅನುವಾದವನ್ನೂ ನಾಲ್ಕು ಭಾಗಗಳಲ್ಲಿ ಪ್ರಕಟಿಸಿದರು. ಇದರ ಮೂಲಕ ಅವರಿಗೆ ಸಮವೃತ್ತ ಪದ್ಯರಚನೆಯ ಕೌಶಲ್ಯ ಸಹಜವಾಯಿತು. ತಮ್ಮ ಅನುವಾದ ಶಕ್ತಿಯ ಬಗ್ಗೆ ಆತ್ಮವಿಶ್ವಾಸವೂ ಸ್ಥಿರವಾಯಿತು. ೨೦೦೦ದಲ್ಲಿ ''ಶ್ರೀ ಬಸವೇಶ್ವರರ ಅಮೃತವಾಣಿಯನ್ನು ಆಕರ್ಷಕವಾಗಿ ಜನ ಸಾಮಾನ್ಯರು ಹಾಗೂ ಪಂಡಿತರು ಮೆಚ್ಚುವಂತೆ ಮರಾಠಿ ಭಾಷೆಯಲ್ಲಿ ಅನುವಾದ ಮಾಡಿ, ಕರ್ಜತದ ಕಪಾಲೇಶ್ವರ ಮಂದಿರದ ಭಕ್ತರಿಂದ ಮನ್ನಣೆ ಪಡೆದರು. ಇದರ ಫಲವಾಗಿ, ಲಿಂಗಾಯತ ಸಮಾಜದವರು ಗ್ರಂಥವನ್ನು ಪ್ರಕಟಪಡಿಸಿದರು. ಈ ಗ್ರಂಥದಲ್ಲಿ ಬಸವಣ್ಣನವರ ಒಂದನೂರಾ ಅರವತ್ತು ವಚನಗಳ ಮರಾಠಿ ಅನುವಾದ ಮಾಡಿದ್ದಾರೆ. ಇದೊಂದು ಮಹತ್ತ್ವದ ಸಿದ್ಧಿ. ಹೀಗಾಗಿ ಕರ್ನಾಟಕ ಶರಣ ಸಾಹಿತ್ಯದ ಕೀರ್ತಿ ಕಲಶರಾಗಿರುವ ಅಲ್ಲಮ ಪ್ರಭು, ಅಕ್ಕಮಹಾದೇವಿ, ಚೆನ್ನ ಬಸವಣ್ಣನವರ ವಚನಗಳನ್ನು ಮರಾಠಿ ಭಾಷೆಯಲ್ಲಿ ಅನುವಾದ ಮಾಡುವ ಕನಸು ಕಾಣುತ್ತಿದ್ದಾರೆ. ಕನಸಿಗೆ ಆತ್ಮವಿಶ್ವಾಸದ ಹುರಿ ಇದೆ. ಎರಡೂ ಭಾಷೆಗಳಲ್ಲಿಯ ಸರಸ ಸಾಹಿತ್ಯ ಪ್ರಕಾರಗಳಾದ ಕಥೆ, ಕಾದಂಬರಿ, ನಾಟಕಗಳನ್ನು ಅನುವಾದ ಮಾಡಿ ಆದಾನ ಪ್ರದಾನ ಸ್ನೇಹಕೀರ್ತಿ ಬೆಳೆಸುವುದು ಒಂದು ಬಗೆಯ ಸಾಹಿತ್ಯ ಸೇವೆಯಾಗುತ್ತದೆ. ಇದರಲ್ಲಿ ಬುದ್ಧಿ ಶುದ್ಧಿಯ ಕಾರ್ಯ ಮಾತ್ರ ಸಾಗುತ್ತದೆ. ಸಂತ ವಾಙ್ಮಯದ ಅನುವಾದ ಸೇವೆ ಆ ಮಾನದಿಂದ ಅತ್ಯಂತ ಕಠಿಣ. ಉಪಾಸನೆಯ ಮನೋಧರ್ಮದವರಿಗೆ ಮಾತ್ರ ಈ ಕಾರ್ಯ ಸಾಧ್ಯ. ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಭಾವ ಶುದ್ಧಿ ಹಾಗೂ ಪವಿತ್ರೀಕರಣ ಕಾರ್ಯ, ಸಾಮರಸ್ಯ ಭೂಮಿಕೆಯನ್ನು ಸಿದ್ಧಪಡಿಸುವ ಕಾರ್ಯ ಮಹಾರಾಷ್ಟ್ರದ ಸಂತರು, ಸಾಧುಗಳು ಹಾಗೂ ಕರ್ನಾಟಕದ ಶರಣರು, ದಾಸರು ಸತತವಾಗಿ ಮಾಡುತ್ತ ಬಂದಿದ್ದಾರೆ. ಘಾಟಕ ಅವರ ಸಾಹಿತ್ಯ ಸೇವೆ ಈ ದೃಷ್ಟಿಯಿಂದ ಮೌಲಿಕ ವಾಗಿದೆ.

ಮೂರನೂರಾ ಐವತ್ತು ವರ್ಷ ಸತತವಾಗಿ ಜನಪ್ರಿಯವಾಗಿದ್ದ, ವಿದ್ವಾಂಸರಿಂದ ಮನ್ನಣೆ ಪಡೆದ 'ದಾಸಬೋಧ' ಮಹಾಗ್ರಂಥದ ಕೀರ್ತಿ ಅಮರ, ಇಂಥ ಭಾಗ್ಯ ಪಡೆಯುವ ಗ್ರಂಥ ವಿರಳ. ಈ ಗ್ರಂಥದ ಸಮವೃತ್ತ ಪದ್ಯ ಅನುವಾದ ಮಾಡುವಲ್ಲಿ ಘಾಟಕ ಅವರು ೨೦೦೪ ರಿಂದ ತೊಡಗಿ ೨೦೦೫ರಲ್ಲಿ ಮುಗಿಸಿ ನನ್ನೊಂದಿಗೆ ಸಂಪರ್ಕ ಪ್ರಾರಂಭಿಸಿದರು. ಇವರ ಗಟ್ಟಿಗತನ ನೋಡಿ ನನಗೆ ಆಶ್ಚರ್ಯ ಹಾಗೂ ಆನಂದವಾಯಿತು. ಅನುವಾದದ ಅರ್ಧ ಗ್ರಂಥ ನನ್ನ ಕೈಗೂ ಬಂದಿತು. ಅಭ್ಯಸಿಸಿದಾಗ ಸಮಾಧಾನವಾಯಿತು. ಇಪ್ಪತ್ತೂ ಸಮಾಸಗಳ ಗದ್ಯ ಸಾರಾಂಶವನ್ನೂ ಅವರು ಸಿದ್ಧಪಡಿಸಲಿದ್ದಾರೆ. ಸಾಮಾನ್ಯ ವಾಚಕರಿಗೆ ಇದರಿಂದ ಹೆಚ್ಚಿನ ಲಾಭವಾಗಲಿದೆ.

''ದಾಸಬೋಧ'' ಸುಲಭ ಗ್ರಂಥವಂತೂ ಅಲ್ಲ. ಅಧ್ಯಾತ್ಮದ ರಹಸ್ಯವನ್ನು ಗುರುಶಿಷ್ಯ ಸಂವಾದ ರೂಪದಲ್ಲಿ ಇರುವ ಪ್ರೌಢ ಗ್ರಂಥ. ಈ ಗ್ರಂಥದಲ್ಲಿ ಪಾಂಡಿತ್ಯ ಮತ್ತು ರಹಸ್ಯ ಸುಂದರ ಸಂಗಮವಿದೆ. ಅಂತರಾತ್ಮಾ, ಬಹಿರಾತ್ಮಾ, ಪರಮಾತ್ಮಾ, ದೇವ, ಈಶ, ಭಗವಾನ್, ಸದ್ಗುರು ಮೊದಲಾದವು ಮಹಾರಹಸ್ಯಗಳು ! ಇವುಗಳನ್ನು ಓಳಖಾವೆ =ಗುರುತಿಸಿರಿ ಎನ್ನುತ್ತಾರೆ ಸಮರ್ಥ ರಾಮದಾಸರು. ಗುರುತು ಆದ ಮೇಲೆ ಗುರುತಿಸುವ ಕ್ರಿಯೆ ನಡೆಯುತ್ತದೆ. ಗುರುತು ಮಾಡಿಕೊಡುವವರು ಯಾರು ? ಅವರು ಸದ್ಗುರುಗಳು ! ಸದ್ಗುರುಗಳನ್ನೂ ಗುರುತಿಸಿರಿ ಎಂದೇ ಸಮರ್ಥ ಸೂಚಿಸಿದ್ದಾರೆ. ಇವರ ಗುರುತು ಮಾಡಿಕೊಡುವವರು ಯಾರು? ಪ್ರತಿಯೊಬ್ಬನಲ್ಲಿ ಸದ್ಗುರು ಪಡೆಯುವ -ತಳಮಳ, ವ್ಯಾಕುಲತೆ, ಅಭೀಷ್ಟೆ ಮೊದಲು ಉಂಟಾಗಬೇಕು. ಸದ್ಗುರು ಲಭಿಸುವ ಭಾಗ್ಯವಿದ್ದರೆ ಮಾತ್ರ ತಾವೇ ಗುರುತು ಆಗುತ್ತದೆ. ಬ್ರಹ್ಮಚೈತನ್ಯ -ತುಕಾಮಾಯಿ, ವಿವೇಕಾನಂದ-ರಾಮಕೃಷ್ಣ, ಗುರುಲಿಂಗ ಜಂಗಮ- ಉಮದಿ ಭಾವು ಸಾಹೇಬ ಮೊದಲಾದವರು ಆ ರಹಸ್ಯ ಪಡೆದ ಭಾಗ್ಯವಂತರು. ಸದ್ಗುರುಗಳನ್ನು ಪಡೆದು, ಸಾಧನೆಮಾಡಿ, ಸ್ವರೂಪ ಸಾಕ್ಷಾತ್ಕಾರ, ಆತ್ಮ ಸಾಕ್ಷಾತ್ಕಾರ ಪಡೆಯುವುದು ಒಂದು ಬಗೆಯ ಶ್ರೇಷ್ಠ ಜೀವನ ಪದ್ಧತಿ. ಇದು ಕೇವಲ ಪಂಡಿತರಿಗೆ ಒಪ್ಪಿಗೆಯಾಗುವದಿಲ್ಲ. ಇಂಥವರಿಗೆ ನೂರಾರು ಸಮಸ್ಯೆ. ಆದುದರಿಂದ ''ದಾಸಬೋಧ'' ವು ಸಾಹಿತ್ಯಿಕವಾಗಿ ಶ್ರೇಷ್ಠ ಗ್ರಂಥ ಎಂದು ಪಂಡಿತರು ಒಪ್ಪಿದರೂ ಅವರಲ್ಲಿ ಅನೇಕ ಭಿನ್ನ ಭಿನ್ನ ಅಭಿಪ್ರಾಯಗಳ ಕೋಲಾಹಲವಿದೆ. ಮಹಾರಾಷ್ಟ್ರದಲ್ಲಿಯ ಪಂಡಿತರ ಭಿನ್ನಾಭಿಪ್ರಾಯಗಳನ್ನೆಲ್ಲ ಗಮನಿಸಿ ಜ್ಞಾನಪೀಠ ಪ್ರಶಸ್ತಿ ವಿಜೇತ ವರಕವಿ ದ.ರಾ. ಬೇಂದ್ರೆಯವರು ಅಭ್ಯಸಿಸಿದ ''ದಾಸಬೋಧ''ದಲ್ಲಿ ಒಂದು ಟಿಪ್ಪಣಿ ಬರೆದದ್ದು ಹೀಗೆ –

''ಭಾಂಡತಿ ಭಾರತಾ ಸಾಠಿ । 'ಭಾರತೀ' ಸಾಕ್ಷ ಪಾಹತೇ ॥ ಭಾರತದ ಶ್ರೇಷ್ಠತೆಗಾಗಿ ಪಂಡಿತರು ಸತತವಾಗಿ ಭಿನ್ನಾಭಿಪ್ರಾಯ ಮಂಡಿಸಿ ಜಗಳಾಡುತ್ತಾರೆ. ಇದನ್ನೆಲ್ಲ ಭಾರತಮಾತೆ ಸರಸ್ವತೀ ಸಾಕ್ಷಿಭಾವದಿಂದ ನೋಡುತ್ತಲೇ ಕುಳಿತಿದ್ದಾಳೆ. ಮೌನಿವಾಗಿದ್ದಾಳೆ. ''ಸಾಕ್ಷಿಭಾವ ಕೂಡ ಅಧ್ಯಾತ್ಮ ಸಾಧನೆಯ ಒಂದು ಫಲಶ್ರುತಿ. ಶರಣ, ದಾಸ, ವಾರಕರಿ, ನಾಥ ಮೊದಲಾದ ಸಂಪ್ರದಾಯಗಳ ಬಗ್ಗೆ ಪಂಡಿತರಲ್ಲಿ ಒಮ್ಮತವಾಗುವುದು ಅಸಾಧ್ಯ. ಆ, ಆ ಪಂಥ ಸಾಧಕರಲ್ಲಿಯೂ ಜಗಳಾಟ, ವಿರೋಧಗಳಿವೆ. ಆದರೆ ಸಿದ್ಧರಲ್ಲಿ ಯಾವುದೇ ಬಗೆಯ ಅಂತರವಿಲ್ಲ. ವಯಸ್ಸು, ಜಾತಿ, ಲಿಂಗಮೀರಿ ಸಾಮರಸ್ಯದ ಸಿದ್ಧಿ ಇರುತ್ತದೆ. ಭಾರತದ ಸಾಧು, ಸಂತ, ಸತ್ಪುರುಷರೆಲ್ಲ ಈ ಮಾರ್ಗದವರು. ಈ ಮನೋಭಾವದತ್ತ ಒಲವಿದ್ದವರಿಗೆ ಅಧ್ಯಾತ್ಮ ಗ್ರಂಥದ ಅನುವಾದ ಸಾಧ್ಯವಾಗುತ್ತದೆ. ಘಾಟಕ ಅವರ ಮನೋಭಾವ ಈ ಬಗೆಯದು. ಇವರಿಗೆ ಹುಟ್ಟಾ ಈ ಮನೋಧರ್ಮದತ್ತ ಒಲವಿದೆ. ಇವರು ಸದ್ಗುರುಗಳನ್ನು ಕಂಡ ವಿಷಯ ನನಗೆ ಗೊತ್ತಿಲ್ಲ. ಭಕ್ತಿ ಗ್ರಂಥದ ಅನುವಾದಕ್ಕೆ ಬೇಕಾಗುವಷ್ಟು ಏಕಾಗ್ರತೆಯ ಭಕ್ತರು ಇವರು ಎಂಬುದನ್ನು ನಾನು ಕಂಡಿರುವೆ.

'ದಾಸಬೋಧ' ಮೊದಲನೆಯ ದಶಕದ ಮೊದಲನೆಯ ಸಮಾಸದಲ್ಲಿ ಗ್ರಂಥವು ಎಷ್ಟು ವಿಷಯಗಳ, ಎಷ್ಟು ಮಹಾಗ್ರಂಥಗಳ ಸಾರವಾಗಿದೆ ಎಂಬುದನ್ನು ವಿವರಿಸಲಾಗಿದೆ. ಗುರು–ಶಿಷ್ಯ ಸಂವಾದ ಈ ಗ್ರಂಥದ ಪ್ರಮುಖ ಗುಣ ಎಂದು ಸಾರಲಾಗಿದೆ. ಇದನ್ನು ಅನುಲಕ್ಷಿಸಿ ಘಾಟಕ ಅವರು ತಮ್ಮ ಸಮಗ್ರ ಅನುವಾದದಲ್ಲಿ 'ರೀ', ಹೇಳರಿ ಸ್ವಾಮಿ, 'ರಾಯಾ', 'ಹೇಳಪ್ಪಾ' (೬.೬.೬೦, ೭.೧.೬, ೭.೧.೧೮, ೭.೫.೫; ೭.೬.೨೮ ಮೊದಲಾದ ಕಡೆ ನೋಡಬಹುದು) ಎಂಬ ಪ್ರಯೋಗಮಾಡಿ ಸಂವಾದದ ಲಾಲಿತ್ಯವನ್ನು ಕಾಪಾಡಿದ್ದಾರೆ. ದಶಕ ಎರಡು ಪಢತ ಮೂರ್ಖ ಲಕ್ಷಣ ಎಂದಿದೆ. ಪಢತ ಎಂಬುದರ ಅನುವಾದ ಕಲಿ–ಕಲಿತ; ಪಠನ–ಪಠಿತ=ಪಂಡಿತ ಮೂರ್ಖ ಎಂಬುದಕ್ಕೆ ಸಮಾನವಾಗಿ ಕಲ್ಪಿಸಿದ್ದಾರೆ. ಹೀಗೆಯೆ ಶ್ರೋತಾ = ಶ್ರೋತೆ (ಶಾಲಾ–ಶಾಲೆ); ತಾರಕದಂತೆ ನಾರಕ; ಯದಾ, ಸದಾ ದಂತೆ ಕದಾ; ಅಜಾಣ ಎಂಬುದನ್ನು ಅ ಜಾಣ ಎಂದು ಒಡೆದು ಜಾಣನಲ್ಲದವ; ಇತ್ಯಾದಿ ಕೂಡಿಸಿ ಹೊಸ ಶಬ್ದ ಮಾಡಿಕೊಂಡಿದ್ದಾರೆ. ಹೊಸ ಹೊಸ ಶಬ್ದ ಪ್ರಯೋಗ ಘಾಟಕ ಮಾಡಿಕೊಂಡದ್ದು ಅವರ ಆಳವಾದ ಚಿಂತನ ಹಾಗೂ ಪಾಂಡಿತ್ಯದ ಶ್ರಮದತ್ತ ನಮ್ಮ ಲಕ್ಷ್ಯವನ್ನು ಸೆಳೆಯುತ್ತದೆ. ಘಾಟಕ ಅವರು ವಿಜಾಪೂರ ಕಡೆಯ ಕನ್ನಡದಲ್ಲಿ ಬಳಕೆಯಲ್ಲಿರುವ

ಖೂನ=ಗುರುತು ಎಂಬ ಅರ್ಥದಲ್ಲಿ; ಬೈಲಹೊಂಗಲ ಕನ್ನಡದಲ್ಲಿಯ ಹಣಗಲ= ತೊಂದರೆ; ಮನಗಂಡ=ಸಾಕಷ್ಟು ಎಂಬಂಥ ಪ್ರಯೋಗ ಬಳಸುತ್ತಾರೆ. ಇದರ ಮೂಲಕ ಘಾಟಕ ಅವರ ಅನುವಾದದ ಕನ್ನಡ ಭಾಷೆ ಉತ್ತರ ಕರ್ನಾಟಕದ ಸೊಗಡಿನಿಂದ ತುಂಬಿದೆ. ಮೈಸೂರ, ಬೆಂಗಳೂರು, ಗುಲ್ಬರ್ಗಾದವರಿಗೆ ಈ ಭಾಷೆ ತೊಡಕಿನದಾಗುತ್ತದೆ. ''ದಾಸಬೋಧ''ದ ಅಭಿರುಚಿ ಉಳ್ಳವರಲ್ಲಿ ಸಾಕಷ್ಟು ಜನ ದ್ವಿಭಾಷಾ ಪರಿಣತರು ಹಾಗೂ ಉತ್ತರ ಕರ್ನಾಟಕದವರೇ ಇರುವುದರಿಂದ ಭಾಷೆ ಅಡಚಣೆಯದಾಗುವದಿಲ್ಲ.

''ಯಾವ ಮನುಷ್ಯನಿಗೆ ಚಿತ್ತವನ್ನು ಏಕಾಗ್ರಗೊಳಿಸಲು ಬರುವದಿಲ್ಲವೋ ಅಂಥವನು ಈ ಗ್ರಂಥ ಓದುವ ಗೊಡವೆಗೆ ಹೋಗಬಾರದು. ಅಸ್ಥಿರ ಬುದ್ಧಿಯವನಿಂದ ಇದು ಸಾಧ್ಯವಿಲ್ಲ. ಒಂದು ವೇಳೆ ಓದುವ ಪ್ರಯತ್ನ ಮಾಡಿದರೂ ಸಹ ಅವನಿಗೆ ಗ್ರಂಥಾರ್ಥವು ಸರಿಯಾಗಿ ತಿಳಿಯಲಾರದು ॥ ( ೭-೧-೨೯) ಎಂದು ರಾಮದಾಸರು ಎಚ್ಚರಿಕೆ ಕೊಟ್ಟಿದ್ದನ್ನು ಗಮನಿಸಿದರೆ ಘಾಟಕ ಅವರು ಅನುವಾದಕ್ಕಾಗಿ ಸಾಧಿಸಿದ ಏಕಾಗ್ರತೆಯ ಕಲ್ಪನೆ ಸ್ಪಷ್ಟವಾಗುತ್ತದೆ.

'' ಭಾಷೆಯಲ್ಲಿ ಭೇದ ಇರುವುದು ಸಹಜ. ಆ ಭೇದದಲ್ಲಿಯ ಅರ್ಥ ಒಂದೇ. ಒಂದೇ ಬಗೆಯ ತಿನ್ನುವ ಪದಾರ್ಥ ಎರಡು ತಟ್ಟೆಗಳಲ್ಲಿ ಇಟ್ಟರೆ ರುಚಿ ಭಿನ್ನವಾಗುವುದೇ '' (೭.೧.೪೧) ಎಂದು ಸಮರ್ಥರು ಪ್ರಶ್ನಿಸಿದ್ದಾರೆ. ಕರ್ನಾಟಕ ಹಾಗೂ ಮಹಾರಾಷ್ಟ್ರ ನೆರೆ ಹೊರೆಯ ಪ್ರಾಂತಗಳಾಗಿರುವುದರಿಂದ ಭಿನ್ನತೆ ಹಾಗೂ ರುಚಿ ಸಾಮ್ಯ ಸಹಜ ಗುಣಗಳಾಗಿವೆ. ಘಾಟಕ ಅವರು ರುಚಿ ಸಾಮ್ಯವನ್ನು ಸಾಧಿಸುವುದಕ್ಕಾಗಿ ಬಹಳಷ್ಟು ಶ್ರಮ ಪಟ್ಟಿದ್ದಾರೆ. ಮೂಲ ಮರಾಠಿ ದಾಸಬೋಧವನ್ನು ಕನ್ನಡ ಅನುವಾದ ದಾಸಬೋಧದೊಂದಿಗೆ ಘಾಟಕ ಮುದ್ರಿಸುತ್ತಿಲ್ಲ. (ಹಿಂದಿನ ಎಲ್ಲ ಅನುವಾದ ಗ್ರಂಥಗಳಲ್ಲಿ ಮೂಲವನ್ನೂ ಕನ್ನಡ ಲಿಪಿಯಲ್ಲಿ ಪ್ರತಿ ಗ್ರಂಥದ ಎಡಗಡೆಯ ಪುಟದಲ್ಲಿ ಮುದ್ರಿಸಿದ್ದಾರೆ.) ನನ್ನ ಅಭಿಪ್ರಾಯದಲ್ಲಿ ಇದು ಉತ್ತಮ ನಿರ್ಣಯ. ''ದಾಸಬೋಧ' ವು ಮುಖ್ಯವಾಗಿ ಪ್ರಚೀತಿಯ=ಅನುಭೂತಿಯ ಗ್ರಂಥ. ಅಧ್ಯಾತ್ಮಿಕ ಅನುಭೂತಿ ಸದ್ಗುರುವಿನ ಮಹಾಕೃಪೆಯ ಫಲ. ಘಾಟಕ ಅವರ ಕನ್ನಡ ಅನುವಾದದ ಯಾವುದೇ ಪುಟ ಓದಿದರೆ; ಮೂಲ ಮರಾಠಿ ದಾಸಬೋಧ (ಮರಾಠಿ ಭಾಷೆ ಬಲ್ಲವರಿಗೆ) ಓದಿ ನೋಡಬೇಕು ಎಂಬ ಕುತೂಹಲ ನಿರ್ಮಿಸುವ ಸಾಮರ್ಥ್ಯ ಹರಳುಗಟ್ಟಿದೆ. ಉದಾಹರಣೆ ದಶಕ ೪ ಸಮಾಸ ೯ ಹಾಗೂ ದಶಕ ೫ ಸಮಾಸ ೭ ಪರೀಕ್ಷಿಸಿ ನೋಡಬಹುದು. ಶ್ರೇಷ್ಠ ಮಹಾಕಾವ್ಯಗಳಲ್ಲಿ ಲಕ್ಷ್ಯಾಂಶ=ರಹಸ್ಯಾರ್ಥ= ಧ್ವನಿಗೆ ಮಹತ್ತ್ವ. ಇದನ್ನು ಕುರಿತು ''ಸ್ವ-ಸ್ವರೂಪದ ಅನುಭವಗಳಲ್ಲಿ ಶಬ್ದಗಳ ಕೆಲಸವಿಲ್ಲ (ಅಪ್ರಮುಖ), ಮಾತಿಗೆ ಆಸ್ಪದವಿಲ್ಲ. ಶಬ್ದದ ಆಚೆಗಿರುವಂಥ ಅನುಭವಗಳನ್ನು ಶಬ್ದಗಳಿಂದ ವರ್ಣಿಸಲಿಕ್ಕೆ ಬರುವುದೇ ಇಲ್ಲ. ನಿಃಶಬ್ದದ ಅವಸ್ಥೆಯಲ್ಲಿ ಹೋಗುವುದೇ ಸ್ವ-ಸ್ವರೂಪ ಅನುಭವದ ಮುಖ್ಯ ಲಕ್ಷಣ'' (೯.೨.೨೫) ಎಂದಿದ್ದಾರೆ. ಸಮರ್ಥರು. ಈ ಸ್ಥಿತಿ, ಸಾಧನೆಯ ಸಾತತ್ಯದಿಂದ ಮಾತ್ರ ಸಾಧ್ಯ. ಆ ಸಾಧನೆಯನ್ನು ''ದಾಸಬೋಧ'' ವಿವರಿಸುತ್ತದೆ. ಪ್ರತಿಯೊಬ್ಬನು ತನ್ನ ದೇಹ, ಮನ, ಬುದ್ಧಿ, ಸತ್ತ್ವ, ರಜ, ತಮ ಅಭ್ಯಸಿಸಬೇಕು. ಮೂರ್ಖ ಲಕ್ಷಣ, ಕೆಟ್ಟಗುಣ, ತಪ್ಪುದಾರಿಯತ್ತ ಮನಸ್ಸು ಒಲಿಯದಂತೆ ನಿಗ್ರಹಿಸಬೇಕು. ಆದಿಭೌತಿಕ, ಆಧ್ಯಾತ್ಮಿಕ ಹಾಗೂ ಆದಿದೈವಿಕ ತಾಪಗಳನ್ನು ತಿಳಿದುಕೊಳ್ಳಬೇಕು. ಅಹಂಕಾರದಿಂದ ಬಿಡುಗಡೆ ಹೊಂದಬೇಕು ಎಂದು ರಾಮದಾಸರು ವಿವರಿಸಿದ್ದಾರೆ. ಇವು ಎಲ್ಲ ಸಾಮಾನ್ಯ ಮನುಷ್ಯನಿಗೆ ಅಸಾಧ್ಯ. ಸಾಮಾನ್ಯನು ನಿಸ್ ಸ್ವಾರ್ಥಿಯಾದಾಗ, ಅಂತಃಕರಣ ತಿಳಿದುಕೊಂಡವನಾದಾಗ, ವಿವೇಕ ಸಾಧಿಸಿದಾಗ ಅಸಾಮಾನ್ಯ ಸ್ಥಿತಿಯನ್ನು ಪಡೆಯಬಲ್ಲ. ಇದು ಆಧ್ಯಾತ್ಮಿಕದ ಹಾದಿ. ಸತತ ಪ್ರಯತ್ನದಿಂದ ಇದು ಸಾಧ್ಯ ಎಂಬ ಧೈರ್ಯ ರಾಮದಾಸರು ಕೊಟ್ಟಿದ್ದಾರೆ.

ದಶಕ-೭ ಸಮಾಸ-೯- ಶ್ರವಣ ನಿರೂಪಣೆಯಲ್ಲಿ ಶ್ರೇಷ್ಠ ಗ್ರಂಥದ ವ್ಯಾಖ್ಯೆಯನ್ನು ಸಮರ್ಥರು ಕೊಟ್ಟಿದ್ದು ಹೀಗೆ -'' ಪರಿಶೀಲನೆಯಿಂದ ಮನುಷ್ಯನಲ್ಲಿ ವಿರಕ್ತಿ ಉಂಟಾಗುವುದು. ದೋಷಗಳು ಸುಧಾರಿಸುವವು ಅಧೋಗತಿ

ತಪ್ಪುವುದು'' (೭.೯.೩೨) ಎಂಬ ಮೂರು ಲಕ್ಷಣ ಕೊಟ್ಟಿದ್ದಾರೆ. ಇನ್ನೂ ಅನೇಕ ಲಕ್ಷಣ ಕೊಟ್ಟಿದ್ದಾರೆ. ಇದರ ಫಲ ''ಪತ್ರಧ್ವಾರಾ ದಾಸಬೋಧ'' ಎಂಬ ಶಿಬಿರಗಳಲ್ಲಿ ಭಾಗವಹಿಸುವ ಅನೇಕರು ಅನುಭವಕ್ಕೆ ಬಂದಿದ್ದರಿಂದ ಈ ಕ್ರಮ ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಜನಪ್ರಿಯವಾಗುತ್ತ ಸಾಗಿದೆ.

ದಶಕ -೮ಕ್ಕೆ ಜ್ಞಾನ ದಶಕ ಎಂದು ನಾಮ ಕರಣ ಮಾಡಲಾಗಿದೆ. ಇದರಲ್ಲಿ

'' ನಮ್ಮ ನಿಜವಾದ ''ನಾನು'' ಮತ್ತು ''ಪರಬ್ರಹ್ಮ ವಸ್ತು'' ಮೂಲದಲ್ಲಿ ಒಂದೇ ರೂಪದಲ್ಲಿ ಇರುತ್ತವೆ. ಇದು ಜ್ಞಾನದ ಸ್ಪಷ್ಟಲಕ್ಷಣ'' (೮.೧೦.೮೧)

''ವಿವೇಕದ ಹೊರತಾಗಿ ಎಲ್ಲ ಉಪಾಯಗಳು ವ್ಯರ್ಥ. ವಿವೇಕ ಜಾಗೃತಿ ಒಂದೇ ಉಪಾಯ. ವಿವೇಕ ಮಾಡಿದರೆ ಆತ್ಮ ಸ್ವರೂಪ ಸ್ಥಿತಿಯ ಪ್ರಾಪ್ತಿ''. ನೀವೇ ಇರುವಿರಿ ಎಂಬ ಪ್ರತ್ಯಕ್ಷ ಅನುಭವ ಬರುತ್ತದೆ.'' (೮.೭.೬೫) ಈ ಎರಡೂ ಅವತರಣಿಕೆಗಳು ''ದಾಸಬೋಧ'' ಗ್ರಂಥ ಕೇವಲ ಪಾಂಡಿತ್ಯ ಪ್ರೀತಿಯಿಂದ ಓದುವ ಗ್ರಂಥವಲ್ಲ ಆಧ್ಯಾತ್ಮಿಕ ಸಾಧನೆ ಹಾಗೂ ಅನುಭಾವ ಬೇಕಾದವರ ಅಭ್ಯಸನೀಯ ಗ್ರಂಥ ಎಂದು ಸ್ಪಷ್ಟಪಡಿಸಲಾಗಿದೆ.

''ಅರಿವು ಎಲ್ಲೆಲ್ಲಿ ಕಾಣಿಸುವುದೋ ಅದು ಒಂದೇ. ಅದು ಅಂತಃಕರಣ ಇದನ್ನು ತಿಳಿದುಕೊಳ್ಳಿರಿ, ಗುರುತಿಸಿರಿ' (೧೦.೧.೨೧)

''ಭಗವಂತನೊಂದಿಗೆ ಯಾವ ಭಕ್ತನು ಅನನ್ಯ ಶರಣಾಗತನಾಗುವನೋ ಅವನಿಗೆ ಭಗವಂತನು ಸ್ವತಃ ಮಾರ್ಗದರ್ಶನ ಮಾಡುತ್ತಾನೆ,'' (೧೦.೭.೩೦)''ಷಟ್ ಗುಣ ಐಶ್ವರ್ಯಶಾಲಿ ಭಗವಾನ್'' ಎಂದು ಭಗವಂತನ ಲಕ್ಷಣ ಸಾರಲಾಗಿದೆ. ಜ್ಞಾನ, ಐಶ್ವರ್ಯ, ಯಶಸ್ಸು, ಧರ್ಮ ಶ್ರೀ ವೈರಾಗ್ಯ, ಇವೇ ಈ ಆರು ಗುಣಗಳು ಇವು ಉಳ್ಳವನೇ ಭಗವಂತ. ಭಕ್ತನಿಗೆ ಬೇಕಾದ ಆರು ಶ್ರೇಷ್ಠ ಗುಣಗಳೂ ಇವೇ. ಇವುಗಳನ್ನು ದೇವ, ಈಶ ಕೊಡಲಾರರು. ಈಶಾವಾಸ್ಯ-ಬಾಹ್ಯ ಪ್ರಪಂಚ. ಭಗವಂತ ಅಂತರಂಗವ್ಯಾಪಿ. ಎಲ್ಲ ವಸ್ತುಗಳಲ್ಲೂ ಭಗವಂತನ ದರ್ಶನವಾಗುವುದು ಸಾಧಕನ ಉನ್ನತ ಸ್ಥಿತಿ.

'ದಾಸಬೋಧ'ದಲ್ಲಿ ಸತ್ತ್ವ ಲಕ್ಷಣ, ರಜಲಕ್ಷಣ, ತಮ ಲಕ್ಷಣ, ತ್ರಿತಾಪಗಳಲ್ಲಿಯ ರೋಗಲಕ್ಷಣ, ಸದ್ಗುರುವಿನ ಲಕ್ಷಣ, ಸತ್ ಶಿಷ್ಯನ ಲಕ್ಷಣ, ದೇವರ ಲಕ್ಷಣ, ಮಂತ್ರಲಕ್ಷಣ, ಮೊದಲಾದ ಅನೇಕ ಪಟ್ಟಿಗಳು ಓತಪ್ರೋತವಾಗಿ ಹರಿದು ಬರುತ್ತವೆ. ಇದರ ಕನ್ನಡ ಅನುವಾದ ಮಾಡುವದು ಬಹಳ ಕಷ್ಟದ ಕೆಲಸ. ಇದನ್ನೂ ಘಾಟಕ ಅವರು ಸಮರ್ಥವಾಗಿ ಮಾಡಿದ್ದಾರೆ.

''ದೇವನು ಸರ್ವ ದೇಹಗಳನ್ನು ನಡೆಸುವನು ಮನುಷ್ಯನ ದೇಹದಲ್ಲಿದ್ದಾಗ ಅವನು ಕ್ಷೇತ್ರಜ್ಞ, ಕ್ಷೇತ್ರವಾಸಿ, ಕೂಟಸ್ಥ'' (೧೦.೧೦.೪೪), ''ವಿವೇಕಿಗಳು ಆತ್ಮತತ್ತ್ವದತ್ತ ನೋಡುವರು'' (೧೧.೧.೨೪), ಭಿಕ್ಷ ಬೇಡುವದು ನಿಸ್ಪೃಹತೆಯ ಲಕ್ಷಣ (೧೪-೨-೪) ದಶಕ ೧೭, ೧೮, ೧೯ರಲ್ಲಿ ಮನುಷ್ಯ ತನ್ನನ್ನು ತಿಳಿದುಕೊಳ್ಳಲು ೪ ದೇಹ + ೪ ಅವಸ್ಥೆ + ೪ ಅಭಿಮಾನಗಳು + ೪ ಸ್ಥಾನ + ಓಂಕಾರದ ೪ ಭಾಗ + ಜಡಭೂತದಿಂದ ಅಂತರಾತ್ಮನವರೆಗೆ ೪ ಹಂತಗಳು +೪ ಗುಣಗಳು + ೪ ಶಕ್ತಿಗಳು ಎಂಬ ಮೂವತ್ತೆರಡು ತತ್ತ್ವಗಳೊಂದಿಗೆ, ಸ್ಥೂಲದೇಹದ -೨೫, ಹಾಗೂ ಸೂಕ್ಷ್ಮದೇಹದ ೨೫ ತತ್ತ್ವಗಳು; ಜ್ಞಾನ ಹಾಗೂ ಅಜ್ಞಾನ ತತ್ತ್ವಗಳು ಕೂಡಿ ೮೪ ತತ್ತ್ವಗಳ ಅಭ್ಯಾಸ ಮಾಡುವುದು ಅವಶ್ಯ. ದೇಹ ಸಂಪೂರ್ಣ ತಿಳಿದಾಗ ದೇಹಾತೀತ ಹಾಗೂ ಅತೀಂದ್ರಿಯ, ನಿಃಶಬ್ದ ಅವಸ್ಥೆಯ ಇರವು ಹಾಗೂ ಅರಿವು ಆಗಲು ಸಾಧ್ಯ ಎಂದು ಸಮರ್ಥರು ವಿವರಿಸಿದ್ದಾರೆ. ಈ ಭಾಗ ಯಾವ ಭಾಷೆಯಲ್ಲಿ ಹೇಳಿದರೂ ಗಡಚೇ. ಇದರ ಅನುವಾದವನ್ನೂ ಘಾಟಕ, ಚೆನ್ನಾಗಿಯೇ ಮಾಡಿದ್ದಾರೆ. ಈ ವಿವೇಚನೆಯಿಂದ ಅಧ್ಯಾತ್ಮವೂ ಒಂದು ಪ್ರಬಲವಾದ ಶಾಸ್ತ್ರ. ಇದನ್ನು ತಿಳಿದುಕೊಳ್ಳಲು ನಿಶ್ಚಿತವಾದ ಮಾರ್ಗ ಕಂಡು ಹಿಡಿಯಲಾಗಿದೆ ಎಂಬುದು ವಾಚಕರ ಮನಸ್ಸಿಗೆ ಒಪ್ಪಿಗೆಯಾಗುತ್ತದೆ. ಈ ಮಾರ್ಗಕ್ರಮಣಕ್ಕೆ ಸದ್ಗುರುಗಳ ಮಾರ್ಗದರ್ಶನ ಬೇಕೇ ಬೇಕು ೨೦ನೆಯ ಕೊನೆಯ

ದಶಕದಲ್ಲಿ ಸ್ಥೂಲದೇಹದಿಂದ -ವಿಮಲ ಬ್ರಹ್ಮ ವಸ್ತುವಿನ ಪ್ರಾಪ್ತಿಯವರೆಗೆ ವಿವೇಚನೆ ಇದೆ. ಸ್ಥೂಲ ದೇಹದಲ್ಲಿ ಸಮಗ್ರ ಪರಿವರ್ತನೆಯನ್ನು ಸಾಧಿಸದೆ ಭಗವಂತನೊಂದಿಗೆ ಅದ್ವೈತ ಸಂಬಂಧ ಸಾಧ್ಯವಿಲ್ಲ ಎಂದು ಸಮರ್ಥರು ಸ್ಪಷ್ಟಪಡಿಸಿದ್ದಾರೆ. ''ಅಂತರ್ಯದಲ್ಲಿ ಶಾಶ್ವತ ಬ್ರಹ್ಮನನ್ನು ಗುರುತಿಸಿ ತಿಳಿದುಕೊಂಡಿರಬೇಕು. ಒಳಗಿನಿಂದ ಬ್ರಹ್ಮಸ್ವರೂಪ ರಾಗಿದ್ದು, ಹೊರಗೆ ಮಾತ್ರ ನಾಲ್ಕು ಜನರಂತೆ ವರ್ತನ ಮಾಡಬೇಕು.'' ಎಂಬ ಎಚ್ಚರಿಕೆಯನ್ನು ಕೊಡಲು ರಾಮದಾಸರು ಮರೆತಿಲ್ಲ. ದೇವತ್ವವು - ೧) ದೇವತಾ ಮೂರ್ತಿಗಳಲ್ಲಿ ೨) ಅವತಾರಿ ಪುರುಷರಲ್ಲಿ ೩) ಎಲ್ಲರೊಳಗಿನ ಅಂತರಾತ್ಮನಲ್ಲಿ ಹಾಗೂ ೪) ನಿರ್ವಿಕಾರಿ ಬ್ರಹ್ಮ ವಸ್ತುವಿನಲ್ಲಿ ಇರುತ್ತದೆ ಎಂದು ದಶಕ -೧೧ ರಲ್ಲಿ ಬಹಳ ಚೆನ್ನಾಗಿ ಸಮರ್ಥರು ವಿವರಿಸಿದ್ದುಂಟು. ಆದರೆ ಇದೆಲ್ಲ ಯಾರಿಗಾಗಿ ? ೮೪ ಲಕ್ಷ ಯೋನಿಗಳ ಚಕ್ರದಾಟಿ ಮಾನವ ಜನ್ಮ ಪಡೆದವನಿಗಾಗಿ. ಅವನ ಪರಿವರ್ತನೆ, ಅಭಿವೃದ್ಧಿ ಹಾಗೂ ಸಾರ್ಥಕತೆಗಾಗಿ.

ಸಾರ್ಥಕತೆಯಲ್ಲಿಯೂ ಎರಡು ಪ್ರಕಾರ. ಲೌಕಿಕ=ಪ್ರಪಂಚ ಹಾಗೂ ಆಧ್ಯಾತ್ಮಿಕ=ಪರಮಾರ್ಥ. ಎರಡೂ ದೃಷ್ಟಿಯಿಂದ ಸಾರ್ಥಕತೆ ಪಡೆಯಲು ಇರುವ ತೊಡಕು ಮತ್ತು ಪರಿಹಾರ ಮಾರ್ಗವನ್ನು ಸಮರ್ಥ ರಾಮದಾಸರು, ಸಂಶಯ ಬರಲಾರದಂತೆ ವಿವೇಚಿಸಿದ್ದರಿಂದ ಅವರ ''ದಾಸಬೋಧ'' ಇಂದಿಗೂ ಪ್ರಸ್ತುತ ಗ್ರಂಥವಾಗಿದೆ. ಈಗಂತೂ 'ದಾಸಬೋಧ' ರಚನೆಯ ಕಾಲಕ್ಕೆ ಇದ್ದ ಸಾಮಾಜಿಕ, ರಾಜಕೀಯ ಪರಿಸ್ಥಿತಿಗಿಂತ ಗಂಭೀರ ಪರಿಸ್ಥಿತಿ ಉಂಟಾಗಲಿದೆ. ಇದನ್ನು ಎದುರಿಸಲು ಸಮರ್ಥವಾಗುವ ದೃಷ್ಟಿಯಿಂದಲೂ ''ದಾಸಬೋಧ'' ಮಹತ್ತ್ವದ ಗ್ರಂಥವಾಗುತ್ತದೆ.

ಘಾಟಕ ಅವರ ಕನ್ನಡ ಅನುವಾದದಲ್ಲಿ ಸರಳತೆ, ಸ್ಪಷ್ಟತೆ, ಸೂಕ್ಷ್ಮತೆ ಲಲಿತವಾದ ಹಾಗೂ ಮಾರ್ಮಿಕವಾದ ಸಂವಾದದ ರೀತಿ ಎದ್ದು ಕಾಣುವ ಗುಣಗಳಾಗಿವೆ. ಒಂದೇ ಒಂದು ಕೊರತೆ ಇದೆ. ಅದೆಂದರೆ ಸಮವೃತ್ತಪದ್ಯಾನುವಾದದ ಬಂಧನವನ್ನು ಹಾಕಿಕೊಂಡದ್ದರಿಂದ ಹಾಗೂ ಪ್ರಾಸವನ್ನು ಸಾಧಿಸಲೇಬೇಕಾದಾಗ ದೂರಾನ್ವಯ ದೋಷ ಉಂಟಾಗುತ್ತದೆ. ಅರ್ಥವನ್ನು ಗಮನಿಸಿ ಓದಿದಾಗ ಶಬ್ದಗಳ ಕ್ರಮವನ್ನು ಹೊಂದಿಸಿಕೊಂಡಾಗ ಎಲ್ಲವೂ ಸುಗಮವಾಗುತ್ತದೆ.

ಈ ಬೃಹತ್ ಗ್ರಂಥದ ಪ್ರಥಮವಾಚಕನಾಗುವ ಭಾಗ್ಯ ಘಾಟಕ ಅವರು ನನಗೆ ಕೊಟ್ಟಿದ್ದರಿಂದ ಅವರ ವಿಶ್ವಾಸ ಹಾಗೂ ಆತ್ಮೀಯ ಸಂಪರ್ಕಕ್ಕಾಗಿ ಅನಂತ ಧನ್ಯವಾದಗಳು. ಘಾಟಕ ಅವರ ದ್ವಿಭಾಷಾ ಅನುವಾದ ಕಾರ್ಯ ಸತತವಾಗಿ ನಿರ್ವಿಘ್ನವಾಗಿ ಸಾಗಲಿ ಎಂದೇ ಹಾರೈಸುತ್ತ ಬಂದಿದ್ದೇನೆ. ಆ ಹಾರೈಕೆ ಇಂದಿಗೂ ಇದೆ.

ಸಂಚಾಲಕರು : ಅಂಬಿಕಾತನಯದತ್ತ ವೇದಿಕೆ
ಡಾ। ದ.ರಾ. ಬೇಂದ್ರೆ ಮಾರ್ಗ, ಸಾಧನಕೇರಿ, ಧಾರವಾಡ-೫೮೦೦೦೮

ವಾಮನ ಬೇಂದ್ರೆ
೨೮-೦೭-೨೦೦೬

“कन्नड दासबोध”च्या निमित्ताने...........

भारतातील सर्वच भाषा (संस्कृत उद्‌भव असल्याने) या भाषा-भगिनी आहेत. त्यांच्यात नेहमी सौहार्दच असावे, यासाठी पू. साने गुरुजींनी आंतर-भारतीची कल्पना मांडली. या कल्पनेनुसार, अन्य भाषांमधले उत्तम साहित्य आपल्या भाषेत आणायला हवे; आणि आपल्या भाषेतील उत्तम साहित्य अन्य भाषांमध्ये अनुवादायला हवे. त्यामुळे सर्व भाषिकांमध्ये सौहार्दाचे अतूट नाते निर्माण होईल.

या तत्त्वानुसार स्वतः साने गुरुजी यांनी तामिळ भाषेतील “कुरल” या ग्रंथाचा अनुवाद मराठीत केला होता. या दिशेने मीही विचार करु लागलो.

माझा जन्म पूर्वीच्या “मुंबई” इलाख्यातील जमखंडीचा. जमखंडीच्या आजू-बाजूच्या खेड्यातल्या जनतेची भाषा कन्नड. त्यामुळे मला “कन्नड” थोडे फार समजते. पण लिहिता-वाचता येत नाही. तरी कर्तव्य म्हणून मी ज्येष्ठ कन्नड साहित्यिक श्री. यू. आर. अनंत मूर्ती व श्री. यशवंत चित्ताल यांच्या कथांचा दुभाषांच्या मतदीने मराठीत अनुवाद केला. कन्नड वाङ्‌मय हे खूपच दर्जेदार आहे. ते मराठीत यायला हवे पण माझ्या अल्पशा कन्नड मुळे ते काम करणे मला शक्य नव्हते. अशाच वेळी माझा, श्री. श्रीकांत फाटक यांच्याशी परिचय झाला. श्रीकांत र. फाटक कल्याणला राहतात. उत्तम मराठी बोलतात. मराठीतून उत्तम कथा-कविता लिहितात. मराठी काव्य - गीत गायन करतात, तेव्हा ‘त्यांना कन्नड येत असेल.’ हे माझ्याच नव्हे तर कुणाच्याही लक्षात येण्याचे कारण नव्हते. मी जमखंडीचा आहे, हे कळल्यावर ते माझ्याशी अस्सल कन्नड मध्ये बोलले. माझ्या आश्चर्याला पारावार उरला नाही. त्याचवेळी मला समजले की फाटकांचे एस्. एस्. सी पर्यंतचे शिक्षण कन्नड माध्यमातून झाले आहे. ते बेळगाव जिल्ह्यातील बैल-होंगलचे. त्यांचा कन्नड साहित्याशी चांगला परिचय आहे. त्यांचे पुष्कळ नातेवाईक हुबळी-धारवाड-गदग कडे राहतात. हे सर्व मला समजले तेव्हा मला खूप आनंद झाला. मी त्यांना कन्नड-मराठी, मराठी कन्नड मधून अनुवाद करण्याची सूचना केली. याच दरम्यान श्री. फाटक यांनी मराठीतून लिहिलेल्या दोन मोठ्या कादंबऱ्या अप्रमेय (भीमावरची)आणि महारुद्र (हनुमानावरची) प्रसिद्ध झाल्या. मुंबईमधील “मनोरमा” या नामवंत प्रकाशन संस्थेने त्या प्रसिद्ध केल्या होत्या.

त्याच वेळी ते मराठी गीत-कवितांचे कन्नड मध्ये (समवृत्त पद्धतीने) अनुवाद करु लागले. त्यांनी ठाणे येथे भरलेल्या कोकम (कोंकणी, कन्नड, मराठी) साहित्य संमेलनात कै. बा. सी. मर्ढेकर व कै. बा. भ. बोरकर यांच्या कन्नडमध्ये अनुवादित केलेल्या कविता सादर केल्या. याच संमेलनात मी, श्री. फाटक यांची, डॉ. वामन बेंद्रे यांच्याशी ओळख करुन दिली.

श्री. फाटक यांनी ज्ञानेश्वर ते निळोबा अशा सत्तावीस मराठी संताच्या अंदाजे आठशे पन्नास रचनांचा कन्नडमध्ये अनुवाद करून (संतवाणी - भाग १ ते ४) चार ग्रंथ प्रकाशित केले. (या सर्व ग्रंथांना डॉ. ब्रेंद्रे यांनी प्रस्तावना लिहिल्या आहेत.) त्या प्रमाणे फाटकांनी कन्नड मधील संत (शरण) बसवेश्वर,

अखंडेश्वर आणि अक्कमहादेवी यांच्या वचनांचा मराठीत अनुवाद केलेले तीन ग्रंथही प्रकाशित झाले आहेत.

(या त्यांच्या सर्व प्रकाशित ग्रंथांची यादी या (दासबोध) ग्रंथांच्या शेवटच्या पानावर देण्यात आली आहे.)

आज श्री. फाटक हे सत्तरीच्या उंबरठ्यावर आहेत. तरी पण त्यांचे वाचन, लेखन अखंडपणे चालू आहे. आणि एके दिवशी मला समजले की, समर्थ श्री. रामदास स्वामी विरचित "श्रीमत् दासबोध" ग्रंथांचा ते कन्नडमध्ये आता ओवीबद्ध अनुवाद करीत आहेत. मला आनंद तर झालाच पण थोडी शंकाही आली. कारण "दासबोध" हा ग्रंथ नसून "ग्रंथराज" आहे! हा ग्रंथ अतिविशाल म्हणजेच २० दशकांचा आहे. आणि प्रत्येक दशकांत १० समास आहेत. (या ग्रंथातील ओव्यांची संख्या आठ हजाराच्या आसपास आहे!)

दासबोध ग्रंथांचा विषय अध्यात्म, परमार्थपर व त्यातून समाजाला उत्तम प्रपंच, राजकारण, व्यवहार कसा करावा हे सांगणारा, त्यामुळे असे व्यामिश्र विषय सोपे करुन सांगणारा हा ग्रंथ श्री. फाटक यांनी कन्नड मध्ये अनुवादित केला, हे ऐकून मला आश्चर्य वाटले आणि आनंदही झाला.

हा कन्नड मध्ये अनुवादलेला ग्रंथ वाचून, कन्नड वाचक, इतर मराठी संत वाङ्मयाकडेही वळतील, अशी मला आशा वाटते.

फाटकांनी या कन्नड दासबोध ग्रंथाच्या काही भागांचे वाचन माझ्या घरी केले. त्यावेळी मी मूळ मराठी दासबोधही पडताळून पहात होतो. फाटकांचा अनुवाद मला सोपा वाटला. दासबोधाचा विषय अध्यात्मिक, आणि, भाषा संस्कृत प्रचुर असल्याने कन्नड न जाणणाऱ्या श्री. सप्रे व ठाकूर देसाई या माझ्या मित्रांनाही तो समजला.

श्री. फाटक यांचा अनुवाद कसा झाला आहे हे सांगण्याचा मला अधिकार नाही. पण डॉ. वामनराव बेन्द्रे यांनी, "हा अनुवाद,'अनुवाद' न वाटण्या इतका सहज झाला आहे, सरलता, स्पष्टता, सूक्ष्मता व ललित्य इत्यादि गुणांमुळे सुंदर झाला आहे." अशा शब्दांत प्रशंसा केली आहे. त्यामुळे वेगळे काही सांगणे उरत नाही.

श्री. फाटक यांच्या लेखणीतून मराठी आणि कन्नड या दोन्ही भाषांची सेवा अशीच अखंडपणे, उत्कटपणे यापुढेही घडो, अशी शुभेच्छा मी व्यक्त करतो.

वसंत जोशी

# ಅನುವಾದಕನ ಮನೋಗತ

ಸಮರ್ಥರ ಭಕ್ತರಾಗಿದ್ದ ಶ್ರೀ ಪ್ರದೀಪ ನಾತೂ ಅವರು, ಒಮ್ಮೆ ಮನೆಗೆ ಬಂದಾಗ, ಮಾತು ಮಾತಿನಲ್ಲಿ ''ನಮ್ಮ ತಾಯಿಗೆ ಕನ್ನಡ ಬರುತ್ತದೆ'' ಎಂದು ಹೇಳಿದರು. ಆಗ ನಾನು, ಸಮರ್ಥ ಶ್ರೀ ರಾಮದಾಸರ ಸ್ಫುಟ ರಚನೆಗಳ ನಾನು ಮಾಡಿದ ಸಮಶ್ಲೋಕಿ ಕನ್ನಡ ಭಾವಾನವಾದದ ಪುಸ್ತಕವನ್ನು ತೋರಿಸಿದೆನು. ಆಗ ಅವರು, '' ನೀವು ಸಮರ್ಥರ 'ದಾಸಬೋಧ' ಗ್ರಂಥದ ಕನ್ನಡ ಅನುವಾದವನ್ನೇಕೆ ಮಾಡಬಾರದು? ಸಮರ್ಥರ ಪಾದುಕೆಗಳನ್ನು ಕರ್ನಾಟಕ ಮಹಾರಾಷ್ಟ್ರದ ಸೀಮಾಭಾಗಗಳಲ್ಲಿ ಒಯ್ಯುವಾಗ ಸಮರ್ಥರ ಕನ್ನಡ-ದಾಸಬೋಧದ ಪ್ರತಿಗಳನ್ನೂ ಒಯ್ಯುಬಹುದು!'' ಎಂದು ಸೂಚಿಸಿದರು ಅವರ ಸೂಚನೆ, ನನಗೆ ಸೇರಿತು.

ಶ್ರೀ ಪ್ರದೀಪ ನಾತೂ ಅವರ ಸಲಹೆಯಂತೆ ನಾನು, 'ದಾಸಬೋಧ'ದ ಓವಿಬದ್ಧ ಅನುವಾದ ಮಾಡಲು ಆರಂಭಿಸಿದೆನು. ಅದರ ಮೊದಲು ನಾನು ದೂರಧ್ವನಿಯ ಮೇಲೆ, ಡಾ॥ ಶ್ರೀ ವಾಮನರಾವ ಬೇಂದ್ರೆ ಅವರನ್ನು ಸಂಪರ್ಕಿಸಿ, ''ನಾನು ದಾಸಬೋಧದ ಓವಿಬದ್ಧ ಕನ್ನಡ ಅನುವಾದ ಮಾಡಲಿಚ್ಛಿಸುತ್ತೇನೆ.'' ಎಂದು ಹೇಳಿದೆ. ಅವರು ತಕ್ಷಣ ನನ್ನ ಈ ಸಂಕಲ್ಪನೆಯನ್ನು ಪ್ರೋತ್ಸಾಹಿಸಿದರು.

ಆ ನಂತರ ನಾನು ಈ ಕಾರ್ಯ ಕೈಕೊಂಡು ಮೂರು ವರ್ಷಗಳಲ್ಲಿ ಮುಗಿಸಿದೆನು. ಈ ಗ್ರಂಥದ ಅನುವಾದ ಮುಗಿದ ನಂತರ ಡಾ॥ ಶ್ರೀ ವಾಮನರಾವ ಬೇಂದ್ರೆಯವರನ್ನು ಸಂಪರ್ಕಿಸಿ ಅವರಿಂದ ಪ್ರಸ್ತಾವನೆ ಬರೆಸಿಕೊಂಡೆ. ಡಾ॥ ಬೇಂದ್ರೆಯವರು ಹಸ್ತಲಿಖಿತವನ್ನು ಅಕ್ಷರ-ಅಕ್ಷರ ಓದಿ, ತಪ್ಪುಗಳನ್ನು ತಿದ್ದಿ, ಸುಯೋಗ್ಯ ಸೂಚನೆಗಳನ್ನು ಮಾಡಿ, ಅಭ್ಯಾಸಪೂರ್ಣ ಪ್ರಸ್ತಾವನೆ ಬರೆದು ಕಳಿಸಿದರು.

ಆದರೆ ಈ ಬೃಹದ್-ಗ್ರಂಥದ ಪ್ರಕಾಶನದ ಭಾರ ಎತ್ತಲು ಯಾರೂ ಮುಂದೆ ಬರಲಿಲ್ಲ, ಮಾತ್ರ ಸಜ್ಜನಗಡದ ಶ್ರೀ ಬಾಳಾಸಾಹೇಬ ಸ್ವಾಮಿ ಅವರು ಈ ಗ್ರಂಥದ ಮಾರಾಟದ ಹೊಣೆ ಎತ್ತಲು ಸಿದ್ಧರಾದರು. ಅವರು'' ನಾವು ದಲಾಲಿ ತಕ್ಕೊಳ್ಳದೇ ಈ ಗ್ರಂಥದ ಮಾರಾಟ ಮಾಡುತ್ತೇವೆ.'' ಎಂದು ಹೇಳಿದರು.

ಅದಕ್ಕಾಗಿ ಈ ಗ್ರಂಥದ ಪ್ರಕಾಶನ ನಾನೇ ಮಾಡುವ ನಿಶ್ಚಯ ಮಾಡಿದೆನು. ನಡುವಿನ ಕಾಲದಲ್ಲಿ ನನ್ನ ಎಷ್ಟೋ ಹಿತಚಿಂತಕ, ಸಹೃದ ಮಿತ್ರರು ನನ್ನ ಈ ಕಾರ್ಯಕ್ಕೆ ಬೆಂಬಲ ಕೊಟ್ಟರು. ಇಲ್ಲಿ ಅವರೆಲ್ಲರ ಹೆಸರಿನ ನಿರ್ದೇಶನ ಮಾಡಲಾಗದು, ಆದರೂ ಸರ್ವಶ್ರೀ ಯಶವಂತ ಅತ್ರೇ, ಶ್ರೀಕಾಂತ ಸಪ್ರೇ, ಗುರುರಾವ ಕುಲಕರ್ಣಿ, ಠಾಕೂರ ದೇಸಾಯಿ, ಅರವಿಂದ ಕರ್ವೇ, ಮತ್ತು ವಸಂತ ಜೋಶಿ ಅವರು ನನಗೆ ಸಕ್ರೀಯ ಸಹಾಯ-ಪ್ರೋತ್ಸಾಹನೆ ಕೊಟ್ಟಿದ್ದಾರೆ. ನನ್ನ ಸೊಸೆ ಸೌ. ಸರಿತಾ ಜೋಶಿ ಕಾನಿಟಕರ ಅವಳು ಮುದ್ರಿತ ತಪಾಸಣೆಯ ಕೆಲಸದಲ್ಲಿ ನನಗೆ ಸಹಾಯ ಮಾಡಿದ್ದಾಳೆ.

ನನ್ನ ಪತ್ನಿ, ಸೊಸೆ ಮತ್ತು ಎಲ್ಲ ಸಹೋದರರೂ ನನ್ನನ್ನು ಪ್ರೋತ್ಸಾಹಿಸಿದ್ದಾರೆ.

ಈ ಗ್ರಂಥಕ್ಕೆ ಡಾ॥ ಶ್ರೀ ವಾಮನ ಬೇಂದ್ರೆಯವರು ಪ್ರಸ್ತಾವನೆ ಬರೆದು, ಶ್ರೀ ಬಾಳಾಸಾಹೇಬ ಸ್ವಾಮಿ ಅವರು ಆಶೀರ್ವಾದ ಕೊಟ್ಟು ಶ್ರೀ ವಸಂತ ಜೋಶಿ ಅವರು ಅಭಿಪ್ರಾಯ ಕೊಟ್ಟು, ನನ್ನ ಈ ಕಾರ್ಯಕ್ಕೆ ಹಾರೈಕೆ ದಯಪಾಲಿಸಿದ್ದಾರೆ.

ಈ ಗ್ರಂಥ ಬರೆಯುವ (ಅನುವಾದಿಸುವ) ಸಲಹೆ ಶ್ರೀ ಪ್ರದೀಪ ನಾತೂ ಅವರು ಕೊಟ್ಟಿದ್ದಾರೆ.

ಈ ಮಹಾಗ್ರಂಥದ, ಅಕ್ಷರ ಹೊಂದಿಸುವ ಚಿತ್ರ ರೇಖಿಸುವ ಹಾಗೂ ಮುದ್ರಣದ ಕಾರ್ಯವನ್ನು ಶ್ರೀ ಪಂಡಿತರಾವ ದೀಕ್ಷಿತರು ಅತ್ಯಂತ ಉತ್ಸಾಹದಿಂದ ಮಾಡಿ, ಈ ಗ್ರಂಥಕ್ಕೆ ಸುಂದರ ರೂಪ ಕೊಟ್ಟಿದ್ದಾರೆ.

ಮೇಲೆ ಉಲ್ಲೇಖಿಸಿದ ಎಲ್ಲರಿಗೂ ನಾನು ಋಣಿಯಾಗಿದ್ದೇನೆ.

ಈ ಮೊದಲಿನ ನನ್ನ ಕನ್ನಡದಲ್ಲಿಯ ಸಂತವಾಣಿ ಭಾಗ ೧ ರಿಂದ ೪ ಗ್ರಂಥಗಳನ್ನು ಸ್ವಾಗತಿಸಿದ ವಾಚಕರು ಸಮರ್ಥ ಶ್ರೀ ಸಂತ ರಾಮದಾಸರ ಈ ಮೇರು ಗ್ರಂಥವನ್ನೂ ಸ್ವಾಗತಿಸಲಿ ಎಂದು ಬಯಸುತ್ತೇನೆ.

ಶ್ರೀಕಾಂತ ರಘುನಾಥ ಘಾಟಕ
'ರಘುವಂಶ'
ಮುರಲೀಧರ ಆಳಿ, ಪಾರನಾಕಾ,
ಕಲ್ಯಾಣ (ಪಶ್ಚಿಮ), ಜಿಲ್ಹಾ : ಠಾಣೆ (ಮಹಾರಾಷ್ಟ್ರ)
ದೂರಧ್ವನಿ : ೦೨೫೧ -೨೨೦೭೫೮೩

# ಸಮರ್ಥ ರಾಮದಾಸರ ಅಲ್ಪ ಚರಿತ್ರ (ಇ.ಸ. ೧೬೦೮-೧೬೮೧)

ಸಂತ ಸಮರ್ಥ ರಾಮದಾಸರ ಹೆಸರು ನಾರಾಯಣ ಸೂರ್ಯಾಜೀ ಠೋಸರ. ಅವರು 'ಜಾಂಬ' ಈ ಊರಿನವರು. ತಾಯಿಯ ಹೆಸರು ರಾಣೂಬಾಯಿ. ಚೈತ್ರ ಶುದ್ಧ ನವಮಿಯ ದಿನ ರಾಮ ಜನ್ಮೋತ್ಸವದ ವೇಳೆಗೇ ನಾರಾಯಣನ ಜನ್ಮವಾಯಿತು. ನಾರಾಯಣನು ಚಿಕ್ಕಂದಿನಲ್ಲಿ ತುಂಟನಾಗಿದ್ದರೂ, ಅವನು ಅತಿಶಯ ಬುದ್ಧಿಮಾನ ಇದ್ದನು. ೧೨ನೇ ವಯಸ್ಸಿನಲ್ಲಿಯೇ ಅವನು ಶಬ್ದ ರೂಪಾವಲಿ, ಸಮಾಸಚಕ್ರ, ಅಮರಕೋಶ, ರುದ್ರ, ಪವಮಾನ, ಇತ್ಯಾದಿ ಗ್ರಂಥಗಳನ್ನು ಮುಖೋದ್ಗತ ಮಾಡಿದ್ದನು. ಸೂರ್ಯಾಜೀಪಂತರು, ಅವರ ಕಡೆಗೆ ಉಪದೇಶಕ್ಕಾಗಿ ಬರುವ ಜನರಿಗೆ ಮಂತ್ರದೀಕ್ಷೆ ಕೊಡುತ್ತಿದ್ದರು. ಅವರ ನಿಧನದ ನಂತರ ನಾರಾಯಣನ ಅಣ್ಣ ಗಂಗಾಧರನು ಈ ಕಾರ್ಯ ಮಾಡುತ್ತಿದ್ದನು. ಅಣ್ಣನ ಕಡೆಯಿಂದ ಮಂತ್ರದೀಕ್ಷೆಯ ಅಪೇಕ್ಷೆ ಮಾಡಿದ ನಾರಾಯಣನಿಗೆ ಅವನ ಅಣ್ಣ, ''ನಿನ್ನ ತುಂಟತನ ಹೋದ ಮೇಲೆಯೇ ನಾನು ನಿನಗೆ ಮಂತ್ರೋಪದೇಶ ಕೊಡುತ್ತೇನೆ'' ಅಂದನಂತೆ. ಅಣ್ಣನ ಈ ಉತ್ತರದಿಂದ ಸಿಟ್ಟಾದ ನಾರಾಯಣನು ಊರ ಹೊರಗಿನ ಮಾರುತಿ ಗುಡಿಯಲ್ಲಿ ಹೋಗಿ ಮಲಗಿದನಂತೆ, ಆಗ ಅವನ ಕನಸಿನಲ್ಲಿ ಶ್ರೀರಾಮನು ದರ್ಶನ ಕೊಟ್ಟು, ಮಂತ್ರೋಪದೇಶ ಮಾಡಿದನಂತೆ, ಈ ಪ್ರಸಂಗವನ್ನು ಸಮರ್ಥರು ವರ್ಣಿಸಿದ್ದು ಹೀಗೆ –

ರಾಘವಾಚೀ ಭಕ್ತಿ । ಸುಖಾಚೀ ವಿಶ್ರಾಂತಿ ।
ಪಿತಯಾಚೀ ಶಾಂತಿ । ಝಾಲೀ ಪುಢೇ ॥
ಪುಢೇ ಜ್ಯೇಷ್ಠ ಬಂಧು । ನ ಸಾಂಗೇಚಿ ಕಾಹೀ ।
ಸುಖೇ ದೇವಾಲಯೀ । ನಿದ್ರಾ ಕೇಲಿ ॥
ನಿದ್ರಾ ಕೇಲಿ ತೇಥೇ । ಶ್ರೀರಾಮ ಉಠವೂನಿ ।
ತೋಚಿ ಮಂತ್ರ ಕಾನೀ । ಸಾಂಗಿತಲಾ ॥

ರಾಘವನ ಭಕ್ತಿ । ಸುಖದ ವಿಶ್ರಾಂತಿ ।
ತಂದೆಯದು ಶಾಂತಿ । ಮುಂದೆ ಆಯ್ತು ॥
ಮುಂದೆ ದೊಡ್ಡಣ್ಣನು । ಹೇಳದಾದ ಏನೂ ।
ಗುಡಿಯಲ್ಲಿ ನಾನು । ಮಲಗಿದ್ದೆ ॥
ಆಗ ನಿದ್ರೆಯಲ್ಲಿ । ರಾಮ ಎಬ್ಬಿಸಿದ ।
ಕಿವಿಯಲ್ಲಿ ಹೇಳಿದ । ಮಂತ್ರ ಅವ ॥

ಈ ಪ್ರಸಂಗದ ನಂತರವೂ ನಾರಾಯಣನ ತುಂಟತನ ಕಡಿಮೆಯಾಗಲಿಲ್ಲ. ಮನೆಗೆಲಸದಲ್ಲಿ ಅವನ ಲಕ್ಷವಿರಲಿಲ್ಲ. ಅದಕ್ಕಾಗಿ ಅವನ ತಾಯಿ ಒಮ್ಮೆ ಉದ್ವೇಗದಿಂದ, ''ನಾರಾಯಣಾ, ನೀನು ಜಾಣನಾಗಿ ಸಂಸಾರದ ಚಿಂತೆ ಎಂದು ಮಾಡುವಿಯೋ ?'' ಅಂತ ಕೇಳಿದಳಂತೆ. ತಾಯಿಯ ಪ್ರಶ್ನೆಗೆ ಉತ್ತರ ಕೊಡದೇ ನಾರಾಯಣನು ಯಾರಿಗೂ ಹೇಳದಂತೆ ಒಂದು ಕತ್ತಲೆಯ ಕೋಣೆಯಲ್ಲಿ ಅಡಗಿ ಕುಳಿತನಂತೆ. ಮನೆಯವರು ನಾರಾಯಣನನ್ನು ಎಲ್ಲ ಕಡೆ ಶೋಧಿಸಿದರು. ಕೊನೆಗೆ ಅವನ ತಾಯಿಗೆ ಆ ಕೋಣೆಯಲ್ಲಿ ಕುಳಿತ ನಾರಾಯಣನು ಕಂಡನು. ''ಇಲ್ಲಿ ಏನು ಮಾಡುತ್ತೀ?'' ಎಂದು ಕೇಳಿದ ಅವಳಿಗೆ, ಅವನು, ''ಅವ್ವಾ, ನಾನು ವಿಶ್ವದ ಚಿಂತೆ ಮಾಡುತ್ತೇನೆ ! '' ಅಂದನಂತೆ.

'ಲಗ್ನ ಮಾಡಿದರೆ ಇವನ ತುಂಟತನ ತನ್ನ ತಾನೇ ಹೋಗುತ್ತದೆ !' ಹೀಗೆ ವಿಚಾರ ಮಾಡಿ, ಅವಳು ನಾರಾಯಣನ ವಿವಾಹ ನಿಶ್ಚಯಿಸಿದಳು.

ಲಗ್ನವೇದಿಕೆಯ ಮೇಲೆ ನಿಂತ ನಾರಾಯಣನು, ಮಂಗಲಾಷ್ಟಕದಲ್ಲಿಯ 'ಸಾವಧಾನ!' ಈ ಶಬ್ದ ಕೇಳಿದ ಕ್ಷಣವೇ, ವಿವಾಹಮಂಟಪ ಬಿಟ್ಟು ಪಲಾಯನ ಮಾಡಿದನು.

ವಿವಾಹ ಮಂಟಪದಿಂದ ಓಡಿದ ರಾಮದಾಸರು ನಾಸಿಕ ಕ್ಷೇತ್ರದ ಸಮೀಪದ 'ಟಾಕಳೀ' ನಾಮಕ ಊರಿಗೆ ಹೋಗಿ, ನಂದಿನಿ

ಮತ್ತು ಗೋದಾವರಿ ನದಿಗಳ ಸಂಗಮ ಸ್ಥಾನವನ್ನು ತಪಶ್ಚರ್ಯೆಗಾಗಿ ನಿಶ್ಚಯಿಸಿದರು. ಮುಂಜಾನೆ ಸಂಗಮದಲ್ಲಿ ಸ್ನಾನ ಮಾಡಿ, ಮಧ್ಯಾಹ್ನದ ತನಕ ಒಂದೇ ಕಾಲಿನ ಮೇಲೆ ನಿಂತು, ಗಾಯತ್ರೀ ಪುರಶ್ಚರಣ ಮಾಡಿ, ನಂತರ ಸಿದ್ಧ ಭಿಕ್ಷೆ ಬೇಡಿ, ಊಟದ ನಂತರ ನಾಸಿಕ ಕ್ಷೇತ್ರದಲ್ಲಿ ಹೋಗಿ, ಶಾಸ್ತ್ರೀ ಪಂಡಿತರ ಹತ್ತಿರ ಸಂಸ್ಕೃತ ಗ್ರಂಥಗಳ ಅಧ್ಯಯನ, ಅನಂತರ ಕಥಾ ಕೀರ್ತನಗಳ ಶ್ರವಣ ಮಾಡಿ, ಸಾಯಂಕಾಲದಲ್ಲಿ 'ಟಾಕಳೀ'ಗೆ ಬರುತ್ತಿದ್ದರು. ಹೀಗೆ ರಾಮದಾಸರು ಒಂದು ತಪ (ಹನ್ನೆರಡು ವರ್ಷ) 'ಟಾಕಳೀಯಲ್ಲಿ ವಾಸ್ತವ್ಯ ಮಾಡಿದರು. ಈ ಅವಧಿಯಲ್ಲಿ ಅವರು ಮೂರು ಗಾಯತ್ರೀ ಪುರಶ್ಚರಣಗಳನ್ನು ಮತ್ತು 'ಶ್ರೀ ರಾಮ ಜಯ ರಾಮ ಜಯ ಜಯ ರಾಮ' ಈ ತ್ರಯೋದಶಾಕ್ಷರೀ ಮಂತ್ರದ ಹದಿಮೂರು ಕೋಟಿ ಜಪದ ಆರಾಧನೆ ಮಾಡಿದರು!

ಇದೇ ಕಾಲದಲ್ಲಿ ಅವರು ಸಂಗೀತದ ಅಭ್ಯಾಸವನ್ನೂ ಮಾಡಿ, ಬೇರೆ ಬೇರೆ ರಾಗಗಳಲ್ಲಿ ಭಕ್ತಿ ಪದಗಳನ್ನು ರಚಿಸಿದರು. ರಾಮದಾಸರಲ್ಲಿ ಗ್ರಾಂಥಿಕ ಜ್ಞಾನದ ಸಹ, ಅನುಭವದ ಜ್ಞಾನವೂ ಇದ್ದಿತು. ಮೇಲೆ ಉಲ್ಲೇಖಿಸಿದ ಕಠೋರ ತಪಶ್ಚರ್ಯದ ನಂತರ ಅವರು ತೀರ್ಥಯಾತ್ರೆಯನ್ನು ಕೈಕೊಂಡರು. ಪ್ರಯಾಗ, ಕಾಶೀ, ಗಯಾ ಈ ತ್ರಿಸ್ಥಲ ಯಾತ್ರೆಯ ತರುವಾಯ ಅವರು ಅಯೋಧ್ಯೆಯಲ್ಲಿ ಒಂದು ವರ್ಷ ವಾಸ್ತವ್ಯ ಮಾಡಿದರು. ಅನಂತರ ಹಿಮಾಲಯದಲ್ಲಿಯ ಬದ್ರೀ ನಾರಾಯಣ, ಕೇದರನಾಥ ಇತ್ಯಾದಿಗಳ ಯಾತ್ರೆಯನ್ನು ಮುಗಿಸಿ, ಅವರು ಜಗನ್ನಾಥಪುರಿಯಿಂದ ದಕ್ಷಿಣಕ್ಕೆ ಇಳಿದರು. ದಕ್ಷಿಣದಲ್ಲಿ ರಾಮೇಶ್ವರ, ಶಿವಕಾಂಚೀ ಕಿಷ್ಕಿಂಧಾ, ಪಂಪಾ, ಗೋಕರ್ಣ ಇತ್ಯಾದಿ ಕ್ಷೇತ್ರಗಳ ಯಾತ್ರೆ ಮುಗಿಸಿ, ಅವರು ಮಹಾರಾಷ್ಟ್ರಕ್ಕೆ ಮರಳಿದರು ಮತ್ತು ತಮ್ಮ ವೃದ್ಧ ತಾಯಿಯನ್ನು ಭೆಟ್ಟಿಯಾದರು. ಆ ವೇಳೆ ಅವರ ತಾಯಿಯ ದೃಷ್ಟಿ ಹೋಗಿದ್ದಿತು. ಸಮರ್ಥ ರಾಮದಾಸರ ಹಸ್ತ ಸ್ಪರ್ಶದಿಂದ ಅವರ ತಾಯಿಗೆ ಪುನಃ ದೃಷ್ಟಿ ಲಭಿಸಿತು !

ರಾಮದಾಸರಿಗೆ ಲಭಿಸಿದ ಸಿದ್ಧಿ, ಅವರ ಜ್ಞಾನ ಸಾಧನೆ (ಅಕ್ಷರಶಃ) ನೋಡಿದ ಅವರ ತಾಯಿಯು, ''ನಾರಾಯಣಾ, ನೀನು ನನ್ನ ಉದರದಲ್ಲಿ ಹುಟ್ಟಿ, ನನ್ನನ್ನು ಉದ್ಧಾರ ಮಾಡಿದಿ ! ನೀನು ಅವತಾರಿ ಪುರುಷನಾಗಿರುವಿ ನನ್ನ ಮೋಹಪಾಶ ಹರಿದು, ನಾನು ದುಃಖ-ಶೋಕಾತೀತ ಆದೆನು. ನೀನು ಇನ್ನು ಜಗದೋದ್ಧಾರ ಮಾಡಲು ಮುಕ್ತ ಇರುವಿ !'' ಎಂದು ಆಶೀರ್ವದಿಸಿ ಅವರನ್ನು ಬೀಳ್ಕೊಟ್ಟಳು.

## ಸಮರ್ಥರ ಕಾರ್ಯ

ಸಮರ್ಥ ರಾಮದಾಸರು ತಾಯಿಯ ಆಜ್ಞೆಯನ್ನು ಶಿರಸಾ ಮನ್ನಿಸಿ, ಕೃಷ್ಣಾ ನದಿಯ ಪರಿಸರದಲ್ಲಿ ಪ್ರವೇಶಿಸಿದರು. ಅದೇ ಪ್ರಾಂತದಲ್ಲಿ ಆಗ ಶ್ರೀ ಶಿವಾಜೀ ಮಹಾರಾಜರ ಹಿಂದವೀ ಸ್ವರಾಜ್ಯದ ಸ್ಥಾಪನೆಯ ಉದ್ಯೋಗವು ಆರಂಭವಾಗಿದ್ದಿತು. ಈ ಉದ್ಯೋಗಕ್ಕೆ ಪೂರಕವಾದ ದೇವ-ಧರ್ಮದ ಕಾರ್ಯವನ್ನು ಇಡೀ ಪ್ರದೇಶದಲ್ಲಿ ಮಾಡಬೇಕೆಂಬ ವಿಚಾರಮಾಡಿ, ಸಮರ್ಥರು ತಮ್ಮ ಕೆಲಸದಲ್ಲಿ ತೊಡಗಿದರು.

ಬಲೋಪಾಸಕ ರಾಮದಾಸರು ಮಹಾರಾಷ್ಟ್ರ ಪ್ರಾಂತದಲ್ಲಿ ಹನ್ನೊಂದು ಮಾರುತಿ ಗುಡಿಗಳನ್ನು ಮತ್ತು ಚಾಫಳದಲ್ಲಿ ರಾಮ ಮಂದಿರ ಕಟ್ಟಿಸಿದರು. ಸಮರ್ಥರ ಬಲೋಪಾಸನ, ರಾಮ ತಥಾ ಮಾರುತಿ ಮಂದಿರಗಳ ಸ್ಥಾಪನೆಯ ಕಾರ್ಯ ಅವಲೋಕಿಸಿದ ಜನರು ಅವರನ್ನು ಮಾರುತಿಯ ಅವತಾರವೆಂದು ತಿಳಿಯತೊಡಗಿದರು.

ಛತ್ರಪತಿ ಶಿವಾಜೀ ಮಹಾರಾಜರೂ ರಾಮದಾಸರಿಂದ ಉಪದೇಶ ಪಡೆದು, ಅವರ ಶಿಷ್ಯತ್ವ ಸ್ವೀಕರಿಸಿದರು. ಸಮರ್ಥರಿಗೂ ಶ್ರೀ ಶಿವಾಜಿ ಮಹಾರಾಜರು ರಾಮನ ಅವತಾರ ಅನ್ನಿಸುತ್ತಿದ್ದರು. ಸಮರ್ಥ ರಾಮದಾಸರು ಶ್ರೀ ಶಿವಾಜಿ ಮಹಾರಾಜರಿಗೆ ಬರೆದ ಪತ್ರದಲ್ಲಿ -

ನಿಶ್ಚಯದ ಮೇರೂ ಶಿಖರ । ಬಹಳ ಜನಕೆ ಆಧಾರ ।<br>
ಅಖಂಡ ಸ್ಥಿತಿಯ ನಿರ್ಧಾರ । ಶ್ರೀಮಂತ ಯೋಗಿ ॥<br>
ಯಶವಂತ ಕೀರ್ತಿವಂತ । ಸಾಮರ್ಥ್ಯವಂತ ವರದವಂತ ।<br>
ಪುಣ್ಯವಂತ, ನೀತಿ ಮಂತ । ಸುಜಾಣ ರಾಜಾ ॥

ಇತ್ಯಾದಿ ಶಬ್ದಗಳಲ್ಲಿ ಅವರ ಮಾಹತಿಯ ವರ್ಣನೆ ಮಾಡಿದ್ದಾರೆ.

ಸಮರ್ಥ ರಾಮದಾಸರು ಜಾಂಬ, ಸಜ್ಜನಗಡ, ಚಾಫಳ ಇತ್ಯಾದಿ ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಿಸಿದ್ದಾರೆ. ಈ ಮಠಗಳು ಸಮರ್ಥರ ಗ್ರಂಥ ಮತ್ತು ವಿಚಾರಗಳ ಪ್ರಚಾರ ಮತ್ತು ಪ್ರಸಾರ ಕಾರ್ಯವನ್ನು ಈ ವರೆಗೂ ಅವ್ಯಾಹತ ನಡೆಸುತ್ತ ಬಂದಿವೆ.

# ಸಮರ್ಥರ ಗ್ರಂಥ ಸಂಪದಾ :

ಸಮರ್ಥರ ಸಾಹಿತ್ಯವು ವಿಪುಲವಿದೆ. ಅವರ ಗ್ರಂಥಗಳಲ್ಲಿ 'ದಾಸ ಬೋಧಕ್ಕೆ' ಪ್ರಥಮ ಸ್ಥಾನವಿದೆ. ''ಸಮರ್ಥರ ದಾಸ ಬೋಧವು ಆಧುನಿಕ ಕಾಲದಲ್ಲಿಯ ಗೀತಾ ಇದೆ'' ಎಂದು ಕೈ. ಜ. ಸ. ಕರಂದೀಕರ ಅವರು ಪ್ರತಿ ಪಾದಿಸಿದ್ದಾರೆ. ದಾಸಬೋಧದಲ್ಲಿ ಪ್ರಪಂಚ ಮತ್ತು ಪರಮಾರ್ಥದ ಸಮನ್ವಯ ಸಾಧಿಸಲಾಗಿದೆ. ತರ್ಕ ತೀರ್ಥಲಕ್ಷ್ಮಣಶಾಸ್ತ್ರೀ ಜೋಶಿ (ಮರಾಠೀ ವಿಶ್ವಕೋಶದ ವಿದ್ವಾಂಸ ಸಂಪಾದಕ) ಅವರು, ''ಸ್ವಾಮೀ ಸಮರ್ಥರ ಮತ್ತು ದಾಸಬೋಧ ಗ್ರಂಥದ ಮರಾಠೀ ಭಾಷೆಯ ಮೇಲಿನ ಋಣವು ಎಂದೆಂದಿಗೂ ತೀರಿಸಲಾರದಷ್ಟು ಅಮಿತವಾಗಿದೆ. ಸಮರ್ಥ ರಾಮದಾಸರ ಗ್ರಂಥಗಳಲ್ಲಿ ಅಪಾರ ಶಬ್ದ ವೈಭವ ಮತ್ತು ವಿವಿಧ ಅರ್ಥಗಳ ಬೋಧಕ ಶಬ್ದ ಸಾಮರ್ಥ್ಯವು, ಪ್ರತೀತವಾಗುತ್ತದೆ. ದಾಸಬೋಧ ಮತ್ತು ಅವರ ಅನ್ಯವಾಙ್ಮಯದಲ್ಲಿ ತರ್ಕ ಶುದ್ಧ ವಿಚಾರಸರಣಿ ಮತ್ತು ಸಾಹಿತ್ಯ ಸೌಂದರ್ಯಗಳ ಹೃದ್ಯ ಮೀಲನವಾಗಿದೆ. ಸೃಷ್ಟಿಯ ಹಾಗೂ ಮಾನವೀ ವ್ಯವಹಾರದ ಸೂಕ್ಷ್ಮ ನಿರೀಕ್ಷಣ ಅವರ ಲೇಖನದಲ್ಲಿ ಪ್ರತಿಬಿಂಬಿತವಾಗಿದೆ'' ಎಂದು ಹೇಳಿದ್ದಾರೆ.

ರಾಮದಾಸರ 'ಮನದ ಶ್ಲೋಕಗಳು' (ಮನಾಚೇ ಶ್ಲೋಕ) ಈ ಕೃತಿಯು ವಿಸ್ತಾರದಲ್ಲಿ ಸಣ್ಣದಾದ ಗ್ರಂಥವು. ಎರಡು ನೂರು ಶ್ಲೋಕಗಳ ಈ ಕೃತಿಯು ಲಕ್ಷಾವಧಿ ಜನರಿಗೆ ಮುಖೋದ್ಗತ ಇರುವುದೇ ಈ ಮಹಾನ್ ಗ್ರಂಥದ ಜನಪ್ರಿಯತೆಯ ಪ್ರಮಾಣವೆಂದು ಹೇಳಬಹುದು.

ಈ 'ಮನಬೋಧದ' ಎರಡನೇ ಶ್ಲೋಕದ ಕನ್ನಡ ಅನುವಾದ (ಮೂಲ ಮರಾಠೀ ಸಹ) ಕೆಳಗೆ ಕೊಟ್ಟಿದ್ದೇನೆ.

ಮನವೆ, ಸಜ್ಜನರ ಭಕ್ತಿ ಪಥದಲ್ಲಿ ಹೋಗ ।
ಪಡೆ ಸಹಜವೇ ಶ್ರೀ ಹರಿ-ಲಾಭ ಯೋಗ ॥
ನೀ ಸರ್ವ ಜನರಲ್ಲಿಯ ನಿಂದ್ಯ ತ್ಯಜಿಸು ।
ಜನರಲ್ಲಿ ಇಹ ವಂದ್ಯವನೆ ನೀನು ಲಭಿಸು ॥
(ಮನಾ ಸಜ್ಜನಾ ಭಕ್ತಿ ಪಂಥೇಚಿ ಜಾವೆ ।
ತರೀ ಶ್ರೀ ಹರೀ ಪಾವಿಜೇ ತೋ ಸ್ವಭಾವೆ ॥
ಜನೀ ನಿಂದ್ಯ ತೇ ಸರ್ವ ಸೋಡೊನಿ ದ್ಯಾವೆ
ಜನೀ ವಂದ್ಯ ತೇ ಸರ್ವ ಭಾವೇ ಕರಾವೆ ॥)

ಈ ಮನಬೋಧದಲ್ಲಿ ಉದಾತ್ತ ನೀತಿ ಬೋಧವಿದೆ. ಭಕ್ತಿ ಮಹಾತ್ಮ್ಯ ಅದ್ವೈತದ ತತ್ವಜ್ಞಾನ ಮತ್ತು ಪ್ರಭು ರಾಮಚಂದ್ರನು ತನ್ನ ಭಕ್ತರನ್ನು ಸಂಕಟ ಮುಕ್ತ ಮಾಡುವನು ಎಂಬ ವಿಶ್ವಾಸವೂ ಇದೆ.

ಸಮರ್ಥರು ಸುಂದರಕಾಂಡ, ಮತ್ತು ಯುದ್ಧಕಾಂಡ ಹೀಗೆ ೧೩೦೦ ಶ್ಲೋಕಗಳ ರಾಮಾಯಣವನ್ನೂ ಬರೆದಿದ್ದಾರೆ.

ಛತ್ರಪತಿ ಶಿವಾಜೀ ಮಹಾರಾಜರ ಕಾಲದಲ್ಲಿ ಈ ರಾಮಾಯಣದ ವಾಚನವು ಪ್ರತಿಯೊಂದು ಗಡ ಕೋಟೆಯ ಮೇಲೆ ಆಗುತ್ತಿತ್ತು.

ರಾಮದಾಸರು ಸ್ಫುಟ ಅಭಂಗ ಓವೀ ಛಂದಗಳಲ್ಲಿ ಅನೇಕ ಭಕ್ತಿ ಪದಗಳನ್ನು ರಚಿಸಿದ್ದಾರೆ. ಅವರ ಭಕ್ತಿ ರಚನೆಗಳಲ್ಲಿ ನಾಮದೇವ-ತುಕಾರಾಮರ ರಚನೆಗಳಲ್ಲಿ ಕಂಡು ಬರುವ ಭಾವವಿವಶತೆ ಇದೆ. ದೇವರಭೆಟ್ಟಿಯ ಕ್ಷುಧೆ ಮತ್ತು ದರ್ಶನಕ್ಕಾಗಿ ಆಗುವ ಜೀವದ ತಳಮಳವು ಪ್ರಕಟವಾಗಿದೆ.

ವಾರಕರಿ ಸಂತರ 'ಭಾಗವತ ಧರ್ಮ', ಮತ್ತು ರಾಮದಾಸ ಪ್ರಣೀತ ಮಹಾರಾಷ್ಟ್ರ ಧರ್ಮ' ಇವುಗಳಲ್ಲಿಯ ತತ್ವಜ್ಞಾನವು ಭಿನ್ನವಿಲ್ಲ. ಪರಮಾರ್ಥ ಸಿದ್ಧಿ, ಆತ್ಮಸಾಕ್ಷಾತ್ಕಾರ, ಇವುಗಳೇ ಸಾಧಕನ ಅಂತಿಮ ಸಾಧ್ಯಧ್ಯೇಯ ವಿದ್ದುದನ್ನು ಈ ಎರಡೂ ಸಾಂಪ್ರದಾಯಗಳು ಮನ್ನಿಸುತ್ತವೆ. ಸಮರ್ಥರ ಉಪಾಸ್ಯ ದೈವತವು ರಾಮ ಇದ್ದರೂ ರಾಮ ಮತ್ತು ವಿಠ್ಠಲ ಇವರಲ್ಲಿ ಅವರು ಭೇದ ಮಾಡುವದಿಲ್ಲ.

ವಿಠ್ಠಲನ ಅವತಾರವು ಪತಿತರನ್ನು ಪಾವನ ಮಾಡುವದಕ್ಕಾಗಿ, ದೀನ ಅನಾಥರನ್ನು ಭವಸಾಗರ ದಾಟಿಸುವದಕ್ಕಾಗಿ ಇದ್ದ ಹಾಗೆಯೇ ರಾಮನ ಅವತಾರವು ದುಷ್ಟರ ನಿರ್ದಾಲನಕ್ಕಾಗಿ, ರಾಕ್ಷಸರ ವಿನಾಶಕ್ಕಾಗಿ ಆಗಿದ್ದರೂ, ಕೋದಂಡಧಾರಿ ರಾಮನದು, ಪತಿತ ಪಾವನನೆಂದೂ ಖ್ಯಾತಿ ಇದೆ. ಪತಿತಪಾವನ ರಾಮನ ದಾಸ ಅನಿಸಿಕೊಳ್ಳಲು ಸಮರ್ಥರಿಗೆ ಭೂಷಣವೆನ್ನಿಸುತ್ತಿದ್ದಿತು.

ಮರಾಠೀ ಸಂತ ಸಾಹಿತ್ಯದಲ್ಲಿ ಸಮರ್ಥ ರಾಮದಾಸರ ಸ್ಥಾನವು ಅನನ್ಯ ಅಸಾಧಾರಣ ಹಾಗೂ ಅಸಮಾಂತರವಾಗಿದೆ. ಅವರು ಬಲೋಪಾಸಕ, ರಾಜಕಾರಣಪಟು , ಯೋದ್ಧಾ ರಾಷ್ಟ್ರವಾದಿ ಸಂತರೆಂದೂ ಕೀರ್ತಿ ಪಡೆದಿದ್ದಾರೆ.

# ದಾಸಬೋಧದಲ್ಲಿ ಏನಿದೆ ? (ಏನಿಲ್ಲ?)

'ವ್ಯಾಸೋಚ್ಛಿಷ್ಟಂ ಜಗತ್ ಸರ್ವಂ' (ಮಹರ್ಷಿ ವ್ಯಾಸರು ಜಗತ್ತಿನಲ್ಲಿದ್ದ ಯಾವ ವಿಷಯವನ್ನೂ ಬಿಟ್ಟಿಲ್ಲ.) ಈ ವಚನವು ಸರ್ವಶ್ರುತ ಹ್ಯಾಗೆ ಆಡಿಗೆ ಯಾವ ವನಸ್ಪತಿಯೂ ತ್ಯಾಜ್ಯವಿಲ್ಲ, ಹಾಗೇ ಸಮರ್ಥ ರಾಮದಾಸರಿಗೂ ಯಾವ ವಿಷಯವೂ ತ್ಯಾಜ್ಯವಿಲ್ಲ.

ದಾಸಬೋಧಕ್ಕೆ ಶ್ರುತಿ, ಬ್ರಹ್ಮಸೂತ್ರ ಉಪನಿಷದ, ಭಗವತ್-ಗೀತಾ, ಶಿವಗೀತಾ ಆದಿ-ಗ್ರಂಥಗಳ ಮತ್ತು ಮುಖ್ಯವಾಗಿ ಆತ್ಮಾನುಭೂತಿಗಳ ಆಧಾರ ಇವೆ. ಇದನ್ನು ಓದಿದರೆ, ಕೇಳಿದರೆ ವರ್ತನೆ ಬದಲಿಸಿ, ಸಂಶಯದ ನಿರಸನವಾಗಿ, ಸಾಯುಜ್ಯ ಮುಕ್ತಿಯ ಮಾರ್ಗ ಸಿಗುವದು. ಅಜ್ಞಾನ, ಭ್ರಾಂತಿ, ದುಃಖ-ದೈನ್ಯ ಹೋಗಿ ಜ್ಞಾನ ದೊರೆವುದು.

ಯೋಗಿಗೂ ದುರ್ಲಭ ಇದ್ದ ವೈರಾಗ್ಯ, ಚಾತುರ್ಯ, ವಿವೇಕ ಬರುವದು. ಪತಿತರ ಪಾಪ ತೊಳೆದು, ಅವರು ಪಾವನ ಆಗುವರು. ಅಜ್ಞಾನ, ಮೂರ್ಖತನ ಇತ್ಯಾದಿ ದೋಷ ಹೋಗಿ, ಅವರು ಮೋಕ್ಷ ಪಡೆವರು. ಸಮರ್ಥರು ಗಣೇಶನನ್ನು ಸ್ತುತಿಸಿದ್ದು ಹೀಗೆ :-

ಧ್ಯಾನ ಗಣೇಶನ ಮಾಡಿ । ಜ್ಞಾನ ಬೆಳಕು ಬರುವದು ಓಡಿ । ಅವನ ಬಣ್ಣಿಸಿದರೆ ಹಾಡಿ ।, ಆಗುವಳು ಶಾರದೆ ಪ್ರಸನ್ನ ॥ ಇದ್ದವರು ಮೂರ್ಖ ಅವಲಕ್ಷಣ । ಹೀನರಗಿಂತೂ ಹೀನ । ಆಗವರು ದಕ್ಷ ಪ್ರವೀಣ । ಸರ್ವಕ್ಷೇತ್ರಗಳಲ್ಲಿ ॥ ಹೀಗೆ ಪರಮ ಸಮರ್ಥ । ಗಣೇಶ, ಪೂರೈಸುವನು ಮನೋರಥ । ಸಪ್ರಚೀತ ಭಕ್ತನ ಸ್ವಾರ್ಥ । ಕರುಣಿಸುವನು ಕಲಿಯುಗದಿ ॥

ಶಾರೆಯನ್ನು ಸ್ತುತಿಸಿದ್ದು ಹೀಗೆ :-

ಇನ್ನು ವಂದಿಸುವೆ ವೇದ ಮಾತಾ ।

ಶ್ರೀ ಶಾರದಾ ಬ್ರಹ್ಮ ಸುತಾ । ಶಬ್ದಮೂಲ ದೇವತಾ । ಮಹಾಮಾಯಾ ॥

ಸಂತ ಮಹಂತರ ಶಾಂತಿಯಲ್ಲಿ । ಮಹೇಶ್ವರನ ಶಕ್ತಿಯಲ್ಲಿ । ನಿರಿಚ್ಛ ಜ್ಞಾನಿಗಳ ವಿರಕ್ತಿಯಲ್ಲಿ । ಶೋಭಿಸುವಳು ॥

ಪರಮಾರ್ಥ ಮಾರ್ಗದ ವಿಚಾರ ।

ಆಯ್ದು ತೋರುವಳು ಸಾರಾಸಾರ ।

ದಾಟಿಸುವಳು ಭವ ಪಾರ । ಶಬ್ದಯೋಗದಿಂದ ॥

ನಂತರ ಅವರು ಸದ್ಗುರು ಸಂತ, ಶ್ರೋತೃ, ಕವಿ, ಸಭಾ, ಪರಮಾರ್ಥ ಮತ್ತು ನರದೇಹದ ಸ್ತವನ ಹಾಡಿದ್ದಾರೆ.

ಸದ್ಗುರುವಿನ ಬಗ್ಗೆ : ಮಾಯೆಗೂ ಸ್ಪರ್ಶಿಸಲು ಅಸಾಧ್ಯ । ಎಂದು ಹೇಳಿ ಅವರು ಶ್ರುತಿ ''ನೇತಿ-ನೇತಿ'' ಅಂದಿವೆ. ಅಂಥ ಸದ್ಗುರುನನ್ನು ನಾನು ಹೇಗೆ ಬಣ್ಣಿಸಲಿ ?

'' ಬಣ್ಣಿಸಲಾರೆನು ಸದ್ಗುರುನ । 'ಅವರ್ಣನೀಯ' ಇದೇ ಅವನ ವರ್ಣನ । ಅಂತರ್ಯಾಮಿಯೇ ಅರಿವ ಖೂನ-।-ಅಂತರ ಸ್ಥಿತಿಯ ॥'' ಎಂದು ಹೇಳಿದ್ದಾರೆ.

**ಸಂತರ ಬಗ್ಗೆ :** ತ್ರೈಲೋಕ್ಯಕ್ಕಿಂತಲೂ ಅನ್ಯದ । ವೇದ ಶ್ರುತಿಗಳಿಗೂ ತಿಳಿಯದ । ಪ್ರಕಟಿಸುವದು ಸಂತರಿಂದ । ಹೃದಯದಿ ಪರಬ್ರಹ್ಮ ॥

**ಶ್ರೋತಾ ಜನರ ಬಗ್ಗೆ :** ಕಥಿಸಹೋದೊಡೆ ಯಾವ ವಿಷಯವನ್ನೂ । ತಿಳಿದಿಹರು ಮೊದಲೇ ಅದನ್ನು । ಅವರ ಮುಂದೆ ಜ್ಞಾನಿಯ ಭೂಮಿಕೆಯನ್ನು । ನಟಿಸಲಿ ನಾ ಹೇಗೆ ? ॥ ಎಂದು ಕೇಳುತ್ತಾರೆ ! ದಾಸಬೋಧದಲ್ಲಿ ಮೂರ್ಖ ಮತ್ತು ಪಠಿತ ಮೂರ್ಖರ ಲಕ್ಷಣಗಳು ಬಹಳೇ ಮನೋರಂಜಕ ಇವೆ.

'' ಈ ಪ್ರಾಪಂಚಿಕ ಜನ । ಯಾರಿಗೆ ಇಲ್ಲ ಆತ್ಮಜ್ಞಾನ ।

ಯಾರು ಕೇವಳ ಅ-ಜಾಣ । ಅವರು ಮೂರ್ಖ ॥

ಯಾವನ ಹೊಟ್ಟೆಯಲಿ ಹುಟ್ಟಿದ ।

ಅವಗೇ ಮಾಡುವನು ವಿರೋಧ ।

ಕೇಳುವ ಮಾತು ಸಖಿ-ಹೃದಯದ ॥ ಅವನೊಬ್ಬ ಮೂರ್ಖ ॥

ದೇವದ್ರೋಹಿ, ಗುರು-ದ್ರೋಹಿ । ಮಾತೃ ದ್ರೋಹಿ, ಪಿತೃದ್ರೋಹಿ । ಬ್ರಹ್ಮದ್ರೋಹಿ, ಸ್ವಾಮಿದ್ರೋಹಿ । ಅವನೊಬ್ಬ ಮೂರ್ಖ ॥

**ಪಠಿತ ಮೂರ್ಖ ಲಕ್ಷಣ :**

ಬಹುಶ್ರುತ ಮತ್ತು ವ್ಯುತ್ಪನ್ನ । ಪ್ರಾಂಜಲ ನುಡಿವ ಬ್ರಹ್ಮಜ್ಞಾನ । ಮಾತ್ರ ಇಡುವ ದುರಾಶಾ, ಅಭಿಮಾನ । ಅವನೊಬ್ಬ ಪಠಿತ ಮೂರ್ಖ ॥

ಜ್ಞಾನ ಹೇಳಿ ಸ್ವಾರ್ಥ ಸಾಧಿಸುವ । ಕೃಪಣನಂತ ಹಣ ಸಂಗ್ರಹಿಸುವ । ದುಡ್ಡಿಗಾಗಿ ಪರಮಾರ್ಥ ಉಪಯೋಗಿಸುವ । ಮನುಜ, ಪಠಿತ ಮೂರ್ಖ ॥

ಮೂರ್ಖತನ, ಕುವಿದ್ಯೆಗಳನ್ನು ತ್ಯಜಿಸಿ, ಉತ್ತಮಗುಣ ಎತ್ತಿದರೆ, ಮನುಷ್ಯನು ತನ್ನ ಉದ್ಧಾರ ಮಾಡಬಹುದು.

ದೇಹದಲ್ಲಿರುವ ಸತ್ವ, ರಜ ಮತ್ತು ತಮ ಈ ತ್ರಿಗುಣಗಳ ಸವಿಸ್ತರ ಲಕ್ಷಣಗಳನ್ನು ದಾಸಬೋಧದಲ್ಲಿ ನೋಡಬಹುದು. ಸತ್ವಗುಣದಿಂದ ಭಗವದ್ಭಕ್ತಿ ರಜದಿಂದ । ಜನ್ಮದ ಪುನರಾವೃತ್ತಿ । ತಮೋಗುಣದಿಂದ ಅಧೋಗತಿ । ಪಡೆವರು ಜನ ॥

ಭಾವಿಕ, ಸಾತ್ವಿಕ, ಪ್ರೇಮಳ, ಶಾಂತಿ, ದಯಾ, ಕ್ಷಮಾಶೀಲ, ಲೀನ । ಮೃದುವಚನಿ, ಇತ್ಯಾದಿ ಸದ್ಗುಣಗಳಿಂದ ಸದ್ವಿದ್ಯೆ ಪ್ರಾಪ್ತ ಆಗುತ್ತವೆ. ವಿರಕ್ತನ ಲಕ್ಷಣ ರೂಢಿಸಿದರೆ ಮೈಯಲ್ಲಿ ಯೋಗೇಶ್ವರನ ಶಕ್ತಿ ಬರುತ್ತದೆ.

ವಿದ್ವಾನ ಇದ್ದೂ (ಪಠಿತ) ಮೂರ್ಖ ಇದ್ದವನ ಲಕ್ಷಣ ಬಿಟ್ಟರೆ, ಭವಸಾಗರ ದಾಟಿ, ಪರಮಾರ್ಥದ ದಂಡೆ ಲಭಿಸುವದು.

'ಗುಣಪರೀಕ್ಷೆ' ಈ ಸಮಾಸಗಳಲ್ಲಿ(ಅ.ಬ,ಕ,ಡ,) ಬಣ್ಣಿಸಿದ ಒಬ್ಬ ಪಠಿತ ಮೂರ್ಖನ ಶೋಕ ದೀರ್ಘ ಕಥೆ, ಹೃದಯಕ್ಕೆ ಪೀಡನೆ ಕೊಡುತ್ತದೆ. ಅವನಿಗೆ ಪ್ರಪಂಚ ಮತ್ತು ಪರಮಾರ್ಥ ಇವೆರಡೂ ಕೈಗೆ ಬರಲಿಲ್ಲ.... ಬಂದುದು ಕೇವಳ ದಾರುಣ ದುಃಖ ಮತ್ತು ದೈನ್ಯ !

ದೇಹ (ಸತ್ಯ) ಸ್ವರೂಪ, ಗರ್ಭವಾಸ, ಮತ್ತು ಜನ್ಮದ ನಿರೂಪಣೆ ವಾಚಕನಿಗೆ ವಿಚಾರ ಮಾಡ ಹಚ್ಚುತ್ತದೆ. ಮುಂದೆ ಬಣ್ಣಿಸಿದ ಆಧ್ಯಾತ್ಮಿಕ, ಆದಿ-ಭೌತಿಕ, ಮತ್ತು ಆದಿ ದೈವಿಕ ಈ ತ್ರಿವಿಧ ತಾಪಗಳ ನಿರೂಪಣೆ ಓದುವಾಗ, ಸಮರ್ಥರ ನಿರೀಕ್ಷಣ ಶಕ್ತಿಯ ಬಗ್ಗೆ ಆಶ್ಚರ್ಯ ಆಗುತ್ತದೆ.

**ಆಧ್ಯಾತ್ಮಿಕ ತಾಪ :** ದೇಹ, ಇಂದ್ರಿಯ ಮತ್ತು ಪ್ರಾಣ ! ಈ ಮೂರೂ ಘಟಕಗಳ ಕಾರಣ । ಪಡೆವನು ಸುಖ-ದುಃಖಗಳನ್ನ । ಅವರ ಹೆಸರು ಆಧ್ಯಾತ್ಮಿಕ ತಾಪ. ಈ ತಾಪದ ಉದಾಹರಣೆ- ಹೊಟ್ಟೆಕಡೆತ, ಕಾಮಣಿ, ಅಜೀರ್ಣ । ಕುರು, ಗಂಡಮಾಲೆ ಹುಣ್ಣು ಮೂಗಿನ । ವ್ಯಾಧಿ- ಪರಊರಿನ -ನೀರಿನ । ಇದು ಆಧ್ಯಾತ್ಮಿಕ ತಾಪ.

**ಆದಿ ಭೌತಿಕ ತಾಪ :** ಸಂಯೋಗದಿಂದ ಸರ್ವಭೂತಗಳ । ಹುಟ್ಟುವವು ಸುಖ-ದುಃಖ ಸಕಳ । ಭಂಗಿಸುವದು ಮನೋಬಲ । ಆದಿ ಭೌತಿಕ ತಾಪದಿಂ ॥

ಉದಾ : - ಜಿರಲೆ, ಚೇಳು -ಹಾವಿನ । ಹುಲಿ, ತೋಳು ಶೂಕರನ । ಕಾಡು ಹಂದಿ, ಎರಳೆ -ಕೋಡಿನ । -ದಂಶ-ಭೇದ ಆದಿ ಭೌತಿಕ ತಾಪ ॥

ಬಾಲ್ಯದಲ್ಲಿ ತಾಯಿಯ ಮೃತ್ಯು । ತಾರುಣ್ಯದಲ್ಲಿ ಪತ್ನಿಯ ಮೃತ್ಯು । ಮುಪ್ಪಿನಲ್ಲಿ ಮಗನ ಮೃತ್ಯು । ಇವು ಆದಿ ಭೌತಿಕ ತಾಪ ॥

ಆಧಿ ದೈವಿಕ ತಾಪ : ಶುಭಾಶುಭ ಕರ್ಮದಿಂ ಜನಾ । ಸ್ವರ್ಗ-ನರಕ ಯಮ ಯಾತನಾ । ಸತ್ತ ಮೇಲೆ ಭೋಗಿಸುವರು ನಾನಾ । ಇದರ ಹೆಸರು ಆಧಿ ದೈವಿಕ (ತಾಪ) ॥

ಉದಾ : ದೇಹ, ದ್ರವ್ಯ ಬಲದಿಂದ । ಪ್ರಜಾ -ರಾಜಾ ಬಲದಿಂದ । ವಿವಿಧ ಸಾಮರ್ಥ್ಯಗಳಿಂದ ।ದುಷ್ಕೃತ್ಯ ಮಾಡುವರು ॥ ಮಾಡುವರು ಮಾಡಲಾರದ । ಕೃತ್ಯ ನೀತಿ ತತ್ವ ಇಲ್ಲದ । ಯಮ ಯಾತನಾ ಭೋಗದಿಂದ । ಹೋಗುವದು ಜೀವ ।

ಮೃತ್ಯು ನಿರೂಪಣೆಯಲ್ಲಿ : ಸತತ ನಡೆದಿದೆ ಸಂಸಾರದ ಸಂಚಾರ । ಮರಣ ಇಡದು ಉದ್ಧರಿ ಯಾರ । ಅಳತೆಯ ತಕ್ಕಡಿಯಲ್ಲಿ ಶರೀರ । ತೂಗುತಿದೆ ಪ್ರತಿಕ್ಷಣ ॥ ಹೀಗೆ ಪ್ರಾರಂಭ ಮಾಡಿ ಸಮರ್ಥರು, 'ಸಾವು (ಮೃತ್ಯು ಯಾರನ್ನೂ ಬಿಡದು' ಈ ಕಠೋರ ಸತ್ಯವನ್ನು ನಿರೂಪಿಸಿದ್ದಾರೆ.

ಉದಾ : ಮಾಡಿದರೆ ಸಾವು ದಾಳಿಯ । ಯಾರೂ ಕೊಡರು ಬೆಂಬಲ, ಸಹಾಯ । ಸರ್ವರಿಗೆ ಸಾವು ಧ್ರುವ-ಸಮಯ-।-ಹಿಂದೆ ಮುಂದೆ ಅಷ್ಟೇ ! ॥

ಹೋದರು ವಿದ್ಯೆಯ ಸಾಗರ । ಹೋದರು ಬಲದ ಶಿಖರ । ಹೋದರು ಧನದ ಕುಬೇರ । ಮೃತ್ಯು ಪಂಥಕ್ಕೆ ॥

**ವೈರಾಗ್ಯ ನಿರೂಪಣೆಯಲ್ಲಿ :**

ಸಂಸಾರ ಅಂದರೆ ಮಹಾಪೂರ । ಅದರಲ್ಲಿ ಜಲಚರ ಅಪಾರ । ಕಡೆಯಲು ಬರುವ ನಾಗರ-।-ಹಾವು 'ಕಾಲ'ದ !॥ ಹೀಗೆ ಆರಂಭಿಸಿ, ಸಮರ್ಥರು ಸಂಸಾರದಲ್ಲಿಯ ದುಃಖ-ದೈನ್ಯಗಳ ವರ್ಣನೆ ಅತ್ಯಂತ ಪ್ರಭಾವಿ, ಉಪಮಾ -ಉತ್ಪ್ರೇಕ್ಷಾದಿ ಅಲಂಕಾರ ಯುಕ್ತ ಭಾಷೆಯಲ್ಲಿ ಮಾಡಿದ್ದಾರೆ. ಕೊನೆಗೆ, ಹಾಗೇ ವಿಷಯ ಸುಖದ ಸಿಹಿ । ಆಗುವದು ಕೊನೆಗೆ ಕಹಿ । ಅನ್ನಿರಿ ರಾಮನಿಗೆ, 'ತ್ರಾಹಿ' । ಭಕ್ತಿಯಿಂ ಶರಣ ಹೋಗಿ ॥

ಈ ಸಂಸಾರದ ದುಃಖ ತಪ್ಪಿಸುವ ಉಪಾಯ ಕೇಳಿದ ಶ್ರೋತಾ -ಭಾವಿಕನಿಗೆ ಸಮರ್ಥರು. ''ಏಕಭಾವದಿಂದ ದೇವರ ಭಜನೆ ಮಾಡು'' ಅಂತ ಉಪದೇಶಿಸುತ್ತಾರೆ. ಈ ಭಜನೆಯ ರೀತಿಯನ್ನು - ಸಮರ್ಥರು 'ನವವಿಧ ಭಕ್ತಿ' ಈ ದಶಕದಲ್ಲಿ ವಿಸ್ತಾರವಾಗಿ ನಿರೂಪಿಸಿದ್ದಾರೆ.

**೧) ಶ್ರವಣ ಭಕ್ತಿ :** ಹೇಗಿಹವು ನವವಿಧ ಭಕ್ತಿ । ಹೇಗೆ ಚತುರ್ವಿಧ ಭಕ್ತಿ । ಹೇಗೆ ದೊರೆವುದು ಉತ್ತಮಗತಿ, ಪಿಂಡ ಬ್ರಹ್ಮಾಂಡದ ರಚನೆ । ನಾನಾ ತತ್ವ ವಿವಂಚನೆ । ಸಾರಾಸಾರ ವಿಚಾರಣೆ, ವೇದ ಶಾಸ್ತ್ರ ಪುರಾಣ । ಮಹಾವಾಕ್ಯಗಳ ವಿವರಣ। ನಾಲ್ಕು ದೇಹಗಳ ನಿರಸನ ಮಾಡುವ ರೀತಿ, । ಸಗುಣ ದೇವ ಚರಿತ್ರ, ನಿರ್ಗುಣನ ತತ್ವಗಳ ಮಂತ್ರ, ಈ ಎರಡನ್ನೂ ಕೇಳುತ್ತಿರಬೇಕು.

**೨) ಕೀರ್ತನ ಭಕ್ತಿ :** ಭಕ್ತಿ ಜ್ಞಾನ, ವೈರಾಗ್ಯ ಲಕ್ಷಣ, ನೀತಿ ನ್ಯಾಯ ಸ್ವಧರ್ಮ ರಕ್ಷಣ, ಇದ್ದವನು ಪರಮದಕ್ಷ ವಿಚಕ್ಷಣ ಪಾಲಿಸುವನು ಸರ್ವ ॥ ಸಗುಣನ ಕಥೆಯೇ ಕೀರ್ತನ । ಅದ್ವೈತದ ವಿವೇಚನವು ನಿರೂಪಣ । ಬಣ್ಣಿಸಬೇಕು ಮಾಡಿ ಸಗುಣ ರಕ್ಷಣ । ಪರಮಾತ್ಮನನ್ನು ॥ ಹೋಗುವವು ಕೀರ್ತನದಿಂ ದೋಷ ಅತಿ । ದೊರೆವುದು ಉತ್ತಮ ಗತಿ । ಆಗುವದು ನಿಃಸಂದೇಹ ಭಗವತ್ ಪ್ರಾಪ್ತಿ । ಕೀರ್ತನದಿಂದ

**೩) ನಾಮಸ್ಮರಣ ಭಕ್ತಿ :** ಇರಲಿ ಸಂಪತ್ತಿ ವಾ ವಿಪತ್ತಿ । ಬರಲಿ ಯಾವದೂ ಕಾಲಗತಿ । ನಾಮಸ್ಮರಣದ ಸ್ಥಿತಿ । ಬೇಕು ಸ್ಥಿರ ॥ ನಾಮದಿಂದ ನಾಶ ಸಂಕಟಗಳ । ನಿವಾರಣೆ ವಿಘ್ನಗಳ । ಪ್ರಾಪ್ತಿ ಉತ್ತಮ ಪದಗಳ । ಇಹುದು ಸಹಜ ॥ ನಾಮಕ್ಕೆ ಅಧಿಕಾರಿ ನಾಲ್ಕೂ ವರ್ಣ । ನಾಮಕ್ಕಿಲ್ಲ ದೊಡ್ಡ -ಸಣ್ಣ । ದಾಟುವರು ಜಡ, ಮೂಢ ಜನ-।-ಕೂಡಿ ನಾಮದಿಂದ ॥

**೪) ಪಾದಸೇವನೆ ಭಕ್ತಿ :**

ಅದುವೇ ತಿಳಿಯಿರಿ ಪಾದ ಸೇವನ । ಭಕ್ತಿ ಸಕಾಯಾ -ವಾಚಾ-ಮನ ।ಚರಣಸೇವೆ ಸದ್ಗುರುನ । ಸದ್ಗತಿಗಾಗಿ ॥

ಸದ್ಗುರು ಪರವಸ್ತು ತೋರುವನು । ಸಕಲ ಸಾರಾಸಾರ ವಿಚಾರಗಳನ್ನು । ಸ್ಥಿರಿಸುವನು ಪರಬ್ರಹ್ಮನನ್ನು । ದೃಢವಾಗಿ ಹೃದಯದಿ॥

**೫) ಅರ್ಚನ ಭಕ್ತಿ :** ದೇವ ಬ್ರಾಹ್ಮಣ ಅಗ್ನಿ ಪೂಜನ । ಸಾಧು ಸಂತ ಅತಿಥಿ ಪೂಜನ । ಯತಿ ಸನ್ಯಾಸಿ ಧೇನು ಪೂಜನ । ಇದು ಐದನೇ ಭಕ್ತಿ ॥ ಕಾಯಾ ವಾಚಾ ಮನದಿಂದ । ಚಿತ್ತ, ವಿತ್ತ, ಪ್ರಾಣದ । ಸದ್ಭಾವದಿಂ ದೇವರಿಗೆ ಅರ್ಪಣದ । ಕೃತಿಯೇ ಅರ್ಚನ ಭಕ್ತಿ ॥

**೬) ವಂದನ ಭಕ್ತಿ :** ಮಾಡಬೇಕು ದೇವರ ಮೂರ್ತಿಗಳಿಗೆ । ಸಾಧುಸಂತ ಗುರುಗಳಿಗೆ, । ಸಾಷ್ಟಾಂಗ ನಮಸ್ಕಾರ, ತಥಾ ಅನ್ಯರಿಗೆ । ಯಥಾಯೋಗ್ಯ ॥

ಶಿರ (ಚ್ಛೇದ) ಕ್ಕಿಂತ ಹೆಚ್ಚು ದಂಡವಿಲ್ಲ । ಅನ್ನುವರು ಜನ ಸಕಲ । ಅಂತೇ ಶಿರಬಾಗಿ ನಮಿಸಬೇಕು ಸರ್ವಕಾಲ । ಗುರು ದೇವರಿಗೆ ॥ ನಮಸ್ಕಾರಕ್ಕೆ ಖರ್ಚು ಇಲ್ಲ, ಕಷ್ಟವಿಲ್ಲ, ಉಪಕರಣ ಸಾಮಗ್ರಿ ಬೇಕಾಗಿಲ್ಲ ! ಅಂತೇ ನಮಸ್ಕಾರವು ಶ್ರೇಷ್ಠ, ನಮಸ್ಕಾರದಿಂ ದೊರೆವರು ವರಿಷ್ಠ !

**೭) ದಾಸ್ಯ ಭಕ್ತಿ :** ಬಿದ್ದ ಕೆಲಸಗಳೆಲ್ಲ ಮಾಡಬೇಕು; ಸದಾ ಸಮೀಪ ಇರಬೇಕು ದೇವರ ಬಾಗಿಲಲ್ಲಿ, ಬಿದ್ದ ಗುಡಿ ಎಬ್ಬಿಸಬೇಕು, ಕಟ್ಟಡಗಳ ಜೀರ್ಣೋದ್ಧಾರ ಮಾಡಬೇಕು. ಹಬ್ಬ ವೈಭವದಿಂ ನಡೆಸಬೇಕು, ನೀಚರದೂ ದಾಸ್ಯ ಮಾಡಬೇಕು. ಸಂಭಾಷಣ ಬೇಕು ಕರುಣಾಯುತ, ಮಧುರ ಸ್ತುತಿ ಸಹಿತ. ಹೀಗೆ ದಾಸ್ಯ ಮಾಡಬೇಕು - ಭಗವಂತನ, ಇದೇ ಪ್ರಕಾರ ಸದ್ಗುರುನ ! ಇದು ಆಗದಿರೆ ಮಾನಸ ಪೂಜನವನ್ನಾದರೂ ಮಾಡಬೇಕು.

**೮) ಸಖ್ಯಭಕ್ತಿ :** ದೇವನ ಕೂಡ ಸಖ್ಯ ಮಾಡುವ ರೀತಿ ಸಮರ್ಥರು ಹೇಳಿದ್ದು ಹೀಗೆ -

ದೇವನ ಕೂಡ ಸಖ್ಯ ಮಾಡಬೇಕು; ಪ್ರೇಮ ಸೂತ್ರದಿಂ ಕಟ್ಟಬೇಕು. ಭಕ್ತಿಭಾವ, ಭಜನೆ, ಕಥಾ ಕೀರ್ತನ, ಗಾಯನ ದೇವನಿಗೆ ಪ್ರಿಯ. ಹಾಗೇ ತಾವೂ ವರ್ತಿಸಬೇಕು. ದೇವರ ಹಾಗೇ ಗುರು, ಅಂತೇ ಗುರುಗಳೊಂದಿಗೆಯೂ ಸಖ್ಯ ಇಡಬೇಕು.

ಸಖ್ಯತ್ವ ಪಡೆಯಲು ದೇವನ । ಬಿಡಬೇಕು ತಮ್ಮವರ ಬಂಧನ । ಮಾಡಬೇಕು ಸರ್ವ ಅರ್ಪಣ । ಪ್ರಾಣಕೂಡ !''

**ಆತ್ಮ ನಿವೇದನ :** ಜೀವ-ಶಿವದ ಉಪಾಧಿ ಮುಗಿದಲ್ಲಿ । ಅಸ್ತಿತ್ವ ಜೀವ-ಶಿವದ ಉಳಿವುದೆಲ್ಲಿ ? । ಆದೊಡೆ ಸ್ಥಿರ ಬುದ್ಧಿ ಸ್ವರೂಪದಲ್ಲಿ । ಅಹಂ ಎಲ್ಲಿ ? ॥ ನಾನು ಮಿಥ್ಯಾ, ಸತ್ಯ ದೇವ । ದೇವ ಭಕ್ತ ಅನನ್ಯ ಭಾವ । ಈ ವಚನದ ಅನುಭವ । ಇದ್ದವಗೇ ಪ್ರಚೀತಿ ॥ ಪಂಚಭೂತಗಳಲಿ 'ಪರಮ' ಆಕಾಶ । ಸಕಲ ದೇವರಲ್ಲಿ ಜಗದೀಶ । ಹಾಗೇ ಭಕ್ತಿಗಳಲಿ ವಿಶೇಷ ನವಮ ಭಕ್ತಿ !

ಇಂಥ ನವಮ ಭಕ್ತಿಗಳಿಂದ ದೊರೆವುದು ಸಾಯುಜ್ಯ ಮುಕ್ತಿ. ಸಾಲೋಕ್ಯತಾ, ಸಮೀಪತಾ, ಸ್ವರೂಪತಾ ಮತ್ತು ಸಾಯುಜ್ಯ ಹೀಗೆ ನಾಲ್ಕು ಮುಕ್ತಿಗಳಿಹವು. ಮೊದಲಿನ ಮೂರು ಮುಕ್ತಿಗಳಿಗೆ ಅಂತ ಇಹುದು ಮಾತ್ರ ನಾಲ್ಕನೇ ಸಾಮುಜ್ಯಮುಕ್ತಿ ಅವಿನಾಶಿ.

ಐದನೇ 'ಮಂತ್ರಗಳ' ದಶಕದಲ್ಲಿಯ 'ಗುರುನಿಶ್ಚಯ' ಈ ಸಮಾಸದಲ್ಲಿ - ವಿಪ್ರ ಪೂಜನದಿಂದ ದೊರೆಯುವಾಗ ದೇವ, ಏನು ಪ್ರಯೋಜನ ಸದ್ಗುರು ಮಾಡುವ ?' ಈ, ಶಿಷ್ಯನ ಪ್ರಶ್ನೆಗೆ ಸಮರ್ಥರು ಕೊಟ್ಟ ಉತ್ತರ -ಹೀಗೆ-ಸ್ವಧರ್ಮಕ್ಕೆ ಬ್ರಾಹ್ಮಣನು ಅವಶ್ಯ ಇದ್ದರೂ ಸದ್ಗುರುವಿನ ಹೊರತು ದೊರೆಯದು ಜ್ಞಾನ, ತಪ್ಪದು ಜನ್ಮ-ಮರಣ. ಕಣ್ಣಲ್ಲಿ ಅಂಜನ ಹಾಕಿದರೆ ; ಹೇಗೆ ದೃಷ್ಟಿಗೆ 'ನಿಧಾನ' ಕಾಣುವದೋ ಹಾಗೇ ಸದ್ಗುರು ಉಪದೇಶದಿಂದ ಬೆಳಗುವದು ಜ್ಞಾನ !.

**'ಗುರುಲಕ್ಷಣ'ದಲ್ಲಿ -**

ಆ ಆ ಜಾತಿಯ ವ್ಯವಸಾಯ, ವ್ಯಾಪಾರ, ಹೊಟ್ಟೆ ತುಂಬಿಕೊಳ್ಳುವ ತಂತ್ರ-ಮಂತ್ರ ಕಲಿಸುವವರು ಸದ್ಗುರುಗಳಲ್ಲ. ತಾಯಿ-ತಂದೆ ಅವರೂ ಗುರು, ಮಾತ್ರ ಭವದಾಟಿಸುವ 'ಸದ್ಗುರು' ಅವರಲ್ಲ !

ಬ್ರಹ್ಮ ಜ್ಞಾನ ಉಪದೇಶಿಸಿ, ಅಜ್ಞಾನ ಕತ್ತಲೆ ಓಡಿಸಿ, ಜೀವಾತ್ಮ-ಪರಮಾತ್ಮನನ್ನು ಕೂಡಿಸಿ, ಭಕ್ತ-ದೇವನ ದ್ವೈತ ತೀರಿಸಿ, ಅವರ ಐಕ್ಯ ಮಾಡಿಸುವವನೇ ಸದ್ಗುರು.

**ಶಿಷ್ಯ ಲಕ್ಷಣ :**

ಸದ್ಗುರು ವಿನಾ ಸತ್-ಶಿಷ್ಯನ ಜೀವನ ವ್ಯರ್ಥ, ಹಾಗೇ ಸತ್‌ಶಿಷ್ಯನ ಹೊರತೂ, ಸದ್ಗುರುವಿನಾ ಕಷ್ಟಗಳೂ ನಿರರ್ಥಕ! ಶಿಷ್ಯನು ನಿರ್ಮಳ, ಸತ್‌ಶೀಲ, ವಿರಕ್ತ, ಅನುತಾಪಿ ಇರಬೇಕು. ಭವ ದುಃಖದಿಂದ ತ್ರಸ್ತ, ತ್ರಿವಿಧ ತಾಪಗಳಿಂದ ತಪ್ತ, ಅವನೇ ನಿಜವಾಗಿ ಅಧಿಕಾರಿ ಪರಮಾರ್ಥ ವಿಷಯದಲ್ಲಿ.

**ಉಪದೇಶ ಲಕ್ಷಣ :** ಅನೇಕರು ಮಂತ್ರೋಪದೇಶ ಮಾಡುವರು, ಜಪ ಮಾಡಿಸುವರು. ಮಾತ್ರ ಜ್ಞಾನದ ಸಮಾನ, ಏನೂ ಪವಿತ್ರ, ಉತ್ತಮ ಸಾಧನೆ ಇಲ್ಲ. ಅಂತೇ ಆತ್ಮಜ್ಞಾನದ ಉಪದೇಶವೇ ಸರ್ವಶ್ರೇಷ್ಠ. ಸಕಳ ತೀರ್ಥಗಳ ಸಂದರ್ಶನ, ಸ್ನಾನ-ದಾನಗಳಿಗಿಂತ ಹೆಚ್ಚು ಜ್ಞಾನದ ಪ್ರಾಪ್ತಿ.

**ಬಹುವಿಧ ಜ್ಞಾನ ನಿರೂಪಣೆ : -**

ಯಾವ ಜ್ಞಾನವು ಪ್ರಾಂಜಳ (ಶುದ್ಧ) ಇಲ್ಲ, ಅದು ನಿಷ್ಫಳ. ಜ್ಞಾನದ ಹೊರತು ತಳ-ಮಳ ಹೋಗದು. 'ಜ್ಞಾನ' ವೆಂದೊಡೆ 'ಬ್ರಮ' ಆಗುವದು । ಅದಕ್ಕಾಗಿ, ಅದರ ಮರ್ಮ ಹೀಗಿದೆ : ಭವಿಷ್ಯ ಅರಿವುದು, ವೇದ ವಿದ್ಯಾ, ಸಂಗೀತಾದಿ ಅರವತ್ನಾಲ್ಕು ಕಲಾ, ವ್ರತ ದೀಕ್ಷಾ, ನಾನಾ ವಸ್ತು; ಪ್ರಾಣಿ-ಪಕ್ಷಿಗಳ ಪರೀಕ್ಷಾ ಇವು ಜ್ಞಾನವಲ್ಲ. 'ಜ್ಞಾನ'ವೆಂದರೆ - ಆತ್ಮಜ್ಞಾನ. 'ನಾನು ಯಾರು?' ಇದರ ಶೋಧ ಮಾಡಿದೊಡೆ, ದೇಹಾತೀತದ ಪ್ರಚೀತಿ (ಅನುಭೂತಿ) ಬಂದು ಆತ್ಮಸ್ವರೂಪದ ನಿಶ್ಚಿತ 'ಅರಿವು' ಆಗುತ್ತದೆ. ಪುರಾಣ ಓದಿಯೂ ತಿಳಿಯದು । ವೇದಗಳೂ ಹೋಗಿಹವು ದಣಿದು । ಅಂಥ 'ಜ್ಞಾನ' ಬೋಧಿಸುವೆ ಇಂದು । ಗುರುಕೃಪೆಯಿಂದ ॥ ಹೀಗೆ ಹೇಳಿ - ಸಮರ್ಥರು ಮುಂದೆ ಹೇಳುತ್ತಾರೆ. ಸದ್ಗುರು ವಚನವೇ ವೇದಾಂತ । ಸದ್ಗುರು ವಚನವೇ ಸಿದ್ಧಾಂತ । ಸದ್ಗುರು ವಚನವೇ ನಿಶ್ಚಿತ ಪ್ರಚೀತ ಆತ್ಮಜ್ಞಾನ ॥

ಕೇಳು ಶಿಷ್ಯಾ ಅದರ ಮರ್ಮ । ಸ್ವಯಂ ನೀನೆ ಇರುವಿ ಬ್ರಹ್ಮ । ಈ ವಿಷಯದಲ್ಲಿ ಸಂದೇಹ ಭ್ರಮ । ಇಡಬೇಡ ॥

ವಿಶ್ವದ ಕೂಡ ನಿರ್ಮಿತ ಪಂಚಭೂತ-।-ಗಳ ಆಗುವದು ಕಲ್ಪಾಂತದಲ್ಲಿ 'ಅಂತ' । ಪ್ರಕೃತಿ-ಪುರುಷ ಸಹ ಸಮಾಪ್ತ । ಪರಬ್ರಹ್ಮನಲ್ಲಿ ॥

ತೀರುತ್ತಲೇ ದೃಶ್ಯ ಪದಾರ್ಥ । ಅಹಂ ತನವೂ ಆಗುವದು ಸಮಾಪ್ತ । ಐಕ್ಯ ರೂಪವೇ ಇಹುದು ಮೀಲಿತ । ಬ್ರಹ್ಮನಲ್ಲಿ ಸಮಾಪ್ತ ॥ ಬದ್ಧಲಕ್ಷಣ - ಈ ಸೃಷ್ಟಿಯಲ್ಲಿ ಬದ್ಧ, ಮುಮುಕ್ಷು, ಸಾಧಕ ಮತ್ತು ಸಾಧು ಹೀಗೆ ಚತ್ವಾರ (ನಾಲ್ಕು) ವರ್ಗಗಳಿವೆ. ಅವುಗಳಲ್ಲಿಯ ಬದ್ಧನ ಲಕ್ಷಣ ಹೀಗೆ :

ಬದ್ಧನಿಹನು ಕುರುಡನ ಹಾಗೆ । ಭಕ್ತ, ಜ್ಞಾನಿ, ತಾಪಸಿ, ಯೋಗಿ, ವೈರಾಗಿ, ಸನ್ಯಾಸಿ, ಇವರು ಕಣ್ಣಿಗೆ ಕಂಡರೂ ಅವನು ಅವರನ್ನು ಗುರುತಿಸನು. ಅವನಿಗೆ ಸಾರಾಸಾರ ವಿಚಾರ, ಸ್ವಧರ್ಮ ಆಚಾರ, ದಾನ, ಪುಣ್ಯ, ಪರೋಪಕಾರ ಯಾವದೂ ತಿಳಿಯುವದಿಲ್ಲ.

ಯಾವಗೆ ಸ್ತ್ರೀ, ಧನ ಮತ್ತು ಭೂಮಿಗಳದೇ ಚಿಂತೆ ಮತ್ತು ಸದಾ ಸಂಸಾರ (ಪ್ರಪಂಚ)ದ್ದೇ ವಿಚಾರ ಅವನೇ ಬದ್ಧ !

**ಮುಮುಕ್ಷು ಲಕ್ಷಣ :** ಸಂಸಾರ ದುಃಖದಿಂದ ತ್ರಸ್ತ ಆದ, ತ್ರಿವಿಧ ತಾಪಗಳಿಂದ ಬೆಂದ ಮತ್ತು ಸದುಪದೇಶದಿಂದ ಪಶ್ಚಾತ್ತಾಪ ಪಡೆದ ಮನುಷ್ಯನು-ಮುಮುಕ್ಷು !

ದೇಶ, ಕುಳ, ದ್ರವ್ಯಾದಿಗಳ ಅಭಿಮಾನ ಬಿಟ್ಟು, ಸಂತರ ಸೇವೆ ಮಾಡುವವನು, ಅಹಂತನ ದೂರ ಇಟ್ಟು, ತನ್ನ ಪೂರ್ವ ಪಾಪ ಕರ್ಮಕ್ಕಾಗಿ ತನ್ನನ್ನೇ ನಿಂದಿಸುವ ಮತ್ತು ಮೋಕ್ಷವನ್ನು ಬಯಸುವ ಮನುಷ್ಯನೇ ಮುಮುಕ್ಷು !

**ಸಾಧಕನ ಲಕ್ಷಣ :** ಅವಗುಣಗಳ ತ್ಯಾಗ ಮಾಡಿ, ಸಂತಸಂಗ ಹಿಡಿವ ಮನುಜನು ಸಾಧಕನು. ಅವನು ಸಾರಾಸಾರ ವಿವೇಕದ ಚರ್ಚೆ ತತ್ಪರನಾಗಿ ಕೇಳುವನು. ಸಂದೇಹ ತ್ಯಜಿಸಿ ಆತ್ಮಜ್ಞಾನ ಬಯಸುವನು.

ದೇಹಬುದ್ಧಿ, ದೃಶ್ಯದ ಭಾನ ನಿವಾರಿಸಿ, ಆತ್ಮಜ್ಞಾನದಿಂದ ಸಮಾಧಾನ ಲಭಿಸುವನು, ಅದ್ವೈತದಲ್ಲಿ ಬುದ್ಧಿ ದೃಢಿಸಿ, ನಿರಂತರ ಶ್ರವಣ, ಮನನ ಮಾಡುವ ಮನುಜನೇ ಸಾಧಕ.

**ಸಿದ್ಧ ಲಕ್ಷಣ ನಿರೂಪಣೆ :**

ಸಾಧು ಸ್ವಯಂ ಪರವಸ್ತು (ಪರಬ್ರಹ್ಮ) ಆದ । ಶಂಕಾ ಬ್ರಹ್ಮಾಂಡ ದಾಟಿ ಹೋದ । ನಿಶ್ಚಯ ಅಚಲ ಸ್ವರೂಪದ । ಅವನ ಹೆಸರು ಸಿದ್ಧ ! ॥

**ದೇವ ಶೋಧನೆಯ ದಶಕ :**

ಸತ್ಸಂಗದಿಂದ ದೇವನನ್ನು ಗುರುತಿಸಬಹುದು. ಅದಕ್ಕಾಗಿ ಜ್ಞಾನಿಯನ್ನೇ ಹುಡುಕಿ, ಅವನ ಅನುಗ್ರಹ ಪಡೆದು, ಸಾರಾಸಾರ ವಿವೇಕದಿಂದ ಜೀವಕ್ಕೆ ಮೋಕ್ಷ ಲಭಿಸಬೇಕು.

ಪಂಚಭೂತ ಮತ್ತು ತ್ರಿಗುಣಕೂಡಿ, ಎಂಟು ಗುಣಗಳಾಗುವವು. ಈ ಅಷ್ಟಗುಣದ ಸೃಷ್ಟಿಗೆ 'ದೃಶ್ಯ' ವೆಂದು ಹೆಸರು ಇದೆ. ಈ ದೃಶ್ಯ ಸೃಷ್ಟಿ ನಾಶವಂತ ನಿರ್ಗುಣ ಬ್ರಹ್ಮವೇ ಶಾಶ್ವತ ಇಹುದು, ಎಂದು ವೇದ (ಶ್ರುತಿ), ವೇದಾಂತ (ಉಪನಿಷದ) ಮತ ಇಹುದು. ಭಗವದ್ಗೀತೆಯಲ್ಲಿಯೂ- 'ಶಸ್ತ್ರದಿಂದ ತುಂಡಾಗದು, ಬೆಂಕಿಯಿಂದೂ ಸುಡದು, ನೀರಲ್ಲಿಯೂ ಬೆರೆಯದು, ಗಾಳಿಯಿಂದ ಹಾರದು, ಬೀಳದು, ಸಾಯದು, ಸೊರಗದು, ಘಟಿಸದು, ಅಡಗದು, ಅದು ಪರಬ್ರಹ್ಮ' ಹೀಗೆ ಸಾರಿ ಹೇಳಲಾಗಿದೆ.

ಮೇಲೆ ಹೇಳಿದ ಉಪದೇಶವನ್ನು ಸದ್ಗುರು ಬೋಧಿಸಬೇಕು.

ಮಾಯೆಯ ನಿರ್ಮಿತಿ ಹೇಗೆ ಆಯಿತು ? ಆಕಾಶದಲ್ಲಿ ಗಾಳಿ ಹುಟ್ಟಿದಂತೆ ಶುದ್ಧ ಆತ್ಮಸ್ಥಿತಿಯಲ್ಲಿ ಸ್ಫುರಣ ರೂಪದಲ್ಲಿ ಮಾಯೆ ಉತ್ಪನ್ನವಾಯಿತು. ಗಾಳಿಯಲ್ಲಿ 'ತೇಜ ಹುಟ್ಟಿತು. ತೇಜದಲ್ಲಿ ಆಪ (ನೀರು) ಜನಿಸಿತು. ನೀರಿನಿಂದ ಪೃಥ್ವಿ ಆಕಾರ ಪಡೆಯಿತು.

ಭೂಮಂಡಳದಲ್ಲಿ ಜೀವಗಳ ಉತ್ಪತ್ತಿ ಆಯಿತು. ಮಾತ್ರ ಬ್ರಹ್ಮದ ವ್ಯಾಪ್ತಿ ಮೊದಲಿನಿಂದಲೇ ಇದ್ದಿತು. ಆದಿ-ಅಂತದಲ್ಲಿ. ಯಾವದು ನಿರ್ಮಾಣ ಆಯಿತು, ಅದೆಲ್ಲವೇ ನಾಶವಾಯಿತು. ಕೇವಳ ಬ್ರಹ್ಮವೇ ಉಳಿಯಿತು.

ವಿವೇಕದಿಂದ ದೃಶ್ಯದ ಸಂಹಾರ ಮಾಡಿದೊಡೆ, ಸಾರಾಸಾರ ತಿಳಿಯಲು ಸಾಧ್ಯ, 'ತಾನು ಯಾರು?'
ಇದರ ಉತ್ತರವೂ ಸಿಗುವದು.

**'ಮಾಯಾ -ಬ್ರಹ್ಮ' ನಿರೂಪಣೆ :**

ಬ್ರಹ್ಮ ನಿರ್ಗುಣ, ನಿರಾಕಾರ ।
ಬ್ರಹ್ಮಗಿಲ್ಲ ಅಂತ-ಪಾರ । ಮಾತ್ರ ಇಹುದು ಮಾಯೆಗೆ ॥
ಬ್ರಹ್ಮ ನಿರ್ಮಳ, ನಿಶ್ಚಲ । ಮಾಯೆ ಚಂಚಲ
ಚಪಲ । ಬ್ರಹ್ಮ ನಿರುಪಾಧಿ ಕೇವಳ । ಮಾಯೆ ಉಪಾಧಿ
ರೂಪಿ ॥ ಮಾಯೆ ಹುಟ್ಟುವ, ಸಾಯುವ, ಬ್ರಹ್ಮ ಹುಟ್ಟದ, ಸಾಯದ ।
ಮಾಯೆ ವಿಕಾರಿ, ಕರ್ಮಚಾರಿ, ರೂಪಧಾರಿ । ಮಾತ್ರ ಬ್ರಹ್ಮ
ನಿರ್ವಿಕಾರಿ, ಅಕರ್ಮಕಾರಿ, ಅರೂಪ ।
ಮಾಯೆ ಪಂಚಭೂತಿಕ, ಅನೇಕ । ಬ್ರಹ್ಮವು ಶಾಶ್ವತ, ಏಕ !
ಮಾಯಾ ಬ್ರಹ್ಮದ ವಿವೇಕ ಅರಿವರು ವಿವೇಕಿಗಳು !
ಮಾಯಾ -ಬ್ರಹ್ಮಗಳನು ಬೇರೆ ಮಾಡಿದೊಡೆ, ಸಂತರಿಗೆ
ಶರಣ ಹೋದೊಡೆ ತಪ್ಪುವವು ಜನ್ಮ ಮರಣ । ದೊರೆವುದು ಮೋಕ್ಷ ।

ಸಗುಣ ಭಜನೆ ಯಾಕೆ ಮಾಡಬೇಕು ? :-

ಮುಖ್ಯ 'ಸಾರ' ಇಹುದು ನಿರ್ಗುಣ । ಅಲ್ಲಿ ಎಲ್ಲಿದೆ ಸಗುಣಗೆ ಸ್ಥಾನ ? । ಏನು ಪೂಜನೆಯ ಪ್ರಯೋಜನ ? ಈ ಶಿಷ್ಯನ ಪ್ರಶ್ನೆಗೆ ಗುರು (ಸಮರ್ಥರು) ಕೊಟ್ಟಿರುವ ಉತ್ತರ ಹೀಗೆ -

ಬೇಕು ನಿನಗೆ ನಿನ್ನವರ ಸಮಾಧಾನ । ಗುರುತು ಇಹುದು 'ನನ್ನ-ಅವನ'ದ ಜ್ಞಾನ । ಮಾತ್ರ ಬೇಡ ಪೂಜನೆ ಸಗುಣನ ಇದು ಯಾವ ಜಾಣತನ ? ಜ್ಞಾನದಿಂದ ಸೃಷ್ಟಿಯ ಮಿಥ್ಯತ್ವದ ಅರಿವು ಆಯಿತು. ಆದರೂ ದೇಹದ ವ್ಯವಹಾರ ನಡೆಯಿತು. ಪೂಜೆ ಒಂದೇ ಯಾಕೆ ಬೇಡಾಯಿತು ನಿನಗೆ ? ಸಾಹೇಬನಿಗೆ ಕಾಲು ಬೀಳುತ್ತಿ, ಹೀನನ ಹಾಗೇ ವರ್ತಿಸುತ್ತೀ, ಮಾತ್ರ ದೇವನಿಗೆ ಮನ್ನಿಸಲಾರೆ ನೀ, ಇದೆಂಥ ಜ್ಞಾನ ? ಅಂತೇ, ದೇಹದಿಂದ ಸಗುಣ ಉಪಾಸನೆ, ಮನದಿಂದ ನಿರ್ಗುಣನ ಅನುಸಂಧಾನ, ಇದೇ ಸಿದ್ಧಸಂತನ, ಮನದ ನಿಜಸ್ಥಿತಿ. ದೃಶ್ಯವು 'ಮಿಥ್ಯಾ'ಇದ್ದೂ ಹೇಗೆ ಕಾಣುತ್ತದೆ ?

ನೋಡಿದ್ದೆಲ್ಲ ಸತ್ಯ ತಿಳಿವುದು, ಜ್ಞಾನಿಯ ನೋಟ ಅಲ್ಲ. ಜಡ-ಮೂಢ ಅಜ್ಞಾನಿಗಳ ತಿಳಿವು ಅದು ! ತೃಷಿತ ಜಿಂಕೆ ಮೃಗಜಲ ನೋಡಿ, ನೀರೆಂದು ತಿಳಿದು, ಅದರತ್ತ ಓಡುತ್ತದೆ. ಆ ಮಂಕು ಜಿಂಕೆಗೆ ಅದೆಲ್ಲ 'ಮಿಥ್ಯಾ' ಅಂತ ಹೇಳಿದರೂ ಅದಕ್ಕೆ ತಿಳಿಯಬಹುದೆ ? 'ಚಿನ್ನದ ಜಿಂಕೆ ಇರುವದಿಲ್ಲ', ಇದು ಹೊತ್ತಿದ್ದೂ ರಾಮನು ಅದರ ಹಿಂದೆ ಓಡಿದನು! ದೃಷ್ಟಿಗೆ ಕಂಡು ಮನಕ್ಕೆ ಭಾಸಿಸುವದೆಲ್ಲ -ಕೊನೆಗೆ ನಾಶವಾಗುವದು. ಮಾತ್ರ ಪರಬ್ರಹ್ಮವು ದೃಶ್ಯಾತಿತ !

**ಸಾರಶೋಧನೆ :** ಶ್ರೇಷ್ಠನೇ ಸಾರ ಸೇವಿಸುವನು. ಮಾತ್ರ ಕನಿಷ್ಟನು ಅಸಾರ ! ಜಾಣನೇ ಸಾರಾಸಾರ ಅರಿಯುವನು. ಕಲ್ಪತರೂ ಎಲ್ಲಿಯೂ ಕಾಣದು ಮಾತ್ರ ಕಳ್ಳಿಯ ಅಡವಿ ಮಾತ್ರ ಇರುತ್ತದೆ ಎಲ್ಲ ಕಡೆ. ಚಂದನದ ಮರ ಕ್ವಚಿತ್ ಕಾಣುತ್ತದೆ. ಬೋರೆ -ಜಾಲಿಗಳು ಮಾತ್ರ ಇರುತ್ತವೆ ಎಲ್ಲ ಕಡೆ. ನಂತರ ಸಮರ್ಥರು ಹೇಳುತ್ತಾರೆ. ಇದು ನನ್ನ ಅನುಭವದ ಮಾತಿಹುದು. ನೀವೂ ಸ್ವಾನುಭವದಿಂದ ಪಡೆಯಿರಿ, ಪ್ರಚೀತಿ (ಅನುಭೂತಿ) ಪಡೆದು ಜ್ಞಾನಿ ಆಗಿರಿ !''

**'ಸಮಾಧಾನ' ದ ಕಥನ :**

''ಕೇಳಿದರೆ, ಸಮಾಧಾನ ಹೇಗೆ ಇಹುದು ?..... ಅನ್ನುವರು, ಹೇಳಲು ಬರದು ! ಮೂಕನು ಬೆಲ್ಲ ತಿಂದನು. ಮಾತ್ರ 'ಸಿಹಿ' ಹೇಗಿದೆ... ಅದನ್ನು ಹೇಳಲು ಅರಿಯನು. ಅದಕ್ಕಾಗಿ ಸ್ವಾಮಿ, ನೀವೇ ತಿಳಿಸಿ ಹೇಳಿರಿ...'' ಶಿಷ್ಯನು ಗುರುಗಳಿಗೆ ವಿನಂತಿಸಿದನು. ಈ ಸಮಸ್ಯೆಗೆ ಸಮರ್ಥರು ಕೊಟ್ಟ ಉತ್ತರ ಹೀಗೆ :

ಸಮಾಧಾನವು ಕೇವಳ ಅನುಭವದಿಂದೇ ದೊರೆವುದು. ಅದನ್ನು ಶಬ್ದದಿಂದ ಹೇಳಲಾಗದು, ಮಾತ್ರ ಹೇಳದಿದ್ದರೂ ತಿಳಿಯದು. ಕಲ್ಪಿಸ ಹೋದೊಡೆ ಕಲ್ಪನಾಶಕ್ತಿಯೇ ತಲುಪದು.

ಪರಬ್ರಹ್ಮವು ವೇದಗಳ ಗುಪಿತ. ಮಾತ್ರ ಅದು ಅರಿವುದು ಸಂತ-ಸಮಾಗಮದಿಂದ. ಹೇಳಲು ಅಗಾಧ (ಕಠಿಣ) ಇದ್ದರೂ, ಹೇಳುವದು-ಸಿಹಿ ತಿಳಿಯಲು ಬೆಲ್ಲ ಕೊಟ್ಟ ಹಾಗೆ -ಸದ್ಗುರುವಿನ ಕೆಲಸ.

ಬುದ್ಧಿಯನ್ನು ದೃಢಿಸಿ, ಶೋಧಿಸಿದರೆ 'ಸಮಾಧಿ' ಹತ್ತುತ್ತದೆ. ತನ್ನ ಮೂಲ ಹುಡುಕುವಾಗ ಮಾಯಿಕ 'ಅಹಂ'ತನ ಅರಿವುದು. ಆ ನಂತರ ದೊರೆವ ವಸ್ತು (ಪರಮಾತ್ಮ)ವೇ -ಗಹನ ಸಮಾಧಾನ. ದೇಹಬುದ್ಧಿ ತೀರಿ, ಭ್ರಮವೂ ಹಾರಿ, ಸ್ವಂತದ ಅಸ್ತಿತ್ವವೇ ಲುಪ್ತ ಆಗುವದು. ಇದೇ 'ಅನಿರ್ವಚ' ಅವಸ್ಥೆ -!

ಶಬ್ದಗಳಿಂದ ಅರ್ಥ ಅರಿವುದು ನಂತರ ಶಬ್ದಗಳೇ ವ್ಯರ್ಥ ಆಗುವವು. ಶಬ್ದಗಳಲ್ಲಿದ್ದ ಅರ್ಥವೇ ಶಾಶ್ವತ, ಶಬ್ದ ಮಿಥ್ಯಾ!

ಶಬ್ದದಿಂದ ಬೋಧ ಆದರೂ, ಅದು ನಿಲ್ಲುವದು ಆತ್ಮದ ಈಚೆಗೆ I ಅರ್ಥ ತಿಳಿದರೂ ಅನುಭವದ ಕಕ್ಷೆಯಲ್ಲಿ ಅದು ಬರದು.

'ಬಂಜೆಯ ಮಗು' ಈ ಕಥನ ಹೇಗೆ ಮಿಥ್ಯ ಹಾಗೇ, 'ಜೀವ-ಶಿವ'ದ ಅಭಿನ್ನತನ ಮಾಯಾ ಜನಿತ. ಒಬ್ಬ 'ಅಜ'ನು ಕನಸು ಕಂಡನು, ಭವದುಃಖ ಸಹಿಸದೇ ಸದ್ಗುರುವಿಗೆ ಶರಣ ಹೋದನು. ಸಂಸಾರ ಸುಳ್ಳು ಇದ್ದುದನ್ನು ತಿಳಿದನು. ಅವನ ಅಜ್ಞಾನ ದೂರಾಗಿ, ಜ್ಞಾನದ ಅರಿವಾಯಿತು. ಇದ್ದುದೆಲ್ಲ ಇಲ್ಲದಂತಾಯಿತು. ಇಲ್ಲದ್ದೂ ಇಲ್ಲದರಲ್ಲಿ ಕೂಡಿತು. ಅಸ್ತಿ-ಗಿಸ್ತಿ ಹೋಗಿ, ಉಳಿಯಿತು ಕೇವಳ ಶೂನ್ಯ !

ಶೂನ್ಯತ್ವದಲ್ಲಿಯ ಶುದ್ಧ ಜ್ಞಾನ-ದಿಂದಾಯಿತು ಸಮಾಧಾನ. ಐಕ್ಯದಿಂದ ಅಭಿನ್ನ ಸಹಜಸ್ಥಿತಿ ಬಂದಿತು. ಅಂತೇ ಸಮಾಧಾನದ ಕಥನ ಅಸಾಧ್ಯ. ಅದರ ಲಕ್ಷಣ ನಿಃಶಬ್ದ; ಅಂತೇ ಅದರ ಸ್ಥಿತಿಗೆ 'ಅನಿರ್ವಚ' ಅನ್ನಬೇಕಾಗುತ್ತದೆ.!

**ಏಳನೇ ದಶಕ : ಚತುರ್ದಶ ಬ್ರಹ್ಮಗಳ :**

ಸಮರ್ಥರ ಕಾಲದಲ್ಲಿ ಸಂಸ್ಕೃತ ಗ್ರಂಥಗಳಿಗೇ ವಿದ್ವಾನರಿಂದ ಮಾನ್ಯತೆ ಇದ್ದಿತು. ಅಂತೆಯೇ ಸಮರ್ಥರು, ''ಕಬ್ಬಿಣದ ಪೆಟ್ಟಿಗೆಯಲ್ಲಿ ರತ್ನಗಳಿದ್ದರೂ, ಕೇವಳ ಪೆಟ್ಟಿಗೆ 'ಕಬ್ಬಿಣದೆಂದು, ಅದನ್ನು ನಿರಾಕರಿಸುವದು ಜಾಣತನವಲ್ಲ. ಹಾಗೇ ಪ್ರಾಕೃತ ಭಾಷೆಯ ಗ್ರಂಥದಲ್ಲಿ ವೇದಾಂತ, ಸಿದ್ಧಾಂತಗಳ ಅರ್ಥ ತುಂಬಿದ್ದರೆ, ಅದು ಕೇವಳ ಪ್ರಾಕೃತದಲ್ಲಿದೆ ಎಂದು ಓದದಿರುವದೂ ಜಾಣತನವಲ್ಲ !.'' ಎಂದು ಹೇಳಿದ್ದಾರೆ.

ಸಹಜ ಕೈಗೆ ಬಂದ, ಸುಗಮ ಮತ್ತು ಸಪ್ರಚೀತ ಪ್ರಾಕೃತ ಗ್ರಂಥದಲ್ಲಿದ್ದ ಆತ್ಮಜ್ಞಾನ, ಅದ್ವೈತ ತತ್ವಜ್ಞಾನ ಅವಶ್ಯ ಸ್ವೀಕರಿಸಬೇಕು. ಅದರಲ್ಲಿಯ ಅರ್ಥವೇಸಾರ, ಭಾಷೆ ಅಸಾರ, ಮಾಯೆ ಸಗುಣ-ಸಾಕಾರ, ಮಾಯೆ ಸರ್ವಸ್ವಿ ವಿಕಾರ. ಕೇವಳ ಪಂಚಭೂತಗಳ ವಿಸ್ತಾರ ಇಹುದು ಮಾಯೆ :

ಮಾಯೆಯ ದೃಶ್ಯ ಕಣ್ಣಿಗೆ ಕಾಣುತ್ತದೆ. ಮಾಯೆಯ ಆಭಾಸ ಮನಕೆ ಭಾಸಿಸುವದು, ವಿವೇಕದಿಂದ ವಿಚಾರಮಾಡಿದರೆ ಮಾಯೆ ಕ್ಷಣ ಭಂಗುರ I, ಅತಃ ವಿನಾಶಿ. ಮಾಯೆಗೆ ಅನೇಕ ರೂಪಗಳಿವೆ. ಮಾಯೆಯಿಂದಲೇ ಸೃಷ್ಟಿಯ ರಚನೆ ಆಗಿದೆ ಮಾತ್ರ ಜ್ಞಾನದ ಹೊರತು ಅದರ ನಿರಸನ ಆಗದು.

**ಬ್ರಹ್ಮನಿರೂಪಣೆ :**

ಬ್ರಹ್ಮನು ನಿರ್ಗುಣ, ನಿರಾಕಾರ, ನಿಃಸಂಗ, ನಿರ್ವಿಕಾರ, ಬ್ರಹ್ಮನಿಗಿಲ್ಲ ಅಂತ-ಪಾರ, ಬ್ರಹ್ಮ ಸರ್ವರಲ್ಲಿ ವ್ಯಾಪಕ, ಅನೇಕರಲ್ಲಿದ್ದೂ ಏಕಮಾತ್ರ, ಶಾಸ್ತ್ರಗಳ ಮತದಂತೆ ಬ್ರಹ್ಮ ಶಾಶ್ವತ.

ಬ್ರಹ್ಮಕ್ಕೆ ಅನಂತ ನಾಮಗಳಿದ್ದರೂ-ಅದು ನಾಮಾತೀತ. ಅದು ದೃಷ್ಟಾಂತ -ಉಪಮಾತೀತ.

ಬ್ರಹ್ಮಕ್ಕಿಲ್ಲ ಉಚ್ಚ-ನೀಚ ರಾಜಾ ವಾ ರಂಕ. ಬ್ರಾಹ್ಮಣನ ಬ್ರಹ್ಮ ಮಡಿಯ, ಶೂದ್ರನ ಬ್ರಹ್ಮ ಮೈಲಿಗೆಯ, ಹೀಗೆ ಬ್ರಹ್ಮದಲ್ಲಿ ಭೇದ-ಭಾವವಿಲ್ಲ.

**ಚತುರ್ದಶ (ಹದಿನಾಲ್ಕು) ಬ್ರಹ್ಮ ನಿರೂಪಣೆ :**

ಶಬ್ದ, ಮಿತಾಕ್ಷರ, ಸ್ವರ್ಗಾಕಾರ, ಸರ್ವಬ್ರಹ್ಮ, ಚೈತನ್ಯ I, ಸತ್ತಾ, ಸಾಕ್ಷ, ಸಗುಣ, ನಿರ್ಗುಣ, ವಾಚ್ಯ, ಅನುಭವ, ಆನಂದ, ತದಾಕಾರ, ಮತ್ತು ಅನಿರ್ವಚ ಹೀಗೆ ಹದಿನಾಲ್ಕು ಬ್ರಹ್ಮಗಳಿಹವು. ಮಾತ್ರ ಮೇಲೆ ಹೇಳಿದ ಮೊದಲನೆಯ ಹದಿಮೂರು ಬ್ರಹ್ಮ ನಾಶವಂತ.

ಅನಿರ್ವಚ ಇಹುದು ಉನ್ಮನಿಯ ಸ್ಥಿತಿ I, ಉಪಾಧಿರಹಿತ ವಿಶ್ರಾಂತಿ ಯೋಗಿಯರ. ಯಾವ ವಸ್ತು (ಪರಬ್ರಹ್ಮ) ನಿರುಪಾಧಿ, ಅದೇ ಸಹಜ ಸಮಾಧಿ I. ಅದರಿಂದೇ ಭವದುಃಖದ ಆದಿ-ವ್ಯಾಧಿ ಹರಿಯುತ್ತವೆ. ಯಾವದು ಉಪಾಧಿಯ ಅಂತ ಅದೇ ನಿಜವಾದ ಸಿದ್ಧಾಂತ, 'ಬ್ರಹ್ಮವೇ ಸತ್ಯ' ಎಂಬ ! ಅಂಗುಲಿಯಿಂದ ತೋರಿಸಲು ಬರುವ ಪದಾರ್ಥದಂತೆ ಬ್ರಹ್ಮ ಅಲ್ಲ. ಆ ಅನುಪಮ ಬ್ರಹ್ಮವನ್ನು ಸದ್ಗುರು ಮುಖದಿಂದಲೇ ಅನುಭವಿಸಬಹುದು.

**ವಿಮಲ ಬ್ರಹ್ಮ ನಿರೂಪಣೆ :**

ಬ್ರಹ್ಮವು ಆಕಾಶಕ್ಕಿಂತ ನಿರ್ಮಳ, ಪೊಳ್ಳ, ಅರೂಪ, ವಿಶಾಲ, ಮತ್ತು ಅಮರ್ಯಾದ ಇಹುದು. ಇಪ್ಪತ್ತೊಂದು ಸ್ವರ್ಗ, ಸಪ್ತ ಪಾತಾಳ ಕೂಡಿ ಒಂದು ಬ್ರಹ್ಮಗೋಲ ಆಗುವದು. ಹೀಗೆ ಅನಂತ ಬ್ರಹ್ಮಗೋಲಗಳಿವೆ.

ಅನಂತ ಬ್ರಹ್ಮಾಂಡದ ಕೆಳಗೆ, ಮೇಲೆ, ಒಳ-ಹೊರಗೆ, ಬ್ರಹ್ಮನಿಲ್ಲದ ಸ್ಥಳ ಇಲ್ಲ, ಜಲ, ಸ್ಥಲ, ಕಾಷ್ಠ-ಪಾಷಾಣಗಳಲ್ಲಿ ಪ್ರಾಣಿ -ಪಕ್ಷಿಗಳಲ್ಲಿ ಬ್ರಹ್ಮ ತುಂಬಿಹುದು.

ಭೂಮಿ, ನೀರು, ವಾಯು, ಅಗ್ನಿ (ತೇಜ) ಮತ್ತು ಆಕಾಶ ಈ ಪಂಚಭೂತಗಳು ನಿರ್ಮಿತ ಅಂತೆಯೇ ಅವು ವಿನಾಶಿ. ಬ್ರಹ್ಮ ಮಾತ್ರ ಅವಿನಾಶಿ.

**'ಬದ್ಧ-ಮುಕ್ತ' ನಿರೂಪಣೆ :**

ಸವಿಯ ಹೋದೊಡೆ ಬ್ರಹ್ಮಾನಂದ I ಹತ್ತುತ್ತದೆ ಸಂಸಾರ ಹಿಂದ I ಮಾಡಿದೊಡೆ ಸಂಸಾರ ಚಂದ I ಎಳೆವುದು ಬ್ರಹ್ಮತನ್ನೆಡೆ II ಬ್ರಹ್ಮಸುಖವನ್ನು ಸಂಸಾರವು ಕೆಡಿಸಿತು. ಹಾಗೇ ಸಂಸಾರವೂ ಬ್ರಹ್ಮ ವಿಚಾರವನ್ನು ಕೆಡೆಸಿತು. ಹೀಗಾಗಿ ಬ್ರಹ್ಮ (ಪರಮಾರ್ಥ)ವೂ ಸಾಧಿಸಲಿಲ್ಲ ಸಂಸಾರವೂ ಕೆಟ್ಟಿತು !. ಅದಕ್ಕೆ ಶಿಷ್ಯನಿಗೆ ಪ್ರಶ್ನೆ ಬಿದ್ದಿತು, 'ಬಾಳಬೇಕು ಯಾವ ರೀತಿ ?'' ಇದರ ಉತ್ತರ ಸಮರ್ಥರು ವಿಸ್ತಾರವಾಗಿ ಕೊಟ್ಟು, ಕೊನೆಗೆ ಬ್ರಹ್ಮಸ್ವರೂಪ ಆಗುವ ರೀತಿಯನ್ನು ಮುಂದಿನ ಸಮಾಸದಲ್ಲಿ ಹೇಳಿದ್ದಾರೆ.

ಸಾಧನೆಬಿಟ್ಟರೆ, ಮುಕ್ತನೂ 'ಬದ್ಧ' ಆಗುತ್ತಾನೆ. 'ಸಾಧನೆಯಿಂದ ಹೋದೀತು ಸಿದ್ಧತನ' ಈ ಅಂಜಿಕೆಯಿಂದ ಸಾಧನೆ ಬಿಡುವ ಕಡೆಗೇ ಪ್ರವೃತ್ತಿ ಬೆಳೆಯುತ್ತದೆ. 'ಇವನು ಸಾಧಕ, ಸಿದ್ಧನಲ್ಲ' ಎಂದು ಜನ ಅನ್ನುವರೆಂದು, ನಾಚಿ, ಸಾಧನೆ ಬಿಡುತ್ತಾನೆ. ಪಾಪ, ಅವಗೆ 'ಬ್ರಹ್ಮಾದಿಕ ದೇವರೂ ಸಾಧಕರೇ' ಈ ಮಾತು ಹೊತ್ತಿರುವದಿಲ್ಲ ! ಅಭ್ಯಾಸದಿಂದಲೇ - ವಿದ್ಯೆ ಪೂರ್ಣ ಆಗುತ್ತದೆ. ಸಾಧನೆಯಿಂದಲೇ 'ಬ್ರಹ್ಮಜ್ಞಾನ' ಸಾಧ್ಯವೆಂದು ಹೇಳಿ ಸಮರ್ಥರು, ಪರಮಾರ್ಥದ ಸಾಧನೆಗಳನ್ನು ಮುಂದೆ ನಿರೂಪಿಸಿದ್ದಾರೆ.

**ಶ್ರವಣ ನಿರೂಪಣೆ :**

'ಯಾತರಿಂದ ಪರಮಾರ್ಥ ಸಾಧಿಸಿಸುವದು, ಸಮಾಧಾನ ದೊರೆವುದು, ಅದು ಶ್ರವಣ' ವೆಂದು ಹೇಳಿ ಸಮರ್ಥರು ಯಾವ, ಹೇಗೆ, ಯಾಕೆ ಶ್ರವಣ ಮಾಡಬೇಕು ಅದನ್ನು ವಿಸ್ತಾರವಾಗಿ ಹೇಳಿದ್ದಾರೆ.

ಶ್ರವಣದಿಂದ ಚಿತ್ತಶುದ್ಧಿ, ದೃಢ ಬುದ್ಧಿ ಆಗಿ, ಅಭಿಮಾನದ ಉಪಾಧಿ ಹರಿಯುವದು, ಸದ್ಬುದ್ಧಿ ಬಂದು, ವಿವೇಕ ಎಚ್ಚೆತ್ತು ದೇವನ ಕಡೆ ಮನ ಹತ್ತುತ್ತದೆ. ಮುಮುಕ್ಷು, ಸಾಧಕ, ವಾ ಸಿದ್ಧ, ಶ್ರವಣದ ವಿನಾ ಬದ್ಧ, ಶ್ರವಣ-ಮನನದಿಂದಾಗುವದು ಶುದ್ಧ ಚಿತ್ತಿವೃತ್ತಿ !

ಅನೇಕ ಪ್ರಕಾರದ ಜನರಿಗೆ ಏನೇನು ಸೇರುತ್ತದೆ, ಅದರ ವಿವೇಚನ ಮಾಡಿ ಕೊನೆಗೆ –

ಪರಮಾರ್ಥ ಸಾಧನ-ವಿಹೀನ, ಎಲ್ಲಿಲ್ಲ ಆತ್ಮಜ್ಞಾನ, ಅದಕ್ಕೆ 'ಶ್ರವಣ' ಅನ್ನಲಾಗದು, ಅದು ಕೇವಳ ಮನೋರಂಜನೆ ಎಂದು ಹೇಳಿ ವಿವೇಕಿಗೆ ಎಲ್ಲಿ ನಿತ್ಯಾನಿತ್ಯದ ವಿಚಾರ, ಸಾರಾಸಾರದ ವಿವರಣೆ, ಅದೇ (ಅದ್ವೈತದ) ಗ್ರಂಥ ಭವ-ಪಾರ ಮಾಡಿಸುವದು ಎಂದು ಸಮರ್ಥರು ಪ್ರತಿಪಾದಿಸುತ್ತಾರೆ.

ದೇಹಾಂತ ನಿರೂಪಣೆಯಲ್ಲಿ ಸಮರ್ಥರು, ಎಲ್ಲಿ ಯಾವಾಗ ಮರಣ ಬರಬೇಕು ? ಈ ವಿಷಯದಲ್ಲಿ ತಮ್ಮ ಪ್ರಾಂಜಲ ಮತ ಹೇಳಿದ್ದಾರೆ.

ನದಿಯ ತೀರದ ಮೇಲೆ ಪುಣ್ಯತರ । ಬೀಳಬೇಕು ತಮ್ಮ ಶರೀರ । ಅಂತ ಬಯಸುವರು ಸಾಮಾನ್ಯನರ । ಮಾತ್ರ ಸಾಧು ನಿತ್ಯ ಮುಕ್ತ, 'ಶುಕ್ಲ ಪಕ್ಷದಿ, ಉತ್ತರಾಯಣದಲ್ಲಿ ದಿವಸಾ ಮನೆಯಲ್ಲಿ ಮರಣ ಬರಬೇಕು, ಅಂದರೇನೇ- ಉತ್ತಮ ಗತಿ' ಹೀಗೆ ಧರ್ಮಶಾಸ್ತ್ರದ ಹೇಳಿಕೆ. ಯೋಗಿಗೆ ಮಾತ್ರ ಈ ಮಾತು ಅನ್ವಯಿಸದು.

'ಸಾಯುವಾಗ ನೆನೆದರೂ, ಲಭಿಸುವನು ಭಗವಂತ' ಇದೂ ಒಂದು ವಿಪರೀತ ಮತ! ಇಂಥವರಿಗೆ ಸಮರ್ಥರು ಕೇಳುತ್ತಾರೆ. ''ಜೀವಿಸುವಾಗ ಜನ್ಮ ಸಾರ್ಥಕ ಮಾಡಲಿಲ್ಲ । ವ್ಯರ್ಥ ಕಳೆದುಹೋಯಿತು ಆಯುಷ್ಯವೆಲ್ಲ । ಯಾವನು ಧಾನ್ಯ ಬಿತ್ತಲೇ ಇಲ್ಲ । ಬೆಳೆದೀತೆ ಅವನ ಹೊಲ ?॥

ಜೀವಿತ ಇದ್ದಾಗ ಇರದಿರೆ ಭಗವದ್ಭಕ್ತಿ । ಸತ್ತಮೇಲೆ ಎಲ್ಲಿಯದು ಮುಕ್ತಿ ? ॥

ಉತ್ತಮ ಮರಣ ಬಂದಿದ್ದರೂ, ಭಕ್ತಿಯ ಹೊರತು ಅಧೋಗತಿಯೇ !

ಅವರು ಈ ದಶಕದ ಕೊನೆಗೆ ದಾಸಬೋಧದ ಬಗ್ಗೆ : ಈ ಗ್ರಂಥದ ವಿವೇಕ । ಮನನಿಸಿ, ನೋಡುವನು ಯಾ ಸಾಧಕ । ಅವಗೆ ದೊರೆವುದು ಏಕ । ಜ್ಞಾನದ ನಿಶ್ಚಯ ॥ ಇದು ಇಹುದು ವಿವೇಕಗ್ರಂಥ । ಅನ್ನದಿರು ಇದು ಪ್ರಾಕೃತ ಸತ್ಯಾರ್ಥ ಅರಿಯಬೇಕು ವೇದಾಂತ -।- ವಿಷಯದ ॥ 'ಪ್ರಾಕೃತ' ವೆಂದು ಬಿಡಬಾರದು । ಇದರಲ್ಲಿ ಜ್ಞಾನ-ಸಾಧನೆಯ ಉಪಾಯ ಹೇಳಿಹುದು । ಮಾತ್ರ ಮೂರ್ಖನಿಗೆ ಇದು ತಿಳಿಯದು । ಹ್ಯಾಗೆ ಟೆಂಗಿನ ರುಚಿ, ಮಂಗನಿಗೆಲ್ಲಿ ?॥ ಎಂದು ಕೇಳಿ, ತಮ್ಮ ನಮ್ರತೆಯನ್ನು ಪ್ರಕಟಿಸಿದ್ದಾರೆ-

''ಎಲ್ಲಿ ಶ್ರುತಿ ಅಂದಿಹವು 'ನೇತಿ-ನೇತಿ '। ಅಲ್ಲಿ ನಡೆದೀತೇ ನನ್ನ ಶಬ್ದ ಸಂಪತ್ತಿ ?। ಅನಾದಿ ಅನಂತ ಪರಬ್ರಹ್ಮಗಿಲ್ಲ ಮಿತಿ । ಕೇವಳ ಅನಿರ್ವಾಚ್ಯ

**ಎಂಟನೇ ದಶಕ : ಮಾಯಾ ಉದ್ಭವ :**

ಈ ದಶಕದ ಹೆಸರು ಮಾಯಾ ಉದ್ಭವ ಇದ್ದರೂ ಇದಕ್ಕೆ ಸಮರ್ಥರು 'ಜ್ಞಾನ-ದಶಕ' ಅಂದಿದ್ದಾರೆ.

ದೇವದರ್ಶನ : ಸರ್ವಚರಾಚರ ಸೃಷ್ಟಿ ಹುಟ್ಟಿಸಿ, ಅದರ ವ್ಯಾಪಾರ ನಡೆಸಿಹನು, ಅವನೇ 'ಸರ್ವಕರ್ತೃ' ದೇವನು. ಬ್ರಹ್ಮ, ವಿಷ್ಣು, ಮಹೇಶ್ವರ ಅವತಾರ ಧರಿಸಿದವನೇ ಶ್ರೇಷ್ಠಸುರ. 'ಜಗವೇ ಜಗದೀಶ್ವರ' ಈ ಕಲ್ಪನೆ ಸಮರ್ಥರಿಗೆ ಮಾನ್ಯವಿಲ್ಲ.

'ನಿರ್ಗುಣ' ಬ್ರಹ್ಮನಲ್ಲಿ 'ಸಗುಣ' ಸೃಷ್ಟಿ ಹೇಗೆ ಹುಟ್ಟಿತು ? ಅವನು ನಿರಾಕಾರ ಇದ್ದೂ 'ಸಾಕಾರ' ಮಾಯೆ ಅವನಲ್ಲಿ ಹೇಗೆ ಬಂದಿತು ? ಇತ್ಯಾದಿ ಪ್ರಶ್ನೆಗಳ ಉತ್ತರ, ಸೂಕ್ಷ್ಮ ಶಂಕಾ ನಿರೂಪಣೆಯಲ್ಲಿ ಸವಿಸ್ತರ ಓದಬಹುದು.

ಸೂಕ್ಷ್ಮ -ಪಂಚಭೂತ ನಿರೂಪಣೆಯಲ್ಲಿ –

ಬ್ರಹ್ಮದಲ್ಲಿ ಮೂಲ ಮಾಯೆ ಜನಿಸಿತು । ಅದರ ಉದರದಲ್ಲಿ ಮಾಯೆ ಹುಟ್ಟಿತು । ಅದು ತ್ರಿಗುಣಕ್ಕೆ ಜನ್ಮ ಕೊಟ್ಟಿತು । ಅಂತೇ ಅದು ಗುಣಕ್ಷೋಭಿಣಿ ॥

ಮುಂದೆ ಅದರಲ್ಲಿ ಆದವು ಜನನ । ಸತ್ವ, ರಜ, ತಮ ಈ ತ್ರಿಗುಣ । ತಮೋಗುಣದಿಂದಾದವು ನಿರ್ಮಾಣ। ಪಂಚಭೂತಗಳು ॥

ಸ್ಥೂಲ -ಪಂಚಮಹಾಭೂತೇ ಸ್ವರೂಪಕಾಶ ಭೇದೋನಾಮಕ ಸಮಾಸದಲ್ಲಿ ಪಂಚಭೂತಗಳ ಲಕ್ಷಣ ಮತ್ತು ಗುಣಗಳ ವರ್ಣನೆ ಬಂದಿದೆ. ಉದಾ: ಪರ್ವತ ಶಿಖರ, ಶಿಲಾ ಪಾಷಾಣ । ನಾನಾ ವಿಧ ದೊಡ್ಡ ಸಣ್ಣ । ಸಂಯುಗ ಹರಳು ಮಣ್ಣಿನ । ಇಹುದು 'ಪೃಥ್ವಿ' ॥

ಭಾವಿ, ಕೂಪ ಸರೋವರ । ನಾನಾ ನದಿಗಳ ನೀರ । ಆಗುವದು ಮೇಘ, ಸಪ್ತಸಾಗರ । ಕೂಡಿ 'ಆಪ'॥ ಅಗ್ನಿ, ಮೇಘದ ಸಿಡಿಲು ।

ಯಾವದು ಶಕ್ತ ಜ್ವಲಿಸಲು । ಸಾಗರವನ್ನೂ ಬಲ್ಲದು ಸುಡಲು । ವಡವಾನಲ ॥

ಗಾಳಿಯಿಂದಲೇ ಸಾಧ್ಯ ಸಂಚಲನ । ಸರ್ವವೇ ಅಸಾಧ್ಯ, ಇರದಿರೆ ಪವನ । ಗಾಳಿಯೇ ಮೂಲ ಕಾರಣ । ಸೃಷ್ಟಿಯ ಚಲನಕ್ಕೆ ॥ ಆಕಾಶ ಇಹುದು ಪೊಳ್ಳ । ನಿರ್ಮಲ ಮತ್ತು ನಿಶ್ಚಲ । ಅವಕಾಶ ರೂಪವು ಸಕಳ । ಇಹುದು ಆಕಾಶ ॥

ದುಶ್ಚಿತ್ತ ನಿರೂಪಣೆಯಲ್ಲಿ -

ಶಿಷ್ಯ ಕೇಳಿದನು, '' ಹೇಳಿರಿ ಸತ್ಸಂಗದ ಮಹಿಮೆ, ಎಷ್ಟು ದಿನಗಳಲ್ಲಿ ಮೋಕ್ಷದ ಪ್ರಾಪ್ತಿ ಆಗುವದು ? '' ಇದಕ್ಕೆ ಗುರು ಅಂದ, ''ಸಂತನ ಬೋಧದಲ್ಲಿ ವಿಶ್ವಾಸ ಇಟ್ಟರೆ, ಮುಕ್ತಿ ತಕ್ಷಣ ಲಭಿಸುವದು. ಮಾತ್ರ ದುಶ್ಚಿತ್ತದಿಂದ ಹನನ ಆಗುತ್ತದೆ ''

ಅಭ್ಯಾಸ ಮಾಡ ಬಯಸುವವನಿಗೆ ಈ ಸಮಾಸದಲ್ಲಿಯ ಬೋಧ ಅತ್ಯಂತ ಹಿತಕಾರಕವಾಗಿದೆ.

**ಮೋಕ್ಷ ಲಕ್ಷಣ :**

ಈ ಸಮಾಸದಲ್ಲಿ, ಬದ್ಧನ ಸ್ವಭಾವದ ವರ್ಣನೆ ಇದೆ. ಮುಂದಿನ ಜನ್ಮದ ಏರ್ಪಾಡಿಗಾಗಿ ಅವನು 'ಜೀರ್ಣ (ಹರಿದ) ವಸ್ತ್ರ, ಸಣ್ಣ ತಾಮ್ರದ ನಾಣ್ಯ, ಬಕ್ಕರಿ ಚೂರು, ದಾನವೆಂದು ಕೊಟ್ಟು 'ಕೋಟಿರಾಶಿ'ಯ ಅಪೇಕ್ಷೆ ಮಾಡುತ್ತಾನೆ. ಮಾತ್ರ ನಿಜವಾದ ಭಕ್ತನು, 'ನಾನು ದೇಹವಲ್ಲ ಕೇವಲ ಆತ್ಮ' ಈ ಜ್ಞಾನದಿಂದ ಜನ್ಮ (ಮತ್ತು ಮರಣ) ತಪ್ಪಿಸುತ್ತಾನೆ.

ಯಾವನು ಜನ್ಮ-ಮರಣದಿಂದ ಹೊರಬಿದ್ದ । ತಿಳಿಯಿರಿ ಅವನೇ -ಮೋಕ್ಷ ಪಡೆದ ॥

'ನಾನೇ ಸ್ವಂತ ಬ್ರಹ್ಮ' ಈ ಮಹಾ ವಾಕ್ಯದ ಅರ್ಥವನ್ನು ಸದ್ಗುರು, ಶಿಷ್ಯನಿಗೆ ಹೇಳುತ್ತಾನೆ. ಸದ್ಗುರುವಿನ ಅನುಗ್ರಹ ಆಗುತ್ತಲೆ-ಮೋಕ್ಷ ಲಭಿಸುತ್ತದೆ.

**ಆತ್ಮ ದರ್ಶನ :-**

ಯಾವನು 'ಸಂತನಿಗೆ ಶರಣು ಹೋದ '। ಆಯಿತು ಅವಗೇ ಅದ್ವೈತದ ಬೋಧ । ಬೇರೆ ಆಗನು ಪರಮಾತ್ಮನಿಂದ । ಎಷ್ಟು ಪ್ರಯತ್ನಿಸಿದರೂ ॥ ಹೀಗೆ ಹೇಳಿ ಸಮರ್ಥರು ಮುಂದಿನ ದೃಷ್ಟಾಂತ ಕೊಡುತ್ತಾರೆ. ಸಮುದ್ರಕ್ಕೆ ಕೂಡಿದ ನದಿಯನ್ನ । ತೋರಿಸಲಾಗದು ಮಾಡಿ ಭಿನ್ನ । ಕಬ್ಬಿಣವು ಆದೊಡೆ ಚಿನ್ನ । ಕಾಣದು ಕಪ್ಪು॥

**ಸಿದ್ಧ ಲಕ್ಷಣ :**

(ಸಿದ್ಧನ) ದೇಹ ಕಂಡರೂ ಚಂಚಲ । ಮನ ಇರುತ್ತದೆ ನಿಶ್ಚಲ । ಮನ ಸದಾ ಸ್ಥಿರ, ಚಂಚಲ-।- ಕೇವಳ ದೇಹ.

**'ಶೂನ್ಯತ್ವ' ನಿರಸನ :**

ಈ ದಶಕದ ಈ ಕೊನೆಯ ಸಮಾಸದಲ್ಲಿ ಅನೇಕ ಜನರ ಪರಸ್ಪರ ವಿರುದ್ಧ ಮತಗಳ ವಿವರಣೆ ಇದೆ. ಈ ಮತಗಳು ಅತಿಶಯ 'ಮನೋರಂಜಕ' ಇವೆ. ಈ ಸಮಾಸದ ಕೊನೆಗೆ -ಒಬ್ಬನ ಅನುಭವದ ಕಥನ ಇದೆ. ಅರಸನನ್ನು ಗುರುತಿಸದ ಒಬ್ಬನು, ದೇವರನ್ನೇ ಅರಸನೆಂದು ತಿಳಿಯುತ್ತಾನೆ. ಅರಸನನ್ನು ಪ್ರತ್ಯಕ್ಷ ನೋಡಿದ ನಂತರ ಸಂಭ್ರಮಿತನಾಗುತ್ತಾನೆ. ಹಾಗೇ ಶೂನ್ಯಕ್ಕೇ ಬ್ರಹ್ಮ ತಿಳಿದವನಿಗೆ ಬ್ರಹ್ಮದ ದರ್ಶನವಾಗುತ್ತದೆ. ಆಗ ಅವನ ಶೂನ್ಯತ್ವದ ಭ್ರಮದ, ನಿರಸನವಾಗುತ್ತದೆ.

ಮಾತ್ರ ಈ ಸೂಕ್ಷ್ಮ ಭೇದವನ್ನು ವಿವೇಕದಿಂದ ಅರಿಯಬಹುದು ಹ್ಯಾಗೆ ಹಾಲಿನಲ್ಲಿದ್ದ ನೀರನ್ನು ರಾಜಹಂಸ ಬೇರೆ ಮಾಡಿ, ಹಾಲನ್ನೇ ಪ್ರಾಸಿಸುತ್ತದೆ. ಅಂತೆಯೇ ಸಮರ್ಥರು ''ಮೊದಲು ದೃಶ್ಯ ತ್ಯಜಿಸಬೇಕು, ಶೂನ್ಯತ್ವವನ್ನು ದಾಟಬೇಕು, ಅನಂತರ ಮಾಯಾ ವಿಹೀನ (ರಹಿತ) ಪರಬ್ರಹ್ಮನನ್ನು ನೋಡಬೇಕು'' ಎಂದು ಹೇಳುತ್ತಾರೆ.

'ತಾನು ಮತ್ತು ವಸ್ತು ಏಕ । ಇದೇ ಇಹುದು ಜ್ಞಾನದ ವಿವೇಕ ।' ಅಂತ ಹೇಳಿ ಸಮರ್ಥರು 'ಜ್ಞಾನ ದಶಕ'ವನ್ನು ಮುಗಿಸುತ್ತಾರೆ.

'ಗುಣರೂಪ' ಈ ಒಂಬತ್ತನೇ ದಶಕದಲ್ಲಿಯ ಮೊದಲನೇ 'ಶಂಕಾ'ನಾಮಕ ಸಮಾಸದಲ್ಲಿ- ಪರಬ್ರಹ್ಮನ ಅನೇಕ ನಾಮಗಳ (ಉದಾ: ನಿರಾಕಾರ, ನಿರ್ವಿಕಲ್ಪ, ನಿರಂಜನ ಇತ್ಯಾದಿ) ಅರ್ಥ ಕೊಡಲಾಗಿದೆ. ಎರಡನೇ 'ಬ್ರಹ್ಮ ನಿರೂಪಣೆ' ಈ ಸಮಾಸದಲ್ಲಿ 'ಸಾಕಾರ' ಇದ್ದ ವಿಶ್ವವೆಲ್ಲ ಕೊನೆಗೆ ತೀರುವದು, ಮಾತ್ರ ನಿರಾಕಾರ ಬ್ರಹ್ಮ ಮಾತ್ರ ಅನಂತ ಕಾಳ ಉಳಿಯುವದು ಎಂದು ಪ್ರಾರಂಭಿಸಿ, ಬ್ರಹ್ಮ ( ಪರಮಾತ್ಮ) ವು ಹೇಗಿದೆ ಅದರ ಸವಿಸ್ತರ ವಿವೇಚನೆ ಮಾಡಿ, 'ಮಾತನಾಡದೇ, ಮನನ ಮಾಡಬೇಕು, ಚಿಂತನೆಯಲ್ಲಿಯೇ ಮುಳುಗಬೇಕು, ಮೌನವೇ ಅಲಂಕಾರ ಆಗಿರಬೇಕು । ಮಹಾಪುರುಷಗೆ ॥ ಇನ್ನು ಭಂಗಿಸದಿರಲಿ ಮೌನ । ಆಗಿಯೂ ಆಗದಂತಿರಲಿ ಮಿಲನ । ಇದ್ದೂ ನಿಶ್ಶೇಷ ಆಗದಿರಲಿ ಮನ ವಿವೇಕದಿಂದ.' ಎಂದು ಹೇಳಿ ಸಮಾಸ ಮುಗಿಸುತ್ತಾರೆ.

**ನಿಃಸಂದೇಹ ನಿರೂಪಣೆಯಲ್ಲಿ :**

ಶಿಷ್ಯನು, '' ಏನೂ ಮಾಡದೆ, ತನ್ನ ತಾನೇ ಬ್ರಹ್ಮಜ್ಞಾನ ಹೇಗೆ ಆಗುತ್ತದೆ, ಎಲ್ಲ ಮಾಡಿ ಅಕರ್ತಾ, ಎಲ್ಲ ಭೋಗಿಸಿ ಅಭೋಕ್ತಾ, ಸರ್ವರಲ್ಲಿ ಇದ್ದೂ, ಬ್ರಹ್ಮ ಅಲಿಪ್ತ ಹೇಗೆ ಇರುತ್ತಾನೆ, ಇದು ತಿಳಿಯದು '' ಹೀಗೆ ಅನೇಕ ಶಂಕೆಗಳನ್ನು ಪ್ರಕಟಿಸುತ್ತಾನೆ. ಅವನ ಅನೇಕ ವಿಧ ಶಂಕೆಗಳ ನಿರಸನವೇ ಈ ಸಮಾಸದಲ್ಲಿಯ ಉತ್ತರ.

ನಾಲ್ಕನೇ ಜ್ಞಾನ ನಿರೂಪಣೆಯಲ್ಲಿ, ಜ್ಞಾನದ ಮಹತ್ವ ಅನೇಕ ಉದಾಹರಣೆ ಕೊಟ್ಟು, 'ಜ್ಞಾನದಿಂದ ಅಜ್ಞಾನ ಹೋಗಿ, ಸ್ವರೂಪ (ಪರಬ್ರಹ್ಮ)ದಲ್ಲಿ ಕೂಡುವದು,' ಈ ಸತ್ಯವನ್ನು ಶಿಷ್ಯನ ಮನದ ಮೇಲೆ ಬಿಂಬಿಸುತ್ತಾರೆ. ಅವರ ಉತ್ತರದಿಂದ ಶಿಷ್ಯನ ಸಮಾಧಾನ ಆಗುತ್ತದೆ.

ಅನುಮಾನ ನಿರಸನ ಈ ಸಮಾಸದಲ್ಲಿ, 'ಪಿಂಡದಲ್ಲಿ ಇದ್ದುದೇ ಬ್ರಹ್ಮಾಂಡದಲ್ಲಿ' ಈ ಕಲ್ಪನೆಯ ವ್ಯರ್ಥತೆಯ ಬಗ್ಗೆ ಸವಿಸ್ತರ, ಉದಾಹರಣ ಸಹಿತ ಚರ್ಚೆ ಇದೆ. ಆರನೇ 'ಗುಣ-ರೂಪ' ನಿರೂಪಣೆಯ ಪ್ರಾರಂಭ, 'ಇಹುದು ಆಕಾಶವು ಹೇಗೆ ನಿರಾಕಾರ । ಹಾಗೇ ಬ್ರಹ್ಮಕ್ಕೂ ಇಲ್ಲ ಆಕಾರ । ಹ್ಯಾಗೆ ಆಕಾಶದಲ್ಲಿ ವಾಯು ಸಂಚಾರ । ಹಾಗೇ ಬ್ರಹ್ಮದಿ ಮಾಯೆಯ ॥ ಹೀಗೆ ಮಾಡಿ ಸಮರ್ಥರು ತ್ರಿಗುಣ ಮತ್ತು ಪಂಚಮಹಾಭೂತಗಳ ಕಾರ್ಯ, ಸ್ವಭಾವ, ಪರಸ್ಪರಲ್ಲಿಯ ಜನ್ಮ-ಮಿಶ್ರಣ, ಇತ್ಯಾದಿಗಳ ಬಗ್ಗೆ ಸವಿಸ್ತರ ವಿವೇಚನೆ ಮಾಡಿದ್ದಾರೆ. ಕೊನೆಗೆ ಅವರು, ತ್ರಿಗುಣ-ಭೂತಗಳ ಕಾರ್ಯ ಮಿಶ್ರಣದ । ಹೇಳ ಹೋದರೆ ಆಗುವದು ಅಗಣಿತದ । ಬಹುರೂಪ ಬಹು ಪರಿವರ್ತನದ । ಕಥನ ಮಾಡಲಿ ಎಷ್ಟು ? ॥ ಎಂದು ಕೇಳಿ,

''ಈ ಸೃಷ್ಟಿಯ ಹುಟ್ಟಿನ ಗುಟ್ಟಿನ -। ಮಾಡಬೇಕು ವಿವೇಕದಿಂದ ನಿರಸನ । ನಂತರ ಭಜಿಸಬೇಕು ಪರೇಶ ಪರಮಾತ್ಮನ। ಅನನ್ಯ ಭಕ್ತಿಯಿಂದ ॥'' ಹೀಗೆ ತಮ್ಮ ಅನುಭವ ಸಿದ್ಧ-ನಿರ್ಣಯ ಹೇಳುತ್ತಾರೆ.

ವಿಕಲ್ಪ ನಿರಸನ : ಈ ಸಮಾಸದಲ್ಲಿ ಶಿಷ್ಯನ ''ಮೊದಲು ಮನೆಯೋ ಹುಳಗಳು ?, ಜೀವಕ್ಕೆ ಜನ್ಮ ಯಾರು ಕೊಡುವರು ಸತ್ತ ಮೇಲೆ ಯಾರು ಹುಟ್ಟುವರು ?'' ಇತ್ಯಾದಿ ಪ್ರಶ್ನೆಗಳ ನಿರಸನ ಸಮರ್ಪಕ, ತರ್ಕಶುದ್ಧ ಮತ್ತು ವೇದ -ಶಾಸ್ತ್ರ ಪುರಾಣಗಳ ಆಧಾರದಿಂದ ಮಾಡಲಾಗಿದೆ.

ದೇಹಾಂತ ನಿರೂಪಣೆ ಯಲ್ಲಿ 'ಬದ್ಧನಿಗೆ ಪುನರ್ಜನ್ಮ ಯಾತರಿಂದ?' ಹೀಗೆ ಶಿಷ್ಯನು ಕೇಳಿದ ಪ್ರಶ್ನೆಯ ಉತ್ತರ ಕೊಡುವಾಗ ? ಸಮರ್ಥರು, '' ಪಂಚಪ್ರಾಣ ಹೋಗುವವು ಮುಂದೆ । ವಾಸನೆ ಅನುಸರಿಸುವದು ಅವುಗಳ ಹಿಂದೆ ।' ಹೀಗೆ ಪ್ರಾರಂಭ ಮಾಡಿ, ವಾಸನಾರೂಪಿ ಗಾಳಿಯ ಹಿರಿಮೆ, ಮಂತ್ರ-ತಂತ್ರ, ಶಾಪ, ಉಃಶಾಪ ಇತ್ಯಾದಿ ನಾನಾ ಶಕ್ತಿಗಳ ಉಲ್ಲೇಖ ಮಾಡಿ ಉದಾಹರಣೆ ಕೊಟ್ಟು ಶಿಷ್ಯನ ಸಂದೇಹದ ಮುಕ್ತಾಯ ಮಾಡಿದ್ದಾರೆ.

ಸಂದೇಹ ನಿವಾರಣೆ : ಈ ಸಮಾಸದಲ್ಲಿಯ -

'' ಇಹುದು ಖಂಡಿಸಲಾಗದಂಥ -ಅಖಂಡ । ಬ್ರಹ್ಮಕ್ಕಿಂತ ಬೇರೆ ಏನೂ ಇಲ್ಲ ಪ್ರಚಂಡ । ಹೀಗಿದ್ದೂ ಅದರಲ್ಲಿ ಬ್ರಹ್ಮಾಂಡ । ಹೇಗೆ ಹೊಕ್ಕಿತು ?॥ '' ಈ ಶಂಕೆಗೆ ಸಮರ್ಥರು ಬ್ರಹ್ಮ ಮತ್ತು ಸೃಷ್ಟಿ ಈ ಎರಡರಲ್ಲಿಯ ಭೇದ ತಿಳಿಸಿ ಕೊಟ್ಟಿದ್ದಾರೆ. ಬ್ರಹ್ಮದ ಹೋಲಿಕೆಯಲ್ಲಿ ಜಗವು ಕೇವಳ ಶೂನ್ಯವೆಂದು ಹೇಳಿದ್ದಾರೆ.

ಸ್ಥಿತಿ ನಿರೂಪಣೆ ಈ ಸಮಾಸದಲ್ಲಿ ಸಾಮಾನ್ಯ ಸಾಧಕನು ಆತ್ಮಜ್ಞಾನಿ ಆಗುವ ತನಕ, ಬದಲಿಸುವ ಸ್ಥಿತಿಯ ವರ್ಣನೆ ಬಂದಿದೆ. ಕೊನೆಗೆ - ಸಮರ್ಥರು 'ಸ್ವಂತ ತಾನೇ ಬ್ರಹ್ಮರೂಪ ಇದ್ದ ಅನುಭವ ಬಂದೊಡೆ ಸಾರಾಸಾರ ವಿವೇಕದ, ಕರ್ಮ- ಅಕರ್ಮಕದ ವಿಚಾರ ಅನಾವಶ್ಯಕ' ವೆಂದು ಸಾರಿ ಹೇಳುತ್ತಾರೆ.

ಜಗಜ್ಯೋತಿ ನಾಮಕ ಹತ್ತನೇ ದಶಕದ 'ಸರ್ವರ ಅಂತಃಕರಣ ಏಕ, ಈ ಸಮಾಸದಲ್ಲಿ ಶಿಷ್ಯನ, '' ಎಲ್ಲರ ಅಂತಃಕರಣ ಒಂದೇ ಇದ್ದಿದ್ದರೆ ಒಬ್ಬಗೆ ಸುಖ, ಇನ್ನೊಬ್ಬನಿಗೆ ದುಃಖ ಹೀಗೆ ಯಾಕೆ ?'' ಈ ಪ್ರಶ್ನೆಗೆ, ಸಮರ್ಥರು ಕೊಟ್ಟ ಉತ್ತರ ಅತ್ಯಂತ ಸಮರ್ಪಕವಾಗಿದೆ. ಅಂತಃಕರಣಕ್ಕೆ 'ಅರಿವು' ಮಹತ್ವದ ಘಟಕ. 'ಎಲ್ಲಿ ಕಡಿಮೆ ಎಲ್ಲಿ ಅಧಿಕ । ಎಲ್ಲರಲ್ಲಿ ಅರಿವು ಏಕ । ಅರಿವು ಇರುತ್ತದೆ ಸಾರ್ವತ್ರಿಕ । ಸಜೀವಗಳಲ್ಲಿ' ಎಂದು ತಿಳಿಸಿ, 'ಅರಿವು -ಮರೆವಿನ ಬುದ್ಧಿ । ಅದುವೇ ದೇಹದ ಸಹಜ ವಿಧಿ । ಬ್ರಹ್ಮನ ಅಸ್ತಿತ್ವ ಸ್ಥೂಲ ದೇಹದಿ । ಇರುವದು, ಈ ರೀತಿ ।' ಎಂದು ಹೇಳಿ ಸಮಾಸವನ್ನು ಮುಗಿಸುತ್ತಾರೆ.

'ದೇಹ-ಶಂಕಾ' ಈ ಸಮಾಸದಲ್ಲಿ, 'ಬ್ರಹ್ಮ, ವಿಷ್ಣು, ಮಹೇಶ ಮತ್ತು ಮೂಲ ಮಾಯೆಯ ಸ್ಥಾನ, ಈ ವಿಶ್ವದಲ್ಲಿ ಏನು, ಎಷ್ಟು?' ಇತ್ಯಾದಿ ಶಿಷ್ಯನು ಕೇಳಿದ ಪ್ರಶ್ನೆಗಳಿಗೆ ಸಮರ್ಥರು ದೇಹಶಂಕಾ, ಮತ್ತು ದೇಹ ಶಂಕಾ ಶೋಧನೆ ಈ ಸಮಾಸಗಳಲ್ಲಿ ಸವಿಸ್ತರ

ಚರ್ಚೆಮಾಡಿ ಉತ್ತರ ಕೊಟ್ಟಿದ್ದಾರೆ. ಬೀಜ ಲಕ್ಷಣದಲ್ಲಿ ಖೇಚರ, ಭೂಚರ ವನಚರ ಮತ್ತು ಜಲಚರ ಪ್ರಾಣಿಗಳ ಉತ್ಪತ್ತಿ ಪಾಲನ ಮತ್ತು ಸಂಹಾರದ ಬಗ್ಗೆ ಶಾಸ್ತ್ರಾಧಾರ ಕೊಟ್ಟು, ಶಂಕೆಯ ಸಮಾಧಾನ ಮಾಡಿದ್ದಾರೆ.

**ಪಂಚಪ್ರಳಯ ನಿರೂಪಣೆ :** 'ನಿದ್ದೆಯ ಮತ್ತು ಮರಣದ' ಹೀಗೆ ಎರಡು ಪ್ರಕಾರಗಳ ಪ್ರಳಯಗಳಿವೆ ಎಂದು ಹೇಳಿ ಸಮರ್ಥರು, ದೇಹಧಾರಕ ಮೂರು ದೇವರು ಯಾವಾಗ ನಿದ್ದೆ ಮಾಡುತ್ತಾರೋ, ಅದು ಬ್ರಹ್ಮಾಂಡದ 'ನಿದ್ರಾಪ್ರಲಯ'.

ಎರಡು (ಪ್ರಳಯ) ಪಿಂಡದಿ, ಎರಡು ಬ್ರಹ್ಮಾಂಡದಿ, ಐದನೇಯದು, ವಿವೇಕದಿ 'ಹೀಗೆ ಹೇಳಿ ಅವರು, ಅವುಗಳ ವಿವರಣೆಗಳನ್ನೂ ಕೊಟ್ಟಿದ್ದಾರೆ. ಈ ಸಮಾಸ ಓದುವಾಗ 'ಪ್ರಳಯ' ಈ ಶಬ್ದದ ಅರ್ಥ, ಅದರ ವರ್ಣನೆ, ಮೈಮೇಲೆ ರೋಮಾಂಚ ಎಬ್ಬಿಸುತ್ತದೆ. !

ಭ್ರಮ ನಿರೂಪಣೆಯಲ್ಲಿ, ಭ್ರಮದ (ಅಥವಾ ಭ್ರಮಿಷ್ಟನ) ಲಕ್ಷಣ ಬಣ್ಣಿಸಿದ್ದಾರೆ. ಕೊನೆಗೆ ಸಮರ್ಥರು, 'ನಿರ್ಗುಣ ಬ್ರಹ್ಮ ಬಿಟ್ಟು, ಸರ್ವವಿಶ್ವವೇ ಭ್ರಮರೂಪ ಇದೆ' ಎಂದು ಹೇಳಿದ್ದಾರೆ.

ಸಗುಣ-ಭಜನ ನಿರೂಪಣೆಯಲ್ಲಿ -

'ಒಬ್ಬ ಗುರು, ಒಬ್ಬ ದೇವ । ಹೀಗೆ ಒಂದರಲ್ಲೇ ಇಡಬೇಕು ಭಾವ ।' ಹೀಗೆ ಹೇಳಿ, ಸಮರ್ಥರು, 'ನಿರ್ಗುಣದ ಜ್ಞಾನ ಆದವನು ಸಗುಣ ಭಕ್ತಿಯನ್ನು ದುರ್ಲಕ್ಷಿಸಿದರೆ ಸಗುಣ-ನಿರ್ಗುಣ ಈ ಎರಡೂ ಕಡೆಗೂ ಜ್ಞಾನ ಪಡೆಯನು ಎಂದು ಎಚ್ಚರಿಸುತ್ತಾರೆ. ಅನುಭೂತಿ-ನಿರೂಪಣೆಯಲ್ಲಿ, 'ಕುದುರೆ ಓಡಿಸಿ, ವಸ್ತ್ರ ಉಪಯೋಗಿಸಿ ನೋಡಿಯೇ ವ್ಯಾಪಾರ ಮಾಡಬೇಕು, ಬೀಜ ಮೊಳೆತದ್ದನ್ನು ನೋಡಿಯೇ ಹಣ ಕೊಡಬೇಕು' ಇತ್ಯಾದಿ ವ್ಯವಹಾರಿಕ ಉಪದೇಶ ಮಾಡಿದ್ದಾರೆ.

ಅನುಭವ ಮತ್ತು ರೂಢಿ ಇವೆರಡರ ತೊಡಕು ಬಿಡಿಸುವ ಯುಕ್ತಿಯನ್ನು ಸಮರ್ಥರು ಹೇಳಿ ಕೊಟ್ಟಿದ್ದಾರೆ. 'ಪುರುಷ ಪ್ರಕೃತಿ'ಯಲ್ಲಿ, 'ಅರಿವಿನಿಂದೇ ಬಾಳಿಹವು ಜೀವ ' ಈ ಸತ್ಯ ಹೇಳಿ, ಶ್ರವಣ, ಮನನ, ನಿಜಧ್ಯಾಸ - ಅನುಭವಸಿದ್ಧ ವಿಶ್ವಾಸ-।-ದಿಂದ ಆಗುವದು ಸಾಕ್ಷಾತ್ಕಾರ, ಪ್ರಯಾಸ-।- ಅನ್ಯ ಬೇಕಾಗಿಲ್ಲ' ಎಂದು ಬೋಧಿಸುತ್ತಾರೆ.

**ಚಲಾಚಲ ನಿರೂಪಣೆ :**

ಸಕಲರ ಚಾಲಕನಿಹನು ಏಕ । ಇದ್ದರೂ ಜೀವ ಅನೇಕ । ಪಾಲಿಸುವನು ಇರಿವೆಯಿಂದ -ಬ್ರಹ್ಮಾದಿಕ -।-ರನ್ನು ಅವನೊಬ್ಬನೇ ॥ ಹೀಗೆ ವಿಧಾನ ಮಾಡಿ ಸಮರ್ಥರು, 'ನಾನಾ ವ್ರತ, ದಾನ, ಯೋಗ ತೀರ್ಥಾಟನ, ಇವೆಲ್ಲಕ್ಕೂ ಆತ್ಮಜ್ಞಾನವು ಕೋಟಿಪಟ್ಟು ಲೇಸು' ಈ ನಿರ್ಣಯಕ್ಕೆ ಬರುತ್ತಾರೆ.

**ಹನ್ನೊಂದನೆ ದಶಕ : ಭೀಮದಶಕ :**

ಸಿದ್ಧಾಂತ ನಿರೂಪಣೆಯಲ್ಲಿ ಸಮರ್ಥರು, 'ರಾವ, ರಂಕ, ಬ್ರಹ್ಮಾದಿಕ ಸರ್ವರ ಚಾಲಕ ಏಕ' 'ಸಾಮಾನ್ಯರು ಕೇವಳ ದೇಹ ನೋಡುವರು । ವಿವೇಕಿ ಮಾತ್ರ 'ಅಂತರಂಗ' ನೋಡಬಲ್ಲರು !'' ಎಂದು ಹೇಳಿದ್ದಾರೆ. ಚತುರ್‌ದೇವ ನಿರೂಪಣೆಯಲ್ಲಿ ಸಮರ್ಥರು ಮೂರ್ತಿ, ಅವತಾರಿ, ಅಂತರಾತ್ಮಾ ಮತ್ತು ನಿರ್ವಿಕಾರಿ ಹೀಗೆ ನಾಲ್ಕು ಪ್ರಕಾರದ ದೇವರಿರುವರು ಸಮಾನ ಮಾತ್ರ ಗುರುತಿಸಬೇಕು ಅಷ್ಟಧಾ ಪ್ರಕೃತಿಯನ್ನು ಎಂದು ಹೇಳಿ 'ಒಳಗೆ ಸ್ವರೂಪದಿ ಲೀನ ಆಗಬೇಕು ಹೊರಗೆ ಸಾಮಾನ್ಯರಂತೆ ಇರಬೇಕು !' ಈ ಉಪದೇಶ ಕೊಟ್ಟಿದ್ದಾರೆ. ಬೋಧ-ನಿರೂಪಣೆಯಲ್ಲಿ, ಅನೇಕ ಜನ್ಮಗಳ ನಂತರ, ನರದೇಹ ದೊರೆವುದು, ಅಂತೆಯೇ ನ್ಯಾಯ-ನೀತಿಯಿಂದ (ಈ ನರದೇಹ) ನಡೆಸಿರಿ, ಆಲಸ್ಯ ಬಿಟ್ಟು ಸಾಕ್ಷೇಪಿ (ಉದ್ಯೋಗಿ) ಆಗಿರಿ, ಮತ್ತು ಕರ್ಮ, ಉಪಾಸನೆ, ಜ್ಞಾನಗಳಿಂದ ಪರಮಾರ್ಥಿ ಆಗಿ ಬಾಳಿರಿ, ಎಂದು ಬೋಧಿಸಿದ್ದಾರೆ.

ಸಾರ-ವಿವೇಕ ನಿರೂಪಣೆಯಲ್ಲಿ, ವಿವೇಕದಿಂದ ಸಾರಾಸಾರ ವಿಚಾರ ಮಾಡಿ, ಸತ್ಯದ ಹಾದಿ ಹಿಡಿಯಿರಿ ಎಂದು ಹೇಳಿದ್ದಾರೆ.

ರಾಜಕಾರಣ ನಿರೂಪಣೆಯಲ್ಲಿ, ದೇವರ ಅಧಿಷ್ಠಾನ, (ರಾಜ್ಯ) ವ್ಯವಹಾರ ಜ್ಞಾನ, ಮತ್ತು ಸರ್ವ ವಿಷಯಗಳಲ್ಲಿ ಸಾವಧತನ, ಉದ್ಯೋಗಿವೃತ್ತಿ, ಕಾರ್ಯಪ್ರವಣತನ, ಮತ್ತು ಕ್ಷಮಾಶೀಲತೆಬೇಕು. ಅನ್ಯರ ದೋಷ ಕಂಡರೂ ಮುಚ್ಚಬೇಕು. ದುರ್ಜನರನ್ನೂ ಒಲಿಸಬೇಕು ಉಪಕಾರ ಮಾಡಿ, ಹೀಗೆ ಉಪದೇಶಿಸಿ, 'ಮಾಡುವದಿದ್ದರೂ ಅಪರಾಧಿಗೆ ಶಾಸನ । ಮಾಡಬಾರದು ಉಚ್ಚಾರವನ್ನು । ಪ್ರತ್ಯಕ್ಷ ಕೃತಿ ಮಾಡಿಯೇ ಪೂರ್ಣ । ತೋರಿಸಬೇಕು ॥'' ಈ ಎಚ್ಚರಿಕೆ ಕೊಟ್ಟಿದ್ದಾರೆ.

ಮಹಂತ ಲಕ್ಷಣ ಈ ಸಮಾಸದಲ್ಲಿ 'ಏಕಾಂತ ಪ್ರಿಯ, ಘನಪಾಠಿ, ವಾಕ್ ಚತುರ, ಮಾತು ಕಲಿತು, ಕಲಿಸಬಲ್ಲ, ಪಾಂಡಿತ್ಯ, ಕವಿತ್ವ,

ಶ್ರೇಷ್ಠ ಭಾಷಣ ಬಲ್ಲ, ಇತ್ಯಾದಿ ಗುಣ ಇದ್ದವನೇ' 'ಮಹಂತ' ಎನ್ನಿಸಿಕೊಳ್ಳಲು ಯೋಗ್ಯ ವ್ಯಕ್ತಿ. ' ಇಂಥ ಮಹಾಪುರುಷನು । ಅನೇಕರಿಗೆ ಆಧಾರ ಅನ್ನಿಸುವನು' ಎಂದು ಸಮರ್ಥರು ಹೇಳಿದ್ದಾರೆ.

**ಚಂಚಲ ನದಿ :** ಈ ಸಮಾಸ ಸಮರ್ಥರ ಭಾಷಾ, ಅಲಂಕಾರ ಮತ್ತು ಕವಿತ್ವ ಶಕ್ತಿಯ ದರ್ಶನ ಪ್ರಕಟಿಸುತ್ತದೆ..

ಅಂತರಾತ್ಮಾ ವಿವರಣೆ ಈ ಸಮಾಸದಲ್ಲಿ, ''ಅವನೇ ಅಂತರಾತ್ಮ ಸಕಲರ । ದೇವ, ದಾನವ, ಮಾನವರ- ಚತುರ್ವಿಧ ಜೀವ, ಚರಾಚರ-।-ಗಳ ಪ್ರವರ್ತಕನು ॥

ಆದೊಡೆ ತತ್ವದಿಂ ತತ್ವದ ನಿರಸನ । ಆಗುವದು ದೇಹ ಬುದ್ಧಿಯ ಹನನ'' । ನಂತರ ಉಳಿವುದು ಕೇವಳ ನಿರಂಜನ । ನಿಶ್ಚಲ ನಿರ್ಮಲ ।

ಅಂತೆಯೇ ಜಾಣನು ವಿವೇಕ ಇಟ್ಟು ದುಸ್ತರ ಸಂಸಾರ ದಾಟಬೇಕು, ಹರಿಭಕ್ತಿಯಿಂದ ಸಂಪೂರ್ಣ ವಂಶವನ್ನೇ ಉದ್ಧರಿಸಬೇಕು ಎಂದು ಹೇಳಿದ್ದಾರೆ.

ಉಪದೇಶ ನಿರೂಪಣೆಯಲ್ಲಿ, 'ಮೊದಲು ಅನುಭವಿಸಬೇಕು ಅಂತರಂಗವನ್ನು । ನಂತರ ಅನುಭವಿಸಬೇಕು ಅಂತರಾತ್ಮನನ್ನು । ಕಟ್ಟ ಕಡೆಗೆ ಪರಮಾತ್ಮನನ್ನು । ಹೊಂದಬೇಕು' ಎಂದು ಉಪದೇಶಿಸಿದ್ದಾರೆ.

'ನಿಸ್ಪೃಹ ವರ್ತನ' ದಲ್ಲಿ ಸಮರ್ಥರು ನಿಜವಾದ ನಿಸ್ಪೃಹ-ಮಹಂತನ ವರ್ತನೆಯ ಸೂಕ್ಷ್ಮ ನಿರೀಕ್ಷಣ ಮಾಡಿದ್ದಾರೆ.

ಪರಿಶೀಲಿಸಿ ಅನೇಕರನ್ನು । ಅರಿಯಬೇಕು ಅವರಲ್ಲಿಯ ಗುಣ ದೋಷಗಳನ್ನು । ಅರಿದು ಇಡಬೇಕು ಅವರನ್ನು । ದೂರ ವಾ ಸಮೀಪ ॥ ಹೀಗೆ ಉಪದೇಶಿಸಿ, ಸ್ವಂತ ಅನುಭವ ಪಡೆದು ಹೇಳಿದ್ದೇನೆ । ಮೊದಲು ಮಾಡಿ ಅನಂತರ ಬೋಧಿಸಿದ್ದೇನೆ । ಅಂತ ಹೇಳಿದ್ದಾರೆ.

ಹನ್ನೇರಡನೆ 'ವಿವೇಕ ವೈರಾಗ್ಯ', ದಶಕದಲ್ಲಿಯ ವಿಮಲ ಲಕ್ಷಣದಲ್ಲಿ, ಸಮರ್ಥರು,

'ಮೊದಲು ಪ್ರಪಂಚ ಮಾಡಬೇಕು ವ್ಯವಸ್ಥಿತ । ಅನಂತರ ವಿವೇಕದಿಂದ ಪರಮಾರ್ಥ ॥ ಈ ಸುಪ್ರಸಿದ್ಧ ಸಂದೇಶ ಕೊಟ್ಟಿದ್ದಾರೆ. ಪ್ರತ್ಯಯ ನಿರೂಪಣೆಯಲ್ಲಿ,

'ಮಾಡಿದರೆ ಅನ್ಯರಿಗೆ ಚೆನ್ನ । ಆಗುವದು ಒಳ್ಳೆಯದೇ ತನ್ನ ।' ಈ ಜಾಣತನ ಮಾತು ಹೇಳಿ ಕೊನೆಗೆ ''ಇರಲಿ ಕಥಾ ನಿರೂಪಣ । ಅಥವಾ ಉತ್ತಮ ರಾಜಕಾರಣ । ಪ್ರಸಂಗ ನೋಡಿಯೇ ಆಚರಣ । ಮಾಡಬೇಕು ।'' ಈ ಎಚ್ಚರಿಕೆ ಕೊಟ್ಟಿದ್ದಾರೆ.

ಭಕ್ತ ನಿರೂಪಣೆಯಲ್ಲಿ '' ಈ ವಿಶ್ವದಿ, ಜಡ ಮತ್ತು ಚಂಚಲ । ಇವು ಮಾಯೆಯ ಆಟ ಕೇವಳ । ಅವಿನಾಶ ಬ್ರಹ್ಮವೇ ಇಹುದು ನಿಶ್ಚಲ । ಅನಾದಿ ಅನಂತ । ಈ ಸತ್ಯದ ಅರಿವು ಮಾಡಿ ಕೊಟ್ಟಿದ್ದಾರೆ. ಅನಂತರ '' ಜನ್ಮ-ಮರಣ ತಪ್ಪುವದು । ಪಾಪ ತೊಳೆದು ಹೋಗುವದು । ಪೂರ್ಣನಷ್ಟ ಆಗುವದು । ಯಮ ಯಾತನೆ ನಿಶ್ಚಿತ!'' ಈ ವಿಶ್ವಾಸ ಪ್ರಕಟಿಸಿದ್ದಾರೆ. ವಿವೇಕ ವೈರಾಗ್ಯ ಈ ಸಮಾಸದಲ್ಲಿ ಸಮರ್ಥರು ವೈರಾಗ್ಯವು ವಿವೇಕದ ವಿನಾ ವ್ಯರ್ಥ ಎಂದು ಹೇಳಿ, ವಿವೇಕಯುತ ವೈರಾಗಿಯೇ ಪುಣ್ಯ ಪುರುಷನು । ಕೇವಲ ವೈರಾಗ್ಯವಂತನು ತಲೆ ತಿರುಕನು । ಬರೇ ಶಬ್ದಜ್ಞಾನ ಅರಿವ ಪಂಡಿತನು । ನಿರುಪಯೋಗಿ ॥ ಈ ವಸ್ತುಸ್ಥಿತಿಯ ಕಡೆಗೆ ವಾಚಕನ ಲಕ್ಷ ಸೆಳೆದಿದ್ದಾರೆ. ಕೊನೆಗೆ, ' ವಿವೇಕ -ವೈರಾಗ್ಯ ಇವೆರಡರ ಸಂಗಮವೇ ಮಹದ್ಭಾಗ್ಯ । ಸಾದು-ಸಂತನೇ ಇದನು ಅರಿವನು ಯೋಗ್ಯ ।' ಅಂದಿದ್ದಾರೆ ಸಮರ್ಥರಾಮದಾಸರು.

ಆತ್ಮ ನಿವೇದನ ಸಮಾಸ ಓದಿದರೆ ಸಮರ್ಥರ, ಅಭ್ಯಾಸ, ನಿರೀಕ್ಷಣ, ಮತ್ತು ಪ್ರತಿಭೆಯ ಪ್ರತ್ಯಯ ಬರುತ್ತದೆ. ಭಾಷಾ ಸಾಹಿತ್ಯ (ಗದ್ಯ-ಪದ್ಯ) ವ್ಯಾಕರಣ, ಸಂಗೀತದ ಉದ್ಭವದ ಬಗ್ಗೆ ಅವರು ಮಾಡಿದ ವಿವೇಚನೆ ಓದಿ ಸೋಜಗವಾಗುತ್ತದೆ. ಇಷ್ಟೆಲ್ಲ ಸಂಶೋಧನೆಯ ನಂತರ ಸಮರ್ಥರು ಬ್ರಹ್ಮ ಜ್ಞಾನದ ಸಮಾಧಾನ ಪಡೆದು, ಮೂಕ (ಅವಾಕ್) ಆಗುತ್ತಾರೆ.

ಸೃಷ್ಟಿ ಕ್ರಮ ನಿರೂಪಣೆಯಲ್ಲಿ, ಸಮರ್ಥರು, ಬ್ರಹ್ಮಾ ವಿಷ್ಣು, ಮಹೇಶರ ಉತ್ಪತ್ತಿಯ ಕಥನ ಮಾಡಿದ್ದಾರೆ. ಅದನ್ನು ಓದುವಾಗ ಅವರ ಕಲ್ಪನಾ ವಿಲಾಸ ನೋಡಿ ಆಶ್ಚರ್ಯ ಆಗುತ್ತದೆ. ಈ ಸಮಾಸದಲ್ಲಿ ದೃಶ್ಯ ಸೃಷ್ಟಿಯ ಜನ್ಮದ ವರ್ಣನೆ ಅತ್ಯಲ್ಪ ಶಬ್ದಗಳಲ್ಲಿ ಚಿತ್ರಿತವಾಗಿದೆ.

**ವಿಷಯ ತ್ಯಾಗ :** ಈ ಸಮಾಸದಲ್ಲಿ ತ್ಯಾಗದ (ಮುಖ್ಯವಾಗಿ ವಿಷಯ ತ್ಯಾಗದ ) ಅವಶ್ಯಕತೆಯನ್ನು ಪ್ರತಿಪಾದಿಸಿದ್ದಾರೆ. ''ವೈರಾಗ್ಯದಿಂದ ಮಾಡಿದರೇನೆ ತ್ಯಾಗ। ಸಾಧಿಸಿಬಹುದು ಪರಮಾರ್ಥ ಯೋಗ । ಪ್ರಪಂಚ ತ್ಯಾಗದಿಂ ಯಥಾಸಾಂಗ । ಸಾಧ್ಯ ಪರಮಾರ್ಥವು.

ಕಾಲ ನಿರೂಪಣೆಯಲ್ಲಿ, ಬ್ರಹ್ಮದಲ್ಲಿ ಮೊದಲು ಮೂಲಮಾಯೆ ಹುಟ್ಟಿತು । ಮುಂದೆ ಅಷ್ಟಧಾ (ಮೂರು ಗುಣ ಮತ್ತು ಪಂಚ ಭೂತ ಹೀಗೆ) ಪ್ರಕೃತಿ ವಿಸ್ತರಿಸಿತು । ಅನಂತರ ಆಕಾರ ಪಡೆಯಿತು । ಯಥಾಕ್ರಮದಿಂದ ॥ ಹೀಗೆ ಪ್ರಾರಂಭಿಸಿ, ರವಿಯಿಂದ ವೇಳೆ ತಿಳಿವುದು । ಎಲ್ಲದರ ಗಣನೆ ಮಾಡಲು ಬರುವದು । ಒಂದು ಕ್ಷಣದಿಂದ ಹಿಡಿದು । ಯುಗದ ತನಕ ॥ ಹೀಗೆ ಹೇಳಿ ಅನೇಕ ತಪಶೀಲಗಳನ್ನು ಕೊಟ್ಟು, ಕೊನೆಗೆ - ಸಂತೆ ಕೂಡಿದೆ ಸಂಸಾರದ । ವಿಚಾರಬೇಕು ದೇವರ ಲಾಭದ । ಅನ್ಯಥಾ ಆಗದು ಸಾರ್ಥಕ ಜನ್ಮದ । ಉದ್ದೇಶವು ॥'' ಹೀಗೆ ಎಚ್ಚರಿಕೆ ಕೊಟ್ಟು ಸಮಾಸ ಮುಗಿಸಿದ್ದಾರೆ.

ಯತ್ನ ಬೋಧದಲ್ಲಿ, '' ಸಣ್ಣದಿರಲಿ, ದೊಡ್ಡದಿರಲಿ । ಅದೃಷ್ಟ ಬೇಕಿದ್ದರೆ ಭವಿಷ್ಯದಲ್ಲಿ, ಕೆಲಸ ಅವಶ್ಯಕ'' ಸಾಧಕನು ಮಹಂತನ ಉಚ್ಚಪದಕ್ಕೆ ಮುಟ್ಟುವದಕ್ಕಾಗಿ ಅವನು ಮಾಡಬೇಕಾದ ಅಭ್ಯಾಸ, ಅವನ ವರ್ತನೆ, ಇತ್ಯಾದಿಗಳ ಸವಿಸ್ತಾರ ಮಾಹಿತಿ ಕೊಟ್ಟಿದ್ದಾರೆ.

ಹತ್ತನೇ 'ಉತ್ತಮ ಪುರುಷ ನಿರೂಪಣೆ '' ಈ ಸಮಾಸದಲ್ಲಿಯ ಪ್ರತ್ಯೇಕ ಓವಿ ಪ್ರತಿಯೊಬ್ಬನು ಮುಖೋದ್ಗತ (ಬಾಯಿಪಾಠ) ಮಾಡಲೇ ಬೇಕು, ಅಷ್ಟು ಮಹತ್ವದ, ಇದೆ.

ಹದಿಮೂರನೇ 'ನಾಮರೂಪ' ದಶಕದಲ್ಲಿಯ ಆತ್ಮಾನಾತ್ಮ ವಿವೇಕ : ಈ ಸಮಾಸದಲ್ಲಿ ಸಜೀವ ಪ್ರಾಣಿ (ನಾಲ್ಕು ಪ್ರಕಾರ)ಗಳ ಚಲನ-ವಲನ ಎಲ್ಲವೇ ಆತ್ಮದ ಸಂಕೇತದಿಂದ ಆಗುತ್ತದೆ. ಆತ್ಮದ ಕಾರ್ಯದ ಬಗ್ಗೆ ಇಲ್ಲಿ ಸವಿಸ್ತರ ವರ್ಣನೆ ಬಂದಿದೆ. ಕೊನೆಗೆ, 'ದೇಹ ಅನಿತ್ಯ, ಆತ್ಮ ನಿತ್ಯ । ಇದುವೇ ವಿವೇಕ ನಿತ್ಯಾನಿತ್ಯ' ಎಂದು ಹೇಳಿದ್ದಾರೆ.

ಸಾರಾಸಾರ ನಿರೂಪಣೆಯಲ್ಲಿ, ನಿತ್ಯಾನಿತ್ಯದ ವಿವೇಕದಿಂದ ದೃಷ್ಟಿ ದೊರೆವುದು ಅಂತರಾತ್ಮದ । ಅದನ್ನೂ (ದಾಟಿ) ಬಿಟ್ಟು ನಿರಾಕಾರದ -।- ಕಡೆಗೆ ತಲುಪಬೇಕು. ಸೋಹಂ ಅಂದರೆ ಅವನೇ ನಾನು । ಅಹಂ ಸಃ ಅಂದರೆ ನಾನೇ ಅವನು । ಮುಟ್ಟಿದೊಡೆ ಇಂಥ ಸ್ಥಿತಿಯನ್ನು, ಬ್ರಹ್ಮಪ್ರಾಪ್ತಿ ಸಹಜ. ಆನಂತರ ಸ್ವರೂಪ (ಪರಮಾತ್ಮ)ದಲ್ಲಿ ತದ್ರೂಪ ಆಗುವ ಸ್ಥಿತಿಯ ಮಾರ್ಗದರ್ಶನ ಮಾಡಿ ಸಮಾಸವನ್ನು ಮುಗಿಸಿದ್ದಾರೆ.

ಸೃಷ್ಟಿ ನಿರ್ಮಾಣದ ಸಮಾಸದಲ್ಲಿ, ಮೂಲ ಮಾಯೆಯಲ್ಲಿ ಹುಟ್ಟಿದ ಸೃಷ್ಟಿಯ (ಪೃಥ್ವಿ ಮತ್ತು ಸಜೀವಗಳ) ವಿಕಾಸದ ಆಲೇಖವನ್ನು ರೇಖಿಸಿದ್ದಾರೆ.

**ಪ್ರಲಯ ನಿರೂಪಣೆಯಲ್ಲಿ :** ಶಾಸ್ತ್ರಗಳಲ್ಲಿ ಹೇಳಿದಂತೆ -ದೃಶ್ಯ (ಈ ಸಧ್ಯದ ಮಿಥ್ಯಾ) ಸೃಷ್ಟಿಯ ಪ್ರಲಯದ (ಸಂಹಾರದ) ವರ್ಣನೆ ಬಂದಿದೆ. ಈ ವರ್ಣನೆ ಅತ್ಯಂತ ರೋಚಕ ಹಾಗೇ, ರೋಮಾಂಚಕವಾಗಿದೆ.

ಕಥಾ ನಿರೂಪಣೆಯಲ್ಲಿ - ಈ ಸೃಷ್ಟಿಯ ಪ್ರಾರಂಭದಲ್ಲಿ ಕಂಡು ಬಂದ ಪ್ರೀತಿಯ ಪರಿಣಿತಿ ಕಲಹದಲ್ಲಿ ಹೇಗೆ ಆಯಿತು. ಅದರ ವರ್ಣನೆ ಬಂದಿದೆ. ಕೊನೆಗೆ ಸಮರ್ಥರು 'ಇಂಥ ಕತೆಯನ್ನು ನಿರಂತರ । ವಿವೇಕದಿಂದ ಕೇಳುವ ನರ । ಮಾಡಬಹುದು ಜಗದ ಉದ್ಧಾರ!' ಈ ಆಶೆ ಇಟ್ಟಿದ್ದಾರೆ.

ಲಘು ಬೋಧದಲ್ಲಿ, ಈ ಪಂಚಭೌತಿಕ ದೃಶ್ಯ ಸೃಷ್ಟಿಯ ವಿನಾಶವು ನಿಶ್ಚಿತ ಇದ್ದರೂ ಪರಬ್ರಹ್ಮ ಹೇಗೆ ಶಾಶ್ವತ ಇದೆ, ಈ ವಿಚಾರವನ್ನು ಪ್ರಕಟಿಸಿದ್ದಾರೆ.

ಪ್ರತ್ಯಯ ನಿರೂಪಣೆಯಲ್ಲಿ, ಜಾಣನು ಸುಖದ ಮಾರ್ಗವನ್ನೇ ಕ್ರಮಿಸಬೇಕು, ಮತ್ತು ಬ್ರಹ್ಮಾಂಡ-ದಾಚೆ ದೇವನನ್ನು ಶೋಧಿಸಬೇಕು ಎಂದು ಸಾರಿ ಹೇಳಿದ್ದಾರೆ.

ಕರ್ತಾರ ನಿರೂಪಣೆಯಲ್ಲಿ, 'ಸಕಲಸೃಷ್ಟಿ, ಬ್ರಹ್ಮಾಂಡದ ಜನಕನು ಯಾರು ?' ಹೀಗೆ ಶಿಷ್ಯನು ಕೇಳಿದ ಪ್ರಶ್ನೆಯೇ ತಪ್ಪಾಗಿದೆ ಕಾರಣ ಈ ದೃಶ್ಯ ಸೃಷ್ಟಿಯೇ ಮಿಥ್ಯಾ ಇದೆ । ಎಂದು ಸಮರ್ಥರು ಪ್ರತಿಪಾದಿಸಿದ್ದಾರೆ.

ಆತ್ಮ ವಿವರಣೆಯಲ್ಲಿ - ' ಆತ್ಮಕ್ಕೆ ಶರೀರದ ಕಾರಣ ।, ಮಾಡಬೇಕಾಗುತ್ತದೆ ಉದ್ವೇಗ ಚಿಂತೆ ಸಹನ । ದೇಹವೇ ಆತ್ಮದ ವಸತಿಸ್ಥಾನ' ಈ ಕಲ್ಪನೆಯ ಸವಿಸ್ತರ ವರ್ಣನೆ ಮಾಡಲಾಗಿದೆ.

ಪ್ರಬೋಧ ನಿರೂಪಣೆಯಲ್ಲಿ, ನಿಸ್ಪೃಹ ಮಹಂತನು ತೋರಬೇಕಾಗಿದ್ದ ಜಾಣತನದ ಬೋಧ ವಿದೆ.

ಮಾಡಿದೊಡೆ ಮನಗಳ ಸಂಧಾನ । ಆಗುವದು ಸರ್ವಲ್ಲಿ ಐಕ್ಯದ ಜೋಪಾನ ॥ ಹೀಗೆ 'ತೀರ್ಮಾನ' ಕೊಟ್ಟು ಸಮಾಸದ ಮುಕ್ತಾಯ ಮಾಡಲಾಗಿದೆ.

**ಅಖಂಡ ಧ್ಯಾನ ನಾಮಕ :** ಹದಿನಾಲ್ಕನೇ ದಶಕದ 'ನಿಸ್ಪೃಹ ಲಕ್ಷಣ ಸಮಾಸದಲ್ಲಿ ಮಹಂತನು ಪಾಲಿಸಬೇಕಾದ ನೀತಿ ನಿಯಮ, ಮತ್ತು ಆಚಾರ ಸಂಹಿತೆಯ ತಪಶೀಲು (ವಿವರಣೆ) ಇದೆ.

ಉದಾ : ದೊಡ್ಡಸ್ತನ ಇದ್ದ ಕಡೆ ಹೋಗಬಾರದು । ಅಪವಿತ್ರ ಅನ್ನ ತಿನ್ನಬಾರದು । ಬೀಗರೊಂದಿಗೆ ಸ್ವೀಕರಿಸಬಾರದು । ನಿಮಂತ್ರಣ ॥ ಶ್ರಾದ್ಧ ಪಕ್ಷ, ಷಷ್ಠಿ, ಶಾಣ್ಮಾಸ । ಶಾಂತಿ, ಫಲ, ಶೋಭನೆ, ತೊಟ್ಟಲು ದಿವಸ । ಭೂತ -ಬಾಧೆ, ವ್ರತ ಉದ್ಯಾಪನ-ವಿಶೇಷ । ಆದಿಕಾರ್ಯಕ್ಕೆ (ಹೋಗಬಾರದು), ಹಣಕ್ಕಾಗಿ ಧರ್ಮಕಾರ್ಯ ಮಾಡಬಾರದು। ಹಣಕ್ಕಾಗಿ ಪೂಜೆ ಮಾಡಬಾರದು । ಕೊಟ್ಟರೂ ಸ್ವೀಕರಿಸಬಾರದು । ಪಾರಿತೋಷಿಕ ॥

ಭಿಕ್ಷಾ ನಿರೂಪಣೆಯಲ್ಲಿ - ಬ್ರಾಹ್ಮಣನ ಮುಖ್ಯ ದೀಕ್ಷಾ । ಬೇಡಲೇಬೇಕು ಭಿಕ್ಷಾ ॥ ಹೀಗೆ ಪ್ರಾರಂಭಿಸಿ, ಭಿಕ್ಷುಕನು ಪಾಲಿಸಬೇಕಾದ ನೀತಿ-ರೀತಿಯ ವಿವರಣೆ ಬಂದಿದೆ.

ದತ್ತ, ಗೋರಕ್ಷಕ ಆದಿ ಯೋಗಿಯರೂ । ಸಿದ್ಧ ಭಿಕ್ಷೆ ಬೇಡಿಹರು । ಭಿಕ್ಷೆಯ ಮುಖಾಂತರ ಪ್ರಕಟಿಸಿಹರು । ನಿಸ್ಪೃಹತೆಯನ್ನು ॥

ಭಿಕ್ಷೆ ಎಂದರೆ ನಿರ್ಭಯ ಸ್ಥಿತಿ । ಭೀಕ್ಷೆಯಿಂದ ಹುಟ್ಟುವವು ಮಹಂತ ವೃತ್ತಿ । ಸ್ವಾತಂತ್ರ್ಯ ಮತ್ತು ಈಶ್ವರ ಪ್ರಾಪ್ತಿ । ಭಿಕ್ಷೆಯಿಂದಲೇ ॥ ಕೊನೆಗೆ -ಭಿಕ್ಷೆಯ ಸಮ ವೈರಾಗ್ಯವಿಲ್ಲ । ವೈರಾಗ್ಯದ ಸಮ ಭಾಗ್ಯವಿಲ್ಲ । ಹೀಗೆ ಭಿಕ್ಷೆಯ ಮಹತಿ ವರ್ಣಿಸಿದ್ದಾರೆ.

ಕವಿತ್ವಕಲಾ ನಿರೂಪಣೆಯಲ್ಲಿ, ಉತ್ತಮ ಕವಿತ್ವದ ಲಕ್ಷಣ ಹೇಳಲಾಗಿವೆ. ಯಾವ ಕವಿತ್ವದಿಂದ ದೇಹಬುದ್ಧಿ ಹೋಗಿ, ಭವ ಬಂಧನ ಹರಿಯುವದು, ನಾಸ್ತಿಕತೆ ಹೋಗಿ, ವಿವೇಕ ಪ್ರಕಟಿಸುವದು, ಸದ್ವಸ್ತು (ಪರಬ್ರಹ್ಮ) ಕಾಣುವದು, ದೃಶ್ಯ ಸೃಷ್ಟಿಯ ಭಾಸ ಹೋಗುವದು, ಅದೇ ಉತ್ತಮ ಕಾವ್ಯ !.

ಕೀರ್ತನ ಲಕ್ಷಣದಲ್ಲಿ, 'ಕೀರ್ತನ ಮಾಡುವಾಗ ಕೋಮಲ ಸ್ವರದಲ್ಲಿ ಹಾಡಬೇಕು, ಕರ್ಕಶ, ಕಳ್ಳತನ, ಕಠಿಣತನ ಬಿಡಬೇಕು, ಹೀಗೆ ಪ್ರಾರಂಭಿಸಿ, ಸಮರ್ಥರು, ಕೀರ್ತನಕಾರರಿಗೆ ಮಾರ್ಗದರ್ಶನ ಮಾಡಿದ್ದಾರೆ.

**ಹರಿಕಥಾ ಲಕ್ಷಣದಲ್ಲಿ -**

ನವರಸದ ಕೂಡ-ಶೃಂಗಾರಿಕ-।- ಮಾತ್ರ ತ್ಯಜಿಸಬೇಕು ಏಕ-।- ಸ್ತ್ರೀ ಸೌಂದರ್ಯ ಶಾರೀರಿಕ । ವರ್ಣನೆಯನ್ನು ॥ ಹೀಗೆ ಎಚ್ಚರಿಕೆ ಕೊಟ್ಟು, ಈಶ್ವರನಲ್ಲಿಟ್ಟು ಮನ । ಮಾಡುವನು ಯಾವನು ಕೀರ್ತನ । ತಿಳಿಯಿರಿ ಜಗದಿ ಸಂಪೂರ್ಣ-।-ಅವನೇ ಧನ್ಯ ॥ ಎಂದು ಉತ್ತಮ ಹರಿಕಥಾ ಕೀರ್ತನಕಾರರ ಪ್ರಶಂಸನೆ ಮಾಡಿದ್ದಾರೆ.

**ಚಾತುರ್ಯ ಲಕ್ಷಣದಲ್ಲಿ** - ರೂಪ ಲಾವಣ್ಯ ಅಭ್ಯಾಸದಿಂದ ಲಭಿಸದು । ಮಾತ್ರ ಅಭಾಸದಿಂದ ಸದ್ಗುಣ ಸಾಧಿಸಬಹುದು ॥ ಹೀಗೆ ಪ್ರಾರಂಭಿಸಿ, ಅಜ್ಞಾನಿಗಳನ್ನು ಮಾಡಬೇಕು ಜಾಣ । ಪತಿತರನ್ನು ಮಾಡಬೇಕು ಪಾವನ । ವಿಶ್ವದಲ್ಲಿ ಭಗವದ್ಭಜನ । ಬೆಳೆಸಬೇಕು ॥ ಹೀಗೆ ಉಪದೇಶಿಸಿ ಸಮಾಸದ ಸಮಾಪ್ತಿ ಮಾಡಿದ್ದಾರೆ.

ಯುಗಧರ್ಮ ನಿರೂಪಣೆಯಲ್ಲಿ, ನಾನಾ ವೇಶ, ನಾನಾ ಆಶ್ರಮ, ಈ ಎಲ್ಲರ ಮೂಲ, ಗೃಹಸ್ಥಾಶ್ರಮ । ಎಲ್ಲಿ ಪಡೆಯುವರು ವಿಶ್ರಾಮ। ತ್ರಿಲೋಕ ವಾಸಿಗಳು । ಹೀಗೆ ಪ್ರಾರಂಭಿಸಿ, ಗೃಹಸ್ಥಾಶ್ರಮದ ಮಹಿಮೆಯನ್ನು ಬಣ್ಣಿಸಿದ್ದಾರೆ. ಸಮರ್ಥ ರಾಮದಾಸರ ಕಾಲದಲ್ಲಿ ಬ್ರಾಹ್ಮಣರಲ್ಲಿ ಬೆಳೆದ ಹೀನ ವೃತ್ತಿಯ ಬಗ್ಗೆ 'ಸಧ್ಯದ ದ್ವಿಜನು ಬುದ್ಧಿ ಕಳೆದಿಹನು । ಸದಾಚಾರದಿಂದ ಭ್ರಷ್ಟ ಆಗಿಹನು ॥ 'ಹೀಗೆ ದುಃಖದ ಉದ್ಗಾರ ತೆಗೆದಿದ್ದಾರೆ.

ಅಖಂಡ ಧ್ಯಾನ ನಿರೂಪಣೆಯಲ್ಲಿ, ಏಕಾಗ್ರಚಿತ್ತದಿಂದ ಯತ್ನಪೂರ್ವಕ ಧ್ಯಾನ ಧಾರಣೆ ಮಾಡಿದಲ್ಲಿ-ಜ್ಞಾನ ದೊರೆವುದೆಂದು ಸಮರ್ಥರ ನಿರ್ಣಯ ಇದೆ.

ತ್ಯಜಿಸಬೇಕು ವಿವೇಕದಿಂ ಅಭಿಮಾನ । ಮಾಡಿ ಮಾಯೆಯ ನಿರಸನ । ಮತ್ತು ಪೂರ್ವಪಕ್ಷದ ಖಂಡನ । ಆಗಬೇಕು ಸ್ವಯಂ ಬ್ರಹ್ಮ ॥ ಹೀಗೆ ಧ್ಯಾನ ಮಾಡುವ ಗುಟ್ಟನ್ನು ಹೇಳಿಕೊಟ್ಟಿದ್ದಾರೆ.

**ಶಾಶ್ವತ ನಿರೂಪಣೆಯಲ್ಲಿ** - '' ಸುಳ್ಳು ಇದ್ದುದನ್ನೆಲ್ಲ ತ್ಯಜಿಸಬೇಕು । ಪ್ರತ್ಯಯ (ಅನುಭೂತಿಯಿಂದ)ದಿಂದ ನಿಜವನ್ನು ಗುರುತಿಸಬೇಕು। ಮಾಯೆಯನ್ನು ತ್ಯಜಿಸಿ ಅರಿಯಬೇಕು । ಪರಬ್ರಹ್ಮನನ್ನು ॥ '' ಹೀಗೆ ಸಮರ್ಥರು ಸಾರಿ ಹೇಳಿದ್ದಾರೆ. ಮಾಯಾ ನಿರೂಪಣೆಯಲ್ಲಿ, 'ಮಾಯೆ ಕಾಣುವದು ಮಾತ್ರ ತೀರುವದು । ವಸ್ತು (ಬ್ರಹ್ಮ) ಕಾಣದು ಮಾತ್ರ ತೀರದು' ಹೀಗೆ ಪಾರ್‌ರಂಭಿಸಿ, ಮಾಯೆಯ ಅನೇಕ ವಿಧ ರೂಪಗಳ ವರ್ಣನೆ ಮಾಡಲಾಗಿದೆ.

ಹದಿನೈದನೇ 'ಆತ್ಮದಶಕ'ದ ಒಂದನೇ 'ಚಾತುರ್ಯ ಲಕ್ಷಣ' ಈ ಸಮಾಸದಲ್ಲಿ ಮನುಷ್ಯರ ಅನೇಕ ವಿಧ ಸ್ವಭಾವ, ಶ್ರೇಷ್ಠ ವಾ ಕನಿಷ್ಠನ ಕರ್ಮದ ಅನುಸಾರ ಅವನು ಉಪಯುಕ್ತ ವಾ ಉಪದ್ರವಿ ಆಗುತ್ತಾನೆ. ಮಾತ್ರ ಜನರ ಸಮೂಹ ಕೂಡಿಸಿ, ಸಮಾಜದ ಉನ್ನತಿ ಮಾಡಲಿಚ್ಛಿಸುವ ಮಹಂತನು, 'ಬಾಹ್ಯವೇಶ ಇಡಬೇಕು ಸಾಮಾನ್ಯ । ಮೈಯಲ್ಲಿರಬೇಕು ಗುಣ ಅಸಾಮಾನ್ಯ । ಗೆಲ್ಲಬೇಕು ಎಲ್ಲರ ಹೃದಯ । ಪ್ರೀತಿಯಿಂದ ॥ ಎಂದು ಸಮರ್ಥರು ಉಪದೇಶಿಸಿದ್ದಾರೆ.

ನಿಸ್ಪೃಹ ವ್ಯಾಪದಲ್ಲಿ - ಆ ಕಾಲದಲ್ಲಿ ಭಾರತ ವರ್ಷದಲ್ಲಿ ಕಂಡು ಬಂದ ಸಮಾಜದ ಚಿತ್ರಣವನ್ನು ಸಮರ್ಥರು ಅತ್ಯಂತ ಪ್ರಭಾವಿ ಶೈಲಿಯಲ್ಲಿ ಮಾಡಿದ್ದಾರೆ. ಆ ಕಾಲದಲ್ಲಿ ಸಂತಮಹಂತರ ಕಾರ್ಯವು ಹೇಗೆ ಗುಪ್ತ ರೀತಿಯಿಂದ ನಡೆಯುತ್ತಿತ್ತು, ಅದನ್ನು ಈ ಸಮಾಸದಲ್ಲಿಯ ಓವಿಗಳಿಂದ ಅರಿಯಬಹುದು.

(ಮಹಂತನು) 'ಗಿರಿ-ಕಂದರದಲ್ಲಿ ವಾಸಿಸುವನು । ಯಾರಿಗೂ ಬರಲಾಗದಂತೆ ಅಡಗಿರುವನು । ಮಾತ್ರ ಸರ್ವರ ಚಿಂತೆ ವಹಿಸುವನು । ಸರ್ವಕಾಲ ॥ ಬೆಟ್ಟ ಘಟ್ಟದಲ್ಲಿ ದುರ್ಗಮ, ಕಠಿಣ । ವಾಸಿಸಿದರೂ ಗಿರಿ ಜನರ ಸಮಾನ । ಬರುವರು ಶೋಧಿಸುತ್ತ ಜನ । ದೂರ ದೇಶದಿಂದಲೂ ॥

ಇಂಥ ಚತುರ ಮಹಂತನು, ಸ್ವಂತ ದೂರ ಉಳಿದು, ಜನ ಕೂಡಿಸಿ 'ರಾಜಕಾರಣ' ನಡೆಸುತ್ತಾನೆ. (ಈ ಸಮಾಸದಲ್ಲಿ ಹೇಳಿದ ಸಂತ ಮಹಂತನು ಸ್ವಂತ ಸಮರ್ಥರಾಮದಾಸನೇ... ಇದು ಜಾಣರಿಗೆ ಗೊತ್ತಿದ್ದ ಮಾತು)

ಶ್ರೇಷ್ಠ ಅಂತರಾತ್ಮಾ ನಿರೂಪಣೆಯಲ್ಲಿ..

ಉಚ್ಚ ಸಿಂಹಾಸನದಲ್ಲಿ ಕುಳಿತಿಹನು । ತನ್ನ ಸೈನ್ಯದೊಂದಿಗೆ ಅರಸನು । ಹಾಗೇ ವಿರಾಜಮಾನ ಪರಮಾತ್ಮನು । ವಿಶ್ವಮಾಲೆಯಲ್ಲಿ ॥ ಹೀಗೆ ಆರಂಭಿಸಿ, ''ಯಾರಲ್ಲಿ ಹೆಚ್ಚು ಅರಿವು ಇರುವದು । ಅದೃಷ್ಟ ಉತ್ತಮ ಅವರದು । ಅಲ್ಪ ಅರಿವು ಯಾರದು । ಅವರು ದುರ್ದೈವಿ ॥ ಎಂದು ಹೇಳಿ ಅರಸನ ವಯಸ್ಸು ಸಣ್ಣದಿದ್ದರೂ । ವಂದಿಸುವರು ವೃದ್ಧರೂ ॥ ಈ ಸತ್ಯದ ಮಾತನ್ನು ಅನೇಕ ಉದಾಹರಣೆ ಕೊಟ್ಟು ಬಿಂಬಿಸಿದ್ದಾರೆ. 'ಜ್ಞಾನದ ಹೊರತು ಬೆಲೆ ಇರದು । ಅನ್ಯಥಾ ಹುಟ್ಟಬಂದ ಲಾಭ ಯಾವದು ?' ಎಂದು ಕೇಳಿ ಕೊನೆಗೆ '' ಸಾಧಕನಿಗಾಗಿ ಬೋಧಿಸಿಹೆನು । ಮಾನ್ಯ ಆದಲ್ಲಿ ಅನುಸರಿಸಿರಿ ಉಪದೇಶವನ್ನು ''ಹೀಗೆ ಹೇಳಿ ಮುಗಿಸಿದ್ದಾರೆ ಸಮಾಸವನ್ನು .

ಶಾಶ್ವತ ಬ್ರಹ್ಮ ನಿರೂಪಣೆಯಲ್ಲಿ ಪಂಚಭೂತಗಳಲ್ಲಿ ಸತತ, ನಿರಂತರ ಆಗುವ ಬದಲಾವಣೆಗಳ ಚಿತ್ರಣೆ ಮಾಡಿ, 'ಭೂತವೆಂದರೆ ನಿರ್ಮಾಣ ಆಯಿತು । ಮತ್ತೆ ಅದು ತೀರಿ ಹೋಯಿತು । ಮುಂದೆ ಶಾಶ್ವತ ಉಳಿಯಿತು । ಪರಬ್ರಹ್ಮವೇ ॥ ಈ ತ್ರಿಕಾಲಾಬಾಧಿತ ಸತ್ಯವನ್ನು ಹೇಳಿದ್ದಾರೆ.

ಚಂಚಲ-ಲಕ್ಷಣ -ನಿರೂಪಣೆಯಲ್ಲಿ, ಅಷ್ಟಧಾ ಪ್ರಕೃತಿಯ ಚಲನವು ನಿರ್ಗುಣ ಬ್ರಹ್ಮನ ಸಂಕೇತದಿಂದ ನಡೆದಿದೆ ಇದನ್ನು ಅನೇಕ ಉದಾಹರಣೆ ಕೊಟ್ಟು ತಿಳಿಸಿಕೊಟ್ಟಿದ್ದಾರೆ. ಚಾತುರ್ಯ ವಿವರಣೆಯಲ್ಲಿ, ಜನರ ಮತ ಮತಾಂತರಗಳ ವಿವರಣೆ ಇದೆ ''ಅನೇಕರ ವಿಚಾರ ಕೇಳಬೇಕು । ಮಾತ್ರ ತನ್ನ ಮನದಂತೇ ನಡೆಯಬೇಕು ॥

ಪ್ರಸಂಗ ಗುರುತಿಸಿ ಆಡಬೇಕು, ದೊಡ್ಡತನ ದೂರ ಇಡಬೇಕು, ನಮ್ರಪದ ಪ್ರದರ್ಶಿಸಬೇಕು । ಎಲ್ಲ ಕಡೆ ॥ ಈ ಸಮಾಸದಲ್ಲಿ ಚಾತುರ್ಯ ಸಂಪಾದಿಸುವ ಅನೇಕ ಪ್ರಕಾರಗಳ ವಿವರಣೆ ಇದೆ. ಅಧೋರ್ಧ್ವ ನಿರೂಪಣೆಯಲ್ಲಿ, 'ನಾನಾ ವಿಕಾರಗಳ ಮೂಲ, ಮಾಯೆಯೇ ಇಹುದು ' ಎಂದು ಹೇಳಿ ಸ್ಮರಣವೆಂದರೆ ದೇವ, ವಿಸ್ಮರಣವೆಂದರೆ ದಾನವ ಇವೆರಡರ ಮಿಶ್ರಣವೆಂದರೆ ಮಾನವ ಎಂದು ಹೇಳಿದ್ದಾರೆ. ಸೂಕ್ಷ್ಮ ಜೀವ ನಿರೂಪಣೆಯಲ್ಲಿ-ಇಹುದು ಸಪ್ತ ಆವರಣದ ಬ್ರಹ್ಮಾಂಡ । ಅದರಲ್ಲಿಹುದು ಸಪ್ತ ಆವರಣದ ಪಿಂಡ । ಆ ಪಿಂಡದಲ್ಲಿಹುದು ಪ್ರಚಂಡ । ಜೀವ ಸಂಖ್ಯೆ ॥ ಎಂದು ಹೇಳಿದ್ದಾರೆ. ಈ ಸಮಾಸದಲ್ಲಿ ಅನೇಕ ವಿಧ ಜೀವಗಳ ವಿವರಣೆ ಇದೆ.

'ದೇಹಬುದ್ಧಿ ತ್ಯಜಿಸಿ, ವಿವೇಕದಿಂದ, ದೇವನ ಶೋಧ ಮಾಡುವದೇ ಉತ್ತಮ ಮಾರ್ಗ' ಹೀಗೆ ಟಿಪ್ಪಣೆ ಮಾಡಿ, ಸಮಾಸ ಮುಗಿಸಿದ್ದಾರೆ.

ಪಿಂಡೋತ್ಪತ್ತಿ ನಿರೂಪಣೆಯಲ್ಲಿ ಚತುರ್ವಿಧ ದೇಹವಿದ್ದ ಜೀವಗಳ ನಿರೂಪಣೆ ಮಾಡಿ, ಸಮರ್ಥರು ''ಪಂಚಭೂತಿಕ ವ್ಯಾಪದ ವಿಚಾರ ತ್ಯಜಿಸಿ ಆತ್ಮೋನ್ನತಿ ಸಾಧಿಸಿರಿ '' ಈ ಸಂದೇಶ ಕೊಟ್ಟಿದ್ದಾರೆ.

ಸಿದ್ಧಾಂತ ನಿರೂಪಣೆಯಲ್ಲಿ, ವಿಚಾರದಿಂದ ಸ್ಥಿರಿಸುವದು ಬುದ್ಧಿ । ಬುದ್ಧಿಯಿಂದಲೇ ಸಾಧ್ಯ ಕಾರ್ಯಸಿದ್ಧಿ ॥ ಹೀಗೆ ಹೇಳಿ ಕೊನೆಗೆ -

ಜ್ಞಾನಿಯು ಬೋಧ ಮಾಡಿ ಋಣ ತೀರಿಸಬೇಕು । ಜನರಲ್ಲಿ ಭಕ್ತಿಯನ್ನು ಬೆಳೆಸಬೇಕು । ಹೃದಯದಲ್ಲಿ ಬ್ರಹ್ಮನನ್ನು ಸ್ಥಿರಿಸಬೇಕು । ಎಲ್ಲ ಅರಿದು ॥ ಎಂದು ಹೇಳಿ ಸಮಾಸದ ಮುಕ್ತಾಯ ಮಾಡಿದ್ದಾರೆ.

ಹದಿನಾರನೇ 'ಸಪ್ತಸಪ್ತಿ ಅನ್ವಯ (ಸೂರ್ಯನ ವಂಶ)ದ ಮೊದಲನೇ 'ವಾಲ್ಮಿಕಿ ಸ್ತವನ' ದಲ್ಲಿ - ಆಗಿರದಿದ್ದರೂ ಆಗ ರಾಮನ ಅವತಾರ । ಇಲ್ಲದಿದ್ದರೂ ಯಾವದೇ ಶಾಸ್ತ್ರಾಧಾರ । ರಾಮ ಕಥೆಯ ವರ್ಣನೆ ಸವಿಸ್ತಾರ । ಮಾಡಿದನು ॥'' ಹೀಗೆ ವಾಲ್ಮಿಕಿಯ ಪ್ರತಿಭೆಯ ಸ್ತುತಿ ಹಾಡಿದ್ದಾರೆ.

ಸೂರ್ಯ ಸ್ತವನದಲ್ಲಿ' ವಿಶ್ವದ ಕಣ್ಣಿಹನು ಸೂರ್ಯ ಇತ್ಯಾದಿ ಶಬ್ದಗಳಲ್ಲಿ ಸೂರ್ಯನ ಹಿರಿಮೆ ಹೇಳಿ ಕೊನೆಗೆ ಆಗುವದು ದೋಷಗಳ ಪರಿಹಾರ । ಮಾಡಿದೊಡೆ ಸೂರ್ಯನಿಗೆ ನಮಸ್ಕಾರ ।' ಎಂದು ಅವನಿಗೆ ವಂದಿಸಿದ್ದಾರೆ.

'ಪೃಥ್ವಿ ಸ್ತವನ'ದಲ್ಲಿ -''ಧನ್ಯ ಧನ್ಯ ಮಾತಾ ವಸುಮತಿ । ಇಹುದು ಅವಳಲ್ಲಿಯೇ ಸರ್ವ ಜೀವಿಗಳ ವಸತಿ ।'' ಹೀಗೆ ಪ್ರಾರಂಭಿಸಿ, ಸಂಪೂರ್ಣ ಸಮಾಸದಲ್ಲಿ ಪೃಥ್ವಿಯ ಮಹಿಮೆಯನ್ನು ಬಣ್ಣಿಸಿದ್ದಾರೆ.

ಆಪ ನಿರೂಪಣೆಯಲ್ಲಿ, ಆಪ (ನೀರೇ) ವೇ ಸರ್ವ ಜೀವಿಗಳ ಜೀವನ, ಅಂತೆಯೇ ನೀರಿಗೆ 'ಜೀವನ' ಅನ್ನುವರು. ಈ ಸಮಾಸದಲ್ಲಿ ನೀರಿನ ಅನೇಕ ವಿಧ ರೂಪಗಳ ವರ್ಣನೆ ಇದೆ.

ಅಗ್ನಿ ನಿರೂಪಣೆಯಲ್ಲಿ, ಸರ್ವ ಜೀವಿಗಳಿಗೆ ಅಗ್ನಿಯ ಅವಶ್ಯಕತೆ ಹೇಗೆ, ಎಷ್ಟು ಇದೆ ಇದರದೇ ವರ್ಣನೆ ಇದೆ. 'ಹೀನನ ಮನೆಯಿಂದ ತಂದರೂ ಅಗ್ನಿಯನ್ನು ದೋಷ ಹತ್ತದು ಏನೇನೂ । ಸಕಲರ ಮನೆಯಲ್ಲಿಯ ಅಗ್ನಿ ದೇವರು ಪವಿತ್ರನೇ !' ಎಂದು ಅಗ್ನಿಯ ಹಿರಿಮೆಯನ್ನು ಬಣ್ಣಿಸಿದ್ದಾರೆ (ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ ? ಸರ್ವಜ್ಞ.)

ವಾಯುಸ್ತವನದಲ್ಲಿ, 'ಗಾಳಿಯಿಂದಲೇ ಎಲ್ಲ ಜೀವ ಬಾಳಿಹವು' ಹೀಗೆ ಪ್ರಾರಂಭಿಸಿ, ವಾಯುದೇವನ ಸ್ತವನ ಹಾಡಿದ್ದಾರೆ. 'ಗಾಳಿಯಿಂದಲೇ ಸಾಧ್ಯ ಚಲನ । ಪ್ರಸಾರಣೆ, ನಿರೋಧನ, ಆಕುಂಚನ । (ಇಹವು) ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಹೀಗೆ ಐದು ಪ್ರಾಣಗಳು ।'' ವಾಯುವಿನ ಪರಾಕ್ರಮ, ಶಕ್ತಿ ಇತ್ಯಾದಿಗಳ ವಿವರಣೆ ಈ ಸಮಾಸದ ತುಂಬ (ಗಾಳಿಯಂತೆ) ಹಬ್ಬಿದೆ !

'ಮಹದ್ಭೂತ ನಿರೂಪಣೆ' ಈ ಸಮಾಸದಲ್ಲಿ ಪಂಚ ಮಹಾಭೂತ ಮತ್ತು ಆತ್ಮ ಇವುಗಳ ಪರಸ್ಪರ ಸಂಬಂಧದ ವಿವೇಚನೆ ಇದೆ.

'ಆತ್ಮಾರಾಮ' ನಿರೂಪಣೆಯಲ್ಲಿ, ಆತ್ಮದ ಅನೇಕ ವಿಧ ರೂಪ, ಕಾರ್ಯಗಳ ವರ್ಣನೆ ಬಂದಿದೆ. ಕೊನೆಗೆ, ''ನೋಡಿದರೂ ಸೂಕ್ಷ್ಮ ದೃಷ್ಟಿಯಿಂದ । ನೆಲೆ ಹತ್ತದು ಪ್ರಾಣಿ ಸಮುದಾಯದ (ಅಂದಮೇಲೆ) ತರ್ಕಕ್ಕೆ ಸಿಲುಕೀತೇ ಅಂತರಾತ್ಮದ । ರಹಸ್ಯವು? ಹೀಗೆ ಪ್ರಶ್ನೆ ಕೇಳಿದ್ದರೂ, ಆತ್ಮಾರಾಮನ ಒಗಟನ್ನು ಭೇದಿಸಿ (ಬಿಡಿಸಿ) ಹೇಳಿದ್ದಾರೆ.

ನಾನಾ ಉಪಸನಾ ನಿರೂಪಣೆಯಲ್ಲಿ, ಸಗುಣ ಭಕ್ತಿಯ ಮೂಲಕ ನಿರ್ಗುಣನ ತನಕ ಮುಟ್ಟುವ ಗುಟ್ಟನ್ನು ಸಮರ್ಥರು ಅವರ ಸಮರ್ಥ ಭಾಷೆಯಲ್ಲಿ ಹೇಳಿಕೊಟ್ಟಿದ್ದಾರೆ -

ಗುಣಭೂತ ನಿರೂಪಣೆಯಲ್ಲಿ, ಪಂಚಭೂತಗಳು (ಪರಸ್ಪರ) ಅನ್ಯ ಭೂತಗಳಿಗೆ ಹೇಗೆ ಸಹಕಾರ್ಯ ಮಾಡುತ್ತವೆ. ಇದರ ಅತ್ಯಂತ ತರ್ಕಶುದ್ಧ ವಿವೇಚನೆ ಇದೆ.

ಐದೂ ಭೂತಗಳ ಮಿಶ್ರಣ ಆಗಿದ್ದರಿಂದ, ಅವುಗಳನ್ನು ಬೇರ್ಪಡಿಸುವದು ಮಹಾಕಠಿಣ । 'ಆತ್ಮ ಇರದಿರೆ ಬರುವದು ಮರಣ ।' ಹೀಗೆ ಹೇಳಿ ಆತ್ಮ (ಅರ್ಥಾತ್ ಪರಬ್ರಹ್ಮ)'ವೇ ಸರ್ವಶ್ರೇಷ್ಠ ಎಂದು ತೀರ್ಮಾನ ಕೊಟ್ಟಿದ್ದಾರೆ.

**ಹದಿನೇಳನೇ -ಪ್ರಕೃತಿ ಪುರುಷ ದಶಕದ**

'ದೇವ ಬಲಾತ್ಕಾರ' ಈ ಸಮಾಸದಲ್ಲಿ ಬ್ರಹ್ಮನಿಗೆ ಸ್ವಂತದ ಅರಿವು ಆಯಿತು. ಈ ಅರಿವಿನ ಎರಡು ಭಾಗಗಳಿಹವು ಒಂದು -ಜ್ಞಾನಮಯ ಅಂತರಾತ್ಮಾ ಮತ್ತು ಶಕ್ತಿಮಯ ಅಷ್ಟಧಾ ಪ್ರಕೃತಿ. ಈ ದೃಶ್ಯ ವಿಶ್ವದಲ್ಲಿ ಪ್ರತ್ಯಕ್ಷ ದೇಹದ ಮುಖಾಂತರವೇ ಬ್ರಹ್ಮನ ಪ್ರಾಪ್ತ ಸಾಧ್ಯ. ಅಂತರಾತ್ಮನು -ದೇವ ಮತ್ತು ದೇಹವೇ ಅವನ ಗುಡಿ. ಇದೇ ವಿಚಾರವನ್ನು ಸಮರ್ಥರು ಈ ಸಮಾಸದಲ್ಲಿ ಬಿಡಿಸಿ ಹೇಳಿದ್ದಾರೆ. ಶಕ್ತಿ ನಿರೂಪಣೆಯಲ್ಲಿ, ಬ್ರಹ್ಮನಿರುವನು ನಿಶ್ಚಲ, ಅನಂತ, ನಿರಂತರ ಮತ್ತು ಶಾಶ್ವತ, ಅಂಥ ನಿಶ್ಚಲದಲ್ಲಿಯೇ ಸ್ಮರಣೆ ಚಲಿಸಿತು. ನಿರ್ಗುಣದಲ್ಲಿ ಗುಣ ವಿಕಾರ ಪಡೆದವನೇ ಷಡ್-ಗುಣೇಶ್ವರ- ಅಥವಾ ಅರ್ಧನಾರಿ ನಟೇಶ್ವರ. ಅವನಿಂದಲೇ ಮುಂದೆ ನಾನಾ ಜೀವ ಹುಟ್ಟಿದವು. ಈ ರೀತಿ ಸಮರ್ಥರು ವಿಶ್ವಚೇತನೆಯ ಸೃಷ್ಟಿಯ ವರ್ಣನೆ ಮಾಡಿದ್ದಾರೆ.

**ಶ್ರವಣ ನಿರೂಪಣೆಯಲ್ಲಿ :** 'ಆತ್ಮಾನಾತ್ಮ ವಿವೇಕ ಇದ್ದವನು ವಾಯುತತ್ವದ ಆಚೆ ಹೋಗಿ ಪರಮಾತ್ಮನನ್ನು ಪಡೆವನು !' ಬಿಟ್ಟು

ಪಿಂಡ ಬ್ರಹ್ಮಂಡ -ವಿಚಾರ, ಮುಟ್ಟಿದೊಡೆ ವಿವೇಕದ ತೀರ । ಶಾಶ್ವತ ಏನಿಹುದು ಅದರ । ಅರಿವು ಸಾಧ್ಯ ॥ ಶೋಧಿಸಿ ಸರ್ವತತ್ವಗಳನ್ನು । ಆರಿಸಿ ಸಾರಾಸಾರ ವಿವೇಕವನ್ನು । ಅರಿಯಿರಿ, ಅಧ್ಯಾತ್ಮ ಗ್ರಂಥವನ್ನು -।- ಬದಿಗಿಟ್ಟು ಸುಖಿ ಆಗಿರಿ' ಎಂದು ಹೇಳಿ, ಸಮಾಸ ಮುಗಿಸಿದ್ದಾರೆ.

**ಅನುಮಾನ ನಿರಸನದಲ್ಲಿ -** 'ಅಧ್ಯಾತ್ಮ ಬೋಧಿಸುವಾಗ ಶಂಕೆಯ ನಿರಸನ ಮಾಡಲೇಬೇಕು, ಭಾಷಣದ ಸೂತ್ರವನ್ನೂ ಬಿಡಬಾರದು ಎಂದು ಖಂಡಿತವಾಗಿ ಹೇಳಿದ್ದಾರೆ. ಪರಸ್ಪರ ವಿರೋಧಿ ಮತ, ತತ್ವ ನಿರೂಪಿಸುವ ವಕ್ತಾರರಿಂದ ದೂರ ಇರಬೇಕು ಎಂದು ಶ್ರೋತಾರನನ್ನು 'ಸಾವಧ' ಮಾಡಿದ್ದಾರೆ.

ಅಜಪ ನಿರೂಪಣೆಯಲ್ಲಿ 'ಅಜಪ' ಅಂದರೆ, ತನ್ನತಾನೆ ಸಹಜ ನೈಸರ್ಗಿಕ ರೀತಿಯಿಂದ ಮಾಡುವ (ಆಗುವ) ಜಪ. ಈ ಸಮಾಸದ ಸಂಕ್ಷಿಪ್ತ ರೂಪ ಕೊಡಲಾಗದು ಅಂತೆಯೇ ಈ ಸಮಾಸವನ್ನು ಪೂರ್ಣವಾಗಿ ಅಭ್ಯಸಿಸಬೇಕು.

ದೇಹಾತ್ಮ ನಿರೂಪಣೆಯಲ್ಲಿ ಮರಣದ ಸಮಯದಲ್ಲಿ ಮನುಷ್ಯನಿಗೆ ಆಗುವ ದಯನೀಯ ಸ್ಥಿತಿಯ ವರ್ಣನೆ ಮಾಡಲಾಗಿದೆ. ಸಮರ್ಥರ ನಿರೀಕ್ಷಣ ಶಕ್ತಿಯನ್ನು ಓದಿ, ವಾಚಕನು ಸ್ತಂಭಿತನಾಗುತ್ತಾನೆ. ಜನಜೀವನ ನಿರೂಪಣೆಯಲ್ಲಿ ಸುಸಂಗತಿಯ ಮಹತ್ವ ಹೇಳಲಾಗಿದೆ.

ತತ್ವನಿರಸನದಲ್ಲಿ ಮನುಷ್ಯನ ಮಾನಸಿಕ ಅವಸ್ಥೆಯ ವಿವರಣೆ ಇದೆ. ಪಂಚಪ್ರಾಣ, ಜ್ಞಾನೇಂದ್ರಿಯ ಇತ್ಯಾದಿಗಳ ಕಾರ್ಯದ ಸವಿಸ್ತರ ಮಾಹಿತಿ ಕೊಡಲಾಗಿದೆ. ಈ ಸಮಾಸವು ಪುನ:ಪುನ: ವಾಸನ, ಅಭ್ಯಾಸದಿಂದೇ... ಅರಿಯಲು ಸಾಧ್ಯ.

ತನಚತುಷ್ಟ ನಿರೂಪಣೆಯಲ್ಲಿ, ದೇಹ ಮತ್ತು ಮನದ ಕಾರ್ಯದ ಬಗ್ಗೆ ಚರ್ಚೆ ಬಂದಿದೆ. ಈ ವಿಷಯವು ಕಷ್ಟದಿಂದೇ ತಿಳಿಯಲು ಸಾಧ್ಯ. ಕಾರಣ ಈ ಸಮಾಸದಲ್ಲಿ ಮನುಷ್ಯನ ಬೇರೆ ಬೇರೆ ಇಂದ್ರಿಯಗಳು ಯಾವ ಯಾವ ಭೂತಗಳಿಂದ ಪ್ರಭಾವಿತ ಆಗುವವು ಇದರ ಸವಿಸ್ತರ ವಿವೇಚನೆ ಮಾಡಲಾಗಿದೆ. ಈ ಸಮಾಸದ ಸಂಕ್ಷಿಪ್ತ ರೂಪ ಕೊಡಲಾಗದು. ಅಂತೇ ಎಲ್ಲ ಓವಿಗಳೇ.. ಅಭ್ಯಸಿಸಲು ಅವಶ್ಯಕ ಆಗಿವೆ.

ಟೊಣಪ-ಸಿದ್ಧಲಕ್ಷಣದಲ್ಲಿ, ಟೊಣಪ ( ಮೂರ್ಖ-ಅಜ್ಞಾನಿ) ಮತ್ತು ಸಿದ್ಧ ಇವರಿಬ್ಬರ ದೃಷ್ಟಿ, ಬುದ್ಧಿಗಳಲ್ಲಿರುವ ವ್ಯತ್ಯಾಸದ ಚಿತ್ರಣ ಬಂದಿದೆ. ಸಾಧಕನಿಗೂ ಪರಮಾರ್ಥ ತಿಳಿಯದು । ತಿಳಿದೀತೆ ಟೊಣಪನಿಗೆ ಅದು ?' ಹೀಗೆ ಕೇಳಿ ಕೊನೆಗೆ 'ಅಂತೆಯೇ ಸಂತಸಂಗಬೇಕು। ಸತ್-ಶಾಸ್ತ್ರ ಕೇಳಬೇಕು । ಉತ್ತಮ ಗುಣ ರೂಢಿಸಬೇಕು । ನಾನಾ ಯತ್ನಗಳಿಂದ ॥ ಎಂದು ಬೋಧಿಸಿ ಸಮಾಸ ಮುಗಿಸುತ್ತಾರೆ.

ಹದಿನೆಂಟನೇ 'ಬಹು-ವಿಷಯಗಳ' ಈ ದಶಕದ ಬಹು-ದೇವಸ್ಥಾನ ನಿರೂಪಣೆಯಲ್ಲಿ, ದೇಶದಲ್ಲಿ ಭಜಿಸುವ ಅನೇಕ ದೇವರ ಉಲ್ಲೇಖ ಮಾಡಿ, 'ಸಕಳ ದೇವರ ಮೂಲ। ಅಂತರಾತ್ಮನೇ ಕೇವಳ ।'. ಈ ನಿಷ್ಕರ್ಷಕ್ಕೆ ತಲುಪಿದ್ದಾರೆ. 'ಸರ್ವಜ್ಞ ಸಂಗ ನಿರೂಪಣೆಯಲ್ಲಿ, ಜ್ಞಾನಿಯರ ಸಂಗದಿಂದ, ಅವರ ಸೇವೆ ಮಾಡಿ, ಓದು-ಬರೆಯಲು ಕಲಿತು, ಅವರ ಮಾರ್ಗದರ್ಶನ ಪಡೆಯಿರಿ, ಅಂದರೇನೆ ಉಪಾಸನೆಯ ನಂತರ ದೇವ-ಭಕ್ತನ ಮಿಲನ ಸಾಧ್ಯವೆಂದು ಹೇಳಿದ್ದಾರೆ.

ನಿಸ್ಪೃಹ ಬೋಧದಲ್ಲಿ , 'ನರದೇಹ ಇಹುದು ದುರ್ಲಭ, ಅದರ ಯೋಗ್ಯ ಉಪಯೋಗ ಮಾಡಿಕೊಳ್ಳಿರಿ, ಮೂರ್ಖ, ಸೋಮಾರಿಗಳ ಸಂಗ ಬಿಟ್ಟು, ಸಂತರ ಜೊತೆಗೆ, ಅವರ ವರ್ತನೆ ಅನುಸರಿಸಿ, ಅವರ ಉತ್ತಮ ಗುಣ ರೂಢಿಸಿರಿ, ಎಂದು ಹೇಳಿ ಕೊನೆಗೆ, ಬೇಕು ಅಖಂಡ ಏಕಾಂತ ವಾಸ । ಗ್ರಂಥಗಳ ಸೂಕ್ಷ್ಮ-ಶೋಧಕ ಅಭ್ಯಾಸ । ಪ್ರತ್ಯಯಕಾರಿ ಅರ್ಥದ ಧ್ಯಾಸ । ಮನದಲ್ಲಿ । ಎಂದು ಉಪದೇಶಿಸಿದ್ದಾರೆ. ದುರ್ಲಭ ದೇಹ ನಿರೂಪಣೆಯಲ್ಲಿ, ನರದೇಹದ 'ಹಿರಿಮೆ' ಬಣ್ಣಿಸಿದ್ದಾರೆ. 'ದೇಹದಿಂದೇ ನವವಿಧ ಭಕ್ತಿ । ಚತುರ್ವಿಧ ಮುಕ್ತಿ, ದೇಹದಿಂದೆ ನಾನಾ ವಿಧ ಯುಕ್ತಿ । ಮತಗಳು ॥' ಹೀಗೆ ಹೇಳಿ 'ದೇಹದವಿನಾ ದೇವನಿಗೆ ಪೂಜೆ ತಲುಪದು, ಪೂಜೆಯೂ ಆಗದು, 'ಜನತಾ ಜನಾರ್ದನ'ರನ್ನು ಪೂಜಿಸುವ ಕಾರ್ಯವೂ' ಅಸಾಧ್ಯ' ಎಂದು ಉಪದೇಶಿಸಿದ್ದಾರೆ. ಅನಿಷ್ಟ ನಿರೂಪಣೆಯಲ್ಲಿ, 'ಗ್ರಂಥ ಅಭ್ಯಾಸ' ಮಾಡುವ ಆದರ್ಶ ಪದ್ಧತಿಯನ್ನು ಹೇಳಿದ್ದಾರೆ. 'ಶಬ್ದ-ರತ್ನಗಳ ಬೆಲೆ (ಅರ್ಥ) ಅರಿಯಬೇಕು । ಅನುಭವದ ಒರೆಗಲ್ಲಿನ ಮೇಲೆ ಪರೀಕ್ಷಿಸಬೇಕು । ವ್ಯರ್ಥ ಮಜಕೂರು ದುರ್ಲಕ್ಷಿಸಬೇಕು । ಗ್ರಂಥದಲ್ಲಿಯ' ಹೀಗೆ ಪ್ರಾರಂಭಿಸಿ, ಕೊನೆಗೆ, 'ಸರ್ವತತ್ವಗಳನು ಶೋಧಿಸಬೇಕು । ಮಹಾವಾಕ್ಯಾರ್ಥದಲ್ಲಿ ಕೂಡಿ ಹೋಗಬೇಕು । ಆತ್ಮ ಸಮರ್ಪಣೆಯಿಂದ ಪಡೆಯಬೇಕು । ಸಮಾಧಾನ' ಹೀಗೆ ಹೇಳಿ ಸಮಾಸದ ಕೊನೆ ಮಾಡಿದ್ದಾರೆ.

ಉತ್ತಮ ಪುರುಷ ನಿರೂಪಣೆಯಲ್ಲಿ 'ನಾನಾ ವಸ್ತ್ರ, ಭೂಷಣಗಳಿಂದ ಹೇಗೆ ದೇಹ ಶೋಭಿಸುವದೋ ಹಾಗೇ ವಿವೇಕ, ವಿಚಾರ,

ರಾಜಕಾರಣಗಳಿಂದ 'ಮನ ' ಶೋಭಿಸುತ್ತದೆ. ಹೀಗೆ ಪ್ರಾರಂಭಿಸಿ, ಆ ಕಾಲದಲ್ಲಿಯ ಪರಕೀಯ ಸುಲ್ತಾನರ ದುಷ್ಟ ಸ್ವಭಾವ ವರ್ಣನೆ ಮಾಡಿ, ನಂತರ ಶ್ರೀ ಶಿವಾಜಿ ಮಹಾರಾಜರಿಗೆ, 'ಅತಿಸರ್ವತ್ರ ಬಿಡಬೇಕು । ಪ್ರಸಂಗ ನೋಡಿ ನಡೆಯಬೇಕು । ಹಟ-ಆಗ್ರಹ ದೂರ ಇಡಬೇಕು' ಹೀಗೆ ಉಪದೇಶಿಸಿ, ಕೊನೆಗೆ 'ಸರ್ವಗುಣಗಳ ಸಾರ । ಸು-ಯೋಜಕ ವಿವೇಕ ವಿಚಾರ-।-ಗಳಿಂದ ಪ್ರಜೆಯನ್ನು ದಾಟಿಸುವನು ಭವ-ಪಾರ।'ಇಹ-ಪರ' ಲೋಕದ ಎಂದು ಹೇಳಿ ಸಮಾಸ ಮುಗಿಸಿದ್ದಾರೆ.

ಜನ-ಸ್ವಭಾವ ನಿರೂಪಣೆಯಲ್ಲಿ, ''ಜನರ ಸ್ವಭಾವ ಆಶೆ-ಬುರಕ । ಕೈ ಮುಗಿಯುವ ಮೊದಲೇ ಹಾಕ-।- ದೇವಾ ಮನೆ ತುಂಬುವಷ್ಟು ರೊಕ್ಕ । ಅನ್ನುವರು ।'' ಹೀಗೆ ಪ್ರಾರಂಭಿಸಿ, 'ಕಷ್ಟದ ವಿನಾ ಫಲವಿಲ್ಲ, ರಾಜ್ಯವಿಲ್ಲ, ಸಾಧ್ಯವಿಲ್ಲ ಏನೂ ಆಗಲು' ಅಂತ ಹೇಳಿ, ಆಲಸಿ, (ಸೋಮಾರಿ) ಮತ್ತು ಉದ್ಯೋಗಿ ಜನರ ಸ್ವಭಾವಗಳ ಅನುಸಾರ ಬರುವ ಪರಿಸ್ಥಿತಿಯ ಚಿತ್ರಣೆ ಮಾಡಿ, ಕೊನೆಗೆ, ''ವಿಚಾರದಿಂದೇ ಸಾಧ್ಯ' ಇಹ ಪರ', ಜನ್ಮ-ಜೀವನ ಸಾರ್ಥಕ, ವಿಚಾರದಿಂದೇ ಸಾಧ್ಯ ನಿತ್ಯಾನಿತ್ಯ ವಿವೇಕ' ಈ ಬೋಧ ಕೊಟ್ಟಿದ್ದಾರೆ.

ಅಂತರ್ದೇವ ನಿರೂಪಣೆಯಲ್ಲಿ , 'ಅಂತರಾತ್ಮ'ನನ್ನು ಬಿಟ್ಟು, ತೀರ್ಥಕ್ಷೇತ್ರಗಳಿಗೆ ಓಡಿ, ದಣಿಯುವ 'ಅಜಾಣ' ಜನರ ಬಗ್ಗೆ ದುಃಖ ಪಟ್ಟು, ಅವರಿಗೆ, 'ಅಂತರಾತ್ಮದಲ್ಲಿ ಶೋಧಿಸಬೇಕು । ಶೋಧಿಸಿ ಪಾವನ ಆಗಬೇಕು । ವಿಜ್ಞಾನದಲ್ಲಿ ಪರಿಣಮಿಸಬೇಕು । ಜ್ಞಾನವನ್ನು ॥ ಎಂದು ಉಪದೇಶ ಮಾಡಿದ್ದಾರೆ. ನಿದ್ರಾ ನಿರೂಪಣೆಯಲ್ಲಿ, ' ನಿದ್ರಾವಿಲಾಸ'ದ ಅತಿಶಯ ಮನೋರಂಜಕ ಚಿತ್ರಣ ಮಾಡಲಾಗಿದೆ. ನಿದ್ರಾವಿವಶರಾದ ಜನರ ವಿವಿಧ ವಿಚಿತ್ರ ವರ್ತನೆಗಳ ವರ್ಣನೆ ಮಾಡಿ ಸಮರ್ಥರು ತಮ್ಮ ಸೂಕ್ಷ್ಮ ನಿರೀಕ್ಷಣ ಮತ್ತು ವಿನೋದಿ ಶೈಲಿಯಲ್ಲಿ 'ನಿದ್ದೆಯ' ಪ್ರಭಾವ ಪ್ರಕಟಿಸಿದ್ದಾರೆ. ಸರ್ವಸಾಮಾನ್ಯರು ನಿದ್ದೆ ಮುಗಿದನಂತರ ಎದ್ದು ಕೆಲಸಕ್ಕೆ ಹೋಗುತ್ತಾರೆ ಆತ್ಮಜ್ಞಾನಿ-ತತ್ವ-ತ್ಯಜಿಸುವರು । ತೂರ್ಯಾವಸ್ಥೆ ದಾಟಿ, ಆಚೆಗೆ ತಲುಪುವರು । ಆತ್ಮ ಸಮರ್ಪಣೆದಿಂದ ಪಡೆವರು । ಬ್ರಹ್ಮರೂಪ' ಹೀಗೆ ಹೇಳಿ, ಸಮಾಸ ಮುಗಿಸಿದ್ದಾರೆ.

ಶ್ರೋತಾ - ಅವಲಕ್ಷಣ ನಿರೂಪಣೆಯಲ್ಲಿ, ' ಪ್ರಪಂಚ ಮತ್ತು ಪರಮಾರ್ಥದಲ್ಲಿ ಬರುವ ಅದ್ಭುತ ಪ್ರಸಂಗಳ, ಸಭಾ ಸಮ್ಮೇಲನಗಳಲ್ಲಿ ಜನರ ಚಿತ್ರ-ವಿಚಿತ್ರ 'ವರ್ತನೆಗಳ ಅತ್ಯಂತ ರಂಜಕ ಶೈಲಿಯಲ್ಲಿ ವರ್ಣಣೆ ಮಾಡಲಾಗಿದೆ. ಅಂಥ ಪ್ರಸಂಗಗಳಲ್ಲಿ ವಿಚಕ್ಷಣ - ಜ್ಞಾನಿಗಳು ತಮ್ಮ ಕಡೆಗೆ ನ್ಯೂನ ಸ್ವೀಕರಿಸಿ, ಜನರ ಮನ ಗೆಲ್ಲುವರು, ಅಂಥ ವಿವೇಕಿಗೆ 'ಯೋಗಿ' ಎಂದು ಪ್ರಶಂಸಿಸಿದ್ದಾರೆ!.

ಹತ್ತೊಂಬತ್ತನೇ ' ಕಲಿಸುವಿಕೆ (ಬೋಧ) ಈ ದಶಕದ ಲೇಖನ ಕ್ರಿಯಾ ನಿರೂಪಣೆಯಲ್ಲಿ, ಆ ಕಾಲದಲ್ಲಿ ಪ್ರಚಲಿತ ಇದ್ದ 'ಗ್ರಂಥ ಲೇಖನ ರಚನೆ' ಇತ್ಯಾದಿ ವಿಷಯಗಳ ವಿವೇಚನೆ ಇದೆ. 'ಗುಂಡು, ಸರಳ, ಚಂದ, ವ್ಯವಸ್ಥಿತ ಅಂತರ ಬಿಟ್ಟು, ಶುದ್ಧ, ಸುವಾಚ್ಯ ಅಕ್ಷರ, ಸಮಾಸ ಇದ್ದ ಲೇಖನ ಗ್ರಂಥಕ್ಕೆ ಇರಬೇಕು ಸಮರ್ಥರು ಗ್ರಂಥ ಹೇಗೆ ಕಟ್ಟಬೇಕು, ಗ್ರಂಥದಲ್ಲಿ ಹೇಗೆ ವಿವಿಧ ಬಣ್ಣಗಳ ಚಿತ್ರಗಳಿರಬೇಕು, ಹೇಗೆ ಜಪ್ಪಿಸಿ ಇಡಬೇಕು ಇತ್ಯಾದಿ ಸೂಚನೆಗಳನ್ನು ಕೊಡಲೂ ಮರೆತಿಲ್ಲ ! ವಿವರಣೆಯ ನಿರೂಪಣೆಯಲ್ಲಿ, 'ಶಬ್ದ ಅರ್ಥ, ಮುದ್ರಾ, ಕಾವ್ಯ, ಪ್ರಬಂಧ, ಆದಿ ನಾನಾ ಸೂಕ್ಷ್ಮಭೇದ ಅರಿದು ಗ್ರಂಥ ಓದಬೇಕು. ಸಮಾಜದಲ್ಲಿ ಹೇಗೆ ವರ್ತಿಸಬೇಕು, 'ಸಭೆಯಲ್ಲಿ ಹೆಚ್ಚು ಕೂಡಬಾರದು । ಸಮಾರಾಧನೆಯಲ್ಲಿ ಉಣ್ಣಬಾರದು (ಅರ್ಥಾತ್-ಸಂತ ಮಹಂತನು) ಆಯುಷ್ಯದ ತುಂಬ ಋಣಿ ಮಾಡುವದು ಇಂಥ ಕೃತಿ ॥ ಎಂದು ಸೂಚನೆಕೊಟ್ಟು ಯುಕ್ತಿಯಿಂದ ಸರ್ವ ಅರಿಯಬೇಕು, ಮನವಾರೆ ಎಲ್ಲರನ್ನು ಪ್ರೀತಿಸಬೇಕು ಎಂದು ಹೇಳಿದ್ದಾರೆ.

ಭಾಗ್ಯಹೀನನ ಲಕ್ಷಣದಲ್ಲಿ ' ಸೋಮಾರಿತನವೇ ಮನುಷ್ಯನಿಗೆ, ದಾರಿದ್ರ್ಯ' ತರುತ್ತದೆ. ಇಲ್ಲಿ ಹೇಳಿದ (ಅವ) ಲಕ್ಷಣಗಳನ್ನು ಬಿಟ್ಟರೇ, 'ಭಾಗ್ಯ' ದೊರೆಯುತ್ತದೆ. ಜನರಿಗಾಗಿ ದುಡಿದರೆ, ಜನರೂ ಸಲಹುವರು' ಈ ಸಂದೇಶವನ್ನು ಕೊಟ್ಟಿದ್ದಾರೆ.

ಭಾಗ್ಯವಂತನ ಲಕ್ಷಣದಲ್ಲಿ, ಸರ್ವಕಲಾ, ವಿದ್ಯಾ, ಆದಿಗಳಲ್ಲಿ ಮನ ತೊಡಕಿಸಿ, ಪರೋಪಕಾರ ಸಂಪನ್ನನಾಗಿ, ಸರ್ವರ ಮನ ಜಯಿಸುವನು, ಅವನೇ ಭಾಗ್ಯವಂತನು ! ''ನ್ಯಾಯ-ನೀತಿ, ಭಜನೆ, ಮರ್ಯಾದಾ ಪಾಲಿಸಿ, ಸದಾ ಕಾಲ ಕಳಿವನು, ಅವನಿಗೆ ದಾರಿದ್ರ್ಯ ಮತ್ತು ಆಪದಾ (ಸಂಕಟ) ಬರಲಾರವು ಎಂದು ಸ್ಪಷ್ಟ ಹೇಳಿದ್ದಾರೆ.

ದೇಹಮನ್ನಣೆಯಲ್ಲಿ ಪುನಶ್ಚ, ದೇಹದ ಆವಶ್ಯಕತೆಯ ನಿರೂಪಣೆ ಇದೆ. ಮಣ್ಣಿನ, ಕಲ್ಲಿನ, ಚಿನ್ನದ ಇತ್ಯಾದಿ ದೇವರ ಮೂರ್ತಿಗಳ ವಿವರಣೆ ಕೊಟ್ಟು, 'ಮೂಲದ್ರಷ್ಟಾದೇವ ಒಬ್ಬನೆ ಇಹನು' ಎಂದು ಸಾರಿ ಹೇಳಿದ್ದಾರೆ, ಅಂತೆಯೇ ಅವನಲ್ಲಿ ತದ್ರೂಪ ಆಗಿರಿ, ಮತ್ತು ಸದ್ಗುರುವಿನಿಂದ ಸದ್ಗತಿ ಪಡೆಯಿರಿ' ಅಂತ ಬೋಧಿಸಿದ್ದಾರೆ.

**ಬುದ್ಧಿವಾದ ನಿರೂಪಣೆ** : ಈ ಸಮಾಸದಲ್ಲಿ, ಯೋಗ್ಯ ಗುರು, ಯೋಗ್ಯ ಶಿಷ್ಯ ಇದ್ದರೇನೆ ಬೋಧ ಸಾಧ್ಯವೆಂದು ಹೇಳಲಾಗಿದೆ.

ಅಯೋಗ್ಯ, ಹೀನ ವ್ಯಕ್ತಿಯನ್ನು 'ಗುರು' ಮಾಡಬಾರದು. ಆದರ್ಶ ಗುರುವಿನ ಗುಣಗಳ ವರ್ಣನೆ ಕೂಡ ಮಾಡಲಾಗಿದೆ. ಉತ್ಕಟಭಕ್ತಿ, ಜ್ಞಾನ, ನಿಸ್ಪೃಹತೆ ಇದ್ದ ಮಹಂತನೇ ಕಾರ್ಯ ಮಾಡಬಲ್ಲನು. ಅಂಥ ನಿರಿಚ್ಛ ವ್ಯಕ್ತಿಯೇ ಜನರಿಗೆ 'ಬೇಕು' ಅನ್ನಿಸಿಕೊಳ್ಳವನು.

ಯತ್ನ ನಿರೂಪಣೆಯಲ್ಲಿ 'ಎಲ್ಲಿ ಜಗ, ಅಲ್ಲಿ ಜಗನ್ನಾಯಕ।' ಈ ವಿವೇಕ ಇಡಬೇಕು (ಮಹಂತನು)।ಸಮಾಜದಲ್ಲಿಯ ಎಲ್ಲ ಜನರು ದುಷ್ಟ-ಖಲರು ಇರಲಾರರು. '' ಹಾಳು ನಿರ್ಮನುಷ್ಯ ಜಾಗ, ವಸತಿಗೆ ಸದಾ ತ್ಯಾಜ್ಯ । ಜನರೊಂದಿಗೆ ಹೊಂದಿ, ವಂದ್ಯರಾಗಿರಬೇಕು. ಚನ್ನಾಗಿ ಈಸಲು ಬರದವನು, ಮುಳುಗಿಸಬಾರದು ಅನ್ಯರನ್ನು । ಅಂತೆಯೇ 'ಅಭ್ಯಾಸಮಾಡಿ ಜನರ ಮುಂದೆ ಬರಬೇಕು', ಇತ್ಯಾದಿ ಎಚ್ಚರಿಕೆಗಳನ್ನು ಕೊಟ್ಟಿದ್ದಾರೆ.

ಉಪಾಧಿ ಲಕ್ಷಣದಲ್ಲಿ 'ಕಾರ್ಯದ ವ್ಯಾಪ ತಡೆಯದವನು ಬೆಳೆಸಕೂಡದು, 'ಉಪಾಧಿ' (ಕಾರ್ಯ, ಉದ್ಯೋಗ)ಗಳನ್ನು 'ಉಪಾಧಿ' ಅಂದೊಡೆ ಕೆಲಸ ಬೀಳುವದು ಅಂತೇ ಉಪಾಧಿಯ ಸ್ವರೂಪ ನೋಡಿಯೇ ಕೈ ಹಾಕಬೇಕು. ಕೊನೆಗೆ ಒಮ್ಮೊಮ್ಮೆ ಉಪಾಧಿ ಇಡಬೇಕು । ಮತ್ತೊಮ್ಮೆ ಉಪಾಧಿ ರಹಿತನಾಗಿರಬೇಕು । ಹೀಗೆ ಕಾಲಕ್ರಮಿಸಬೇಕು । ಸ್ವಸ್ಥಚಿತ್ತ । ಹೀಗೆ ಮಧ್ಯಮ ಮಾರ್ಗದ ಉಪದೇಶ ಮಾಡಿದ್ದಾರೆ.

ರಾಜಕಾರಣ ನಿರೂಪಣೆಯಲ್ಲಿ, 'ಜ್ಞಾನಿ ಮತ್ತು ಸ್ಥಿತಪ್ರಜ್ಞನು । ಲೋಕಸಂಗ್ರಹ ಮಾಡ ಬಯಸುವವನು । ವಿಚಾರ ಪೂರ್ವಕ ಮಾಡಬೇಕು ಯೋಜನೆಯನ್ನು । ಏಕಾಂತದಲ್ಲಿ॥'' ಹೀಗೆ ಪ್ರಾರಂಭಿಸಿ ಅರಸರಿಗೆ, ಮಹಂತರಿಗೆ ಅತ್ಯಂತ ಮಹತ್ವದ ಸೂಚನೆಕೊಟ್ಟಿದ್ದಾರೆ. ಈ ಸಮಾಸವು ಅತ್ಯಂತ ಅಭ್ಯಸನೀಯ, ಅನುಕರಣೀಯ ಇದ್ದ ಕಾರಣ, ಸಂಪೂರ್ಣ ಸಮಾಸದ ಚಿಂತನೆ ಮಾಡಬೇಕು. ಈ ಸಮಾಸದ ಸಂಕ್ಷಿಪ್ತ ರೂಪ ಕೊಡಲಾಗದು.

ವಿವೇಕ ಲಕ್ಷಣ ನಿರೂಪಣೆಯಲ್ಲಿ, ಸಮರ್ಥರಿಗೆ ಅಪೇಕ್ಷಿತ -ಇದ್ದ ಮಹಂತನ ಜಾಣತನದ, ವಿವೇಕದ ಸವಿಸ್ತರ ವಿವರಣೆ ಕೊಡಲಾಗಿದೆ. ಈ ಸಮಾಸವೂ ಅತ್ಯಂತ ಮಹತ್ವದ್ದಾಗಿದೆ. ಇಪ್ಪತ್ತನೇ ''ಪೂರ್ಣನಾಮಕ' ದಶಕದ ಪೂರ್ಣಾಪೂರ್ಣ ನಿರೂಪಣೆಯಲ್ಲಿ, ಆತ್ಮ ಮತ್ತು ಬ್ರಹ್ಮದ ವ್ಯತ್ಯಾಸದ ಚರ್ಚೆ ಇದೆ. ಆತ್ಮವು ಸಗುಣವೊ, ನಿರ್ಗುಣ? ಈ ಪ್ರಶ್ನೆಯ ಉತ್ತರ ಕೊನೆಯ ಮೂರು ಓವಿಗಳಲ್ಲಿ ಕೊಡಲಾಗಿದೆ.

ಸೃಷ್ಟಿಯ ತ್ರಿವಿಧ ಲಕ್ಷಣದಲ್ಲಿ - ಸೃಷ್ಟಿಯ ರಚನೆಯ ವಿಸ್ತಾರದ ಗುಪಿತವನ್ನು ಬಿಡಿಸಿ ಹೇಳಿ, ಕೊನೆಗೆ, ಸೃಷ್ಟಿ ಹುಟ್ಟಿ-ಸಾಯುವದು ಪರಬ್ರಹ್ಮ ಮಾತ್ರ - ಹುಟ್ಟದು -ಸಾಯದು' ಈ ನಿಷ್ಕರ್ಷಕ್ಕೆ ಮುಟ್ಟಿದ್ದಾರೆ.

'ಸೂಕ್ಷ್ಮನಾಮಾಭಿಧಾನ' ದಲ್ಲಿ 'ಚತ್ವಾರದೇವ, ಪಂಚಭೂತ, । ಮಾಯೆಯ ಹದಿನಾಲ್ಕು ನಾಮ ಸಂಕೇತ । ಇವೆಲ್ಲರ ಶೋಧ ವಿಚಾರದಿಂ ಸಂಥ । ಮಾಡಬೇಕು' 'ಪ್ರಪಂಚ ವಾ ಪರಮಾರ್ಥ, ಅನುಭೂತಿಯ ವಿನಾ ಸರ್ವ ವ್ಯರ್ಥ। ಅನುಭೂತ ಜ್ಞಾನಿಯೇ ಸಮರ್ಥ । ಸಕಳರಲ್ಲಿ ॥ ಈ ಸತ್ಯದ ಸಂಕೇತ ಕೊಟ್ಟಿದ್ದಾರೆ. ಆತ್ಮ ನಿರೂಪಣೆಯಲ್ಲಿ, 'ಪ್ರತ್ಯಯ ಇರುತ್ತದೆ ಒಂದು ಕಡೆಗೆ, (ಸಾಮಾನ್ಯರು)ಹುಡುಕುತ್ತಾರೆ ಬೇರೆ ಕಡೆಗೆ ! ಅಂತೆಯೇ ಸಾರಾಸಾರದ ನಿರ್ಣಯ ಆಗದು.

ವಿಶ್ವದ ಪ್ರಚಂಡ ವ್ಯಾಪ । ನಡೆಸಿಹನು ಒಬ್ಬನೇ 'ಅಪ್ಪ।' ಧರಿಸಿ ನಾನಾ ವಿಧ ರೂಪ । ದೇಹಗಳಲ್ಲಿ ॥ ಹೀಗೆ ಹೇಳಿ, ಕೊನೆಗೆ 'ದೇವನ ಸಮ (ಯಾರೂ ) ಚಪಳ ಇಲ್ಲ । ಬ್ರಹ್ಮದ ಸಮ ನಿಶ್ಚಲರಿಲ್ಲ । ಅವನೇ ಅಮೂಲಾಗ್ರ ಸಕಲ । ತಿಳಿದು ಇರಿ ''॥ ಈ ವಿಚಾರ ಪ್ರಕಟಿಸಿದ್ದಾರೆ.

ಚತ್ವಾರ ಜಿನಸು (ವಸ್ತು) ನಿರೂಪಣೆಯಲ್ಲಿ, ಬ್ರಹ್ಮ ಮತ್ತು ಮಾಯೆಯ (ಜನ್ಮ-ವಿಸ್ತಾರ-ಇತ್ಯಾದಿ) ಸವಿಸ್ತರ ಚರ್ಚೆಇದೆ. 'ಅನ್ಯ ದೇಹ ಇಹವು ವ್ಯರ್ಥ-ನರದೇಹವೇ ಶ್ರೇಷ್ಠ ಸಾರ್ಥ' ಹೀಗೆ ಸಾರಿ ಹೇಳಿ, 'ವಿವೇಕದಿಂದ-ಪರಬ್ರಹ್ಮನ ಕಡೆ ಹೋಗಿ, ಅಲ್ಲಿ ಲೀನ ಆಗಿರಿ' ಈ ಸಂದೇಶ ಕೊಟ್ಟಿದ್ದಾರೆ.

ಆತ್ಮಗುಣ ನಿರೂಪಣೆಯಲ್ಲಿ, ಆತ್ಮದ ಅನೇಕ ವಿಧ ಗುಣಗಳ ವಿವರಣೆ ಇದೆ. ಈ ಸಮಾಸದಲ್ಲಿಯ ಎಲ್ಲ ಓವಿಗಳನ್ನು ಅಭ್ಯಾಸಮಾಡಿ

ಮುಖೋದ್ಗತ ಮಾಡಬೇಕು, ಮನನಿಸಿ, ಕೊನೆಗೆ ಆತ್ಮದ ಮುಖಾಂತರ ನಿರಂಜನ ಪರಬ್ರಹ್ಮನಲ್ಲಿ ಕೂಡಿ, ಸಮಾಧಾನ ಪಡೆಯಬೇಕು. ಆತ್ಮ ನಿರೂಪಣೆಯಲ್ಲಿ, ' ಆಗಿದ್ದರೂ ಅನುರ್ವಾಚ್ಯ ಸಮಾಧಾನ । ಮಾಡಬೇಕು ಅದರ ಕಥನ।' ಹೀಗೆ ಪ್ರಾರಂಭಿಸಿ, ಈ ನಮ್ಮ ದೇಶದಲ್ಲಿದ್ದ ಅನೇಕ ತೀರ್ಥಸ್ಥಾನಗಳ ಉಲ್ಲೇಖಮಾಡಿ, ಅವುಗಳ ಮಹಾತ್ಮ್ಯ ವಿಶದ ಮಾಡಿ, ಕೊನೆಗೆ - ಅಶುದ್ಧ, ಕೃತ್ರಿಮವೆಲ್ಲ ಬಿಟ್ಟು, ಶುದ್ಧ- ಸಾರವನ್ನೇ ಎತ್ತಬೇಕು' ಎಂದು ಬೋಧಿಸಿದ್ದಾರೆ. ದೇಹಕ್ಷೇತ್ರ ನಿರೂಪಣೆಯಲ್ಲಿ, ದೇಹ, ಮನದ ಸರ್ವ ಇಂದ್ರಿಯಗಳ ಕಾರ್ಯಕಾರಣಭಾವದ ಪ್ರಕಟನೆ ಇದೆ.

'ದೇವನು ಒಂದು ಯೋಜನೆ ಮಾಡಿಹನು । ಒಂದು ಮಹಾಭೂತ ನಿಯಂತ್ರಿಸುವದು ಬೇರೆಯನ್ನು । ಸೃಷ್ಟಿಯಲ್ಲಿ 'ಪಂಚಭೂತ' ಇಟ್ಟಿಹನು । ಸಮಪ್ರಮಾಣದಲ್ಲಿ ॥ ಕೊನೆಗೆ ' ಆವಾಹನ (ಕರೆಯುವಿಕೆ) ಮತ್ತು ವಿಸರ್ಜನ ಇವೇ ಭಕ್ತಿಯ ಸಾಧನ ।' ಎಂದು ಹೇಳಿದ್ದಾರೆ.

ಸೂಕ್ಷ್ಮ ನಿರೂಪಣೆಯಲ್ಲಿ, ''ಮಣ್ಣಿನ ಮೂರ್ತಿ ಮಾಡಿ ಪೂಜಿಸಿ, ವಿಸರ್ಜಿಸುವ ಪದ್ಧತಿ ಹಿಡಿಸದು ಮನಸ್ಸಿಗೆ'' ಕಾರಣ ದೇವನು ಮಾಡತಕ್ಕವನಲ್ಲ, ಒಗೆಯತಕ್ಕವನಲ್ಲ । ಸಾಮಾನ್ಯರ ಭಾವ, ''ತೋರಿಸಿರಿ ನನಗೆ ಪ್ರತ್ಯಕ್ಷ ದೇವ ।'' ಇದು ವಿವೇಕಿಗೆ ಒಪ್ಪದು. 'ಅಜ್ಞಾನದಿಂದ ದೇವನು ಲಭಿಸನು. ಅದಕ್ಕೇ ಅಧ್ಯಾತ್ಮದ ಶ್ರವಣವು ಅತ್ಯಾವಶ್ಯಕ. ವಿಮಲ ಬ್ರಹ್ಮ ನಿರೂಪಣೆ ಈ ಸಮಾಸವು, ಅಲ್ಲ, ಸಂಪೂರ್ಣ ಈ ದಶಕವೇ... 'ದಾಸಬೋಧ' ಗ್ರಂಥದ 'ಸಾರ'ವಾಗಿದೆ.

'ಬ್ರಹ್ಮಪೊಳ್ಳು, ರಿಕ್ತ, ಘನ ಬ್ರಹ್ಮದಿ ಬ್ರಹ್ಮದವಿನಾ ಏನೂ ಇರದು । ಆದಿ-ಮಧ್ಯ-ಅಂತದಿ ಇರುವದು ನಿರಂತರ' ಇತ್ಯಾದಿ ಅನೇಕ ಓವಿಗಳಲ್ಲಿ ಬಂದ ಸಾರ, ' ಈ ದೃಶ್ಯಸೃಷ್ಟಿ-ಜಗತ್ತು ಮಾಯೆಯಲ್ಲಿ ಜನಿತ, ವಿನಾಶಕಾರಿ ಅಂತೆಯೇ ಮಿಥ್ಯಾ ಕೇವಳ ಬ್ರಹ್ಮವೇ -ಅನಾದಿ, ಅನಂತ, ನಿರಂತರ (ನಿತ್ಯ)), ಜನ್ಮ-ಮರಣ ಮುಕ್ತ, ಮತ್ತು ಸತ್ಯ. ಒಂದೇ ವಾಕ್ಯದಲ್ಲಿ-ಜಗತ್-ಮಿಥ್ಯಾ-ಬ್ರಹ್ಮಸತ್ಯ.'

''ಇಪ್ಪತ್ತು ದಶಕಗಳ ಈ ದಾಸಬೋಧವನ್ನು ವಿಶದ ಮಾಡಿ ಮನನ ಮಾಡಿದರೆ ಪರಮಾರ್ಥದ ಅರ್ಥ ತಿಳಿಯುವದು, ಜನ್ಮ-ಮರಣಗಳನ್ನು ತಪ್ಪಿಸಿ, ಮುಕ್ತಿ ಪಡೆಯುವಿರಿ.'' ಈ ಶಬ್ದಗಳಲ್ಲಿ ಭಕ್ತರಿಗೆ 'ಅಭಯ' ಕೊಟ್ಟಿದ್ದಾರೆ.

ಜಯ ಜಯ ರಘುವೀರ ಸಮರ್ಥ

## 'ಓವಿ' ಈ ಛಂದ (ವೃತ್ತ)ದ ಬಗ್ಗೆ :

ಸಂತ ಸಮರ್ಥ ಶ್ರೀ ರಾಮದಾಸರು 'ದಾಸಬೋಧ' ಗ್ರಂಥವನ್ನು 'ಓವಿ'ಯಲ್ಲಿ ಬರೆದಿದ್ದಾರೆ. ಇದು ಮಾತ್ರಾವೃತ್ತವಲ್ಲ. ಈ ಗ್ರಂಥದ ಕನ್ನಡ ಅನುವಾದವನ್ನೂ ಇದೇ ಓವಿ ವೃತ್ತದಲ್ಲಿ ಮಾಡಲಾಗಿದೆ.

ಮರಾಠಿ ಇತಿಹಾಸಕಾರ ಶ್ರೀ ವಿ. ಕಾ. ರಾಜವಾಡೆ ಅವರ ಮತದಂತೆ ಓವಿಯ ಉಗಮ, ವೈದಿಕ ಛಂದದಲ್ಲಿದೆ. ಮರಾಠಿ ಸಂತ ಅಭ್ಯಾಸಕ ಶ್ರೀ ಲ.ರಾ. ಪಾಂಗಾರಕರ ಅವರ ಮತದಂತೆ - 'ಅನುಷ್ಟುಭ' ದಲ್ಲಿದೆ. ಮಾತ್ರ ಶ್ರೀ ಭ. ಶ್ರೀ ಪಂಡಿತರು, ಕನ್ನಡ ವರಕವಿ ಡಾ॥ ದ. ರಾ. ಬೇಂದ್ರೆ ಅವರ, 'ಓವಿ ಛಂದವು ಕನ್ನಡನಾಡಿನಿಂದ ಮರಾಠಿಯಲ್ಲಿ ಬಂದಿದೆ. ಕನ್ನಡ ತ್ರಿಪದಿಗೆ (ಉದಾ: ಸರ್ವಜ್ಞನ ವಚನ) ಓವಿಯ ರಚನೆ ಹೋಲುತ್ತದೆ.' ಈ ಮತವನ್ನು ಸಮರ್ಥಿಸಿದ್ದಾರೆ. ಇದೊಂದು ಗೇಯ ಪ್ರಕಾರ. ಮೂರು, ನಾಲ್ಕು, ನಾಲ್ಕೂವರೆ ಐದು-ಚರಣಗಳ (ಓವಿ) ಹೀಗೆ ಓವಿಯ ಪ್ರಕಾರಗಳಿವೆ.

ಸಮರ್ಥರ 'ದಾಸಬೋಧ' ದಲ್ಲಿಯ ಓವಿಯೂ ಜ್ಞಾನೇಶ್ವರರ (ಲಘುಚರಣ) ಓವಿಯಂತೇ ಇದೆ. ಈ ಓವಿಯಲ್ಲಿಯೇ ಅನೇಕ ಮರಾಠಿ ಸಂತ-ಕವಿಗಳು ತಮ್ಮ ಗ್ರಂಥಗಳ ರಚನೆ ಮಾಡಿದ್ದಾರೆ. (ಉದಾ. ಸರ್ವಶ್ರೀ-ಮರಾಠಿ ಆದ್ಯಕವಿ ಮುಕುಂದರಾಜ, ಜ್ಞಾನೇಶ್ವರ, ಏಕನಾಥ, ಮುಕ್ತೇಶ್ವರ ಇತ್ಯಾದಿ) ಹಾಗೇ ಸಂತ ಶ್ರೀ ತುಕಾರಾಮ ಅವರೂ, ಅವರ ಪ್ರಸಿದ್ಧ 'ಗಾಥಾ' ಈ ಗ್ರಂಥದಲ್ಲಿ-ಅಭಂಗಗಳೊಂದಿಗೆ ಅನೇಕ ಓವಿಗಳನ್ನೂ ರಚಿಸಿದ್ದಾರೆ.

(ಈ 'ದಾಸಬೋಧ'ದಲ್ಲಿ ಬಳಿಸಿದ) ಓವಿಯಲ್ಲಿ ಮೊದಲಿನ ಚರಣಗಳ ಕೊನೆಗೆ 'ಪ್ರಾಸ'ವಿರುತ್ತದೆ. ನಾಲ್ಕನೇ ಚರಣವು ಪ್ರಾಸ ವಿರಹಿತ ಇರುತ್ತದೆ.

ಉದಾ : ಗ್ರಂಥದ ಹೆಸರು **ದಾಸಬೋಧ** । ಗುರು ಶಿಷ್ಯರ **ಸಂವಾದ** ।<br>
ಮಾಡಿದೆ ಇದರಲ್ಲಿ **ವಿಶದ** । ಭಕ್ತಿಮಾರ್ಗ ॥

ಮರಾಠಿಯಲ್ಲಿಯ ಬಹುಶಃ ಜನಪದ ಗೀತೆ (ಹಾಡು) ಗಳೂ 'ಓವಿ'ಯಲ್ಲಿಯೇ ರಚಿಸಲಾಗಿವೆ. ಈ ಓವಿಯ ವಿಷಯದಲ್ಲಿಯ ಪ್ರಸಿದ್ಧ ಗಾದೆಯ ಮಾತು ಹೀಗಿದೆ :- ಬೀಸುಕಲ್ಲಿನ ಮೇಲೆ ಕುಳಿತರೆ ಓವಿ ತನ್ನ ತಾನೆ ಹೊಳೆಯುತ್ತದೆ. (ಜಾತ್ಯಾವರ ಬಸಲೇ ಕೀ ಓವೀ ಆಪೋ ಆಪ ಸುಚತೇ) ಈ ಕನ್ನಡ ಗ್ರಂಥದಲ್ಲಿಯೂ ಓವಿ ಛಂದದ ನಿಯಮಗಳ ಪಾಲನೆ ಮಾಡಲಾಗಿದೆ.

**ವಿಶೇಷ ವಿನಂತಿ :** ಈ ಗ್ರಂಥದಲ್ಲಿ ಅನೇಕ ಓವಿಗಳಲ್ಲಿ 'ಪ್ರಾಸ'ಕ್ಕಾಗಿ 'ಪ್ರಶ್ನೆ' ಈ ಶಬ್ದವನ್ನು 'ಪ್ರಶ್ನ' ಹೀಗೆ ಬರೆಯಲಾಗಿದೆ. ವಾಚಕರು ದಯವಿಟ್ಟು 'ಪ್ರಶ್ನ' ಈ ಶಬ್ದ 'ಪ್ರಶ್ನೆ' ಎಂದು ತಿಳಿದು, ಓದಬೇಕಾಗಿ ವಿನಂತಿ.

# ಅನುಕ್ರಮಣಿಕೆ

## ಒಂದನೇ ದಶಕ


| | | |
|---|---|---|
| ೧) | ಒಂದನೇ ಸಮಾಸ : ಗ್ರಂಥಾರಂಭ | ೧ |
| ೨) | ಎರಡನೇ ಸಮಾಸ : ಗಣೇಶ ಸ್ತವನ | ೩ |
| ೩) | ಮೂರನೇ ಸಮಾಸ : ಶಾರದಾ ಸ್ತವನ | ೪ |
| ೪) | ನಾಲ್ಕನೇ ಸಮಾಸ : ಸದ್ಗುರು ಸ್ತವನ | ೫ |
| ೫) | ಐದನೇ ಸಮಾಸ : ಸಂತ ಸ್ತವನ | ೭ |
| ೬) | ಆರನೇ ಸಮಾಸ : ಶ್ರೋತಾಜನ ಸ್ತವನ | ೮ |
| ೭) | ಏಳನೇ ಸಮಾಸ : ಕವೀಶ್ವರ ಸ್ತವನ | ೯ |
| ೮) | ಎಂಟನೇ ಸಮಾಸ : ಸಭಾ ಸ್ತವನ | ೧೧ |
| ೯) | ಒಂಬತ್ತನೇ ಸಮಾಸ : ಪರಮಾರ್ಥ ಸ್ತವನ | ೧೨ |
| ೧೦) | ಹತ್ತನೇ ಸಮಾಸ : ನರದೇಹ ಸ್ತವನ ನಿರೂಪಣೆ | ೧೩ |


## ಎರಡನೇ ದಶಕ : ಮೂರ್ಖ ಲಕ್ಷಣಗಳ


| | | |
|---|---|---|
| ೧೧) | ಮೊದಲನೇ ಸಮಾಸ : ಮೂರ್ಖ ಲಕ್ಷಣ | ೧೭ |
| ೧೨) | ಎರಡನೇ ಸಮಾಸ : ಉತ್ತಮ ಲಕ್ಷಣಗಳ | ೨೦ |
| ೧೩) | ಮೂರನೇ ಸಮಾಸ : ಕುವಿದ್ಯಾಲಕ್ಷಣ | ೨೨ |
| ೧೪) | ನಾಲ್ಕನೇ ಸಮಾಸ – ಭಕ್ತಿ ನಿರೂಪಣೆ | ೨೪ |
| ೧೫) | ಐದನೇ ಸಮಾಸ : ರಜೋಗುಣ ಲಕ್ಷಣ | ೨೫ |
| ೧೬) | ಆರನೇ ಸಮಾಸ : ತಮೋಗುಣ ಲಕ್ಷಣ | ೨೭ |
| ೧೭) | ಏಳನೇ ಸಮಾಸ : ಸತ್ವಗುಣ ಲಕ್ಷಣ | ೨೯ |
| ೧೮) | ಎಂಟನೇ  ಸಮಾಸ : ಸದ್ವಿದ್ಯಾ ನಿರೂಪಣೆ | ೩೩ |
| ೧೯) | ಒಂಬತ್ತನೇ ಸಮಾಸ : ವಿರಕ್ತ ಲಕ್ಷಣ | ೩೪ |
| ೨೦) | ಹತ್ತನೇ ಸಮಾಸ : ಪಠಿತ ಮೂರ್ಖ ಲಕ್ಷಣ | ೩೬ |


## ಮೂರನೇ ದಶಕ : ಸ್ವಗುಣ ಪರೀಕ್ಷಾ


| | | |
|---|---|---|
| ೨೧) | ಒಂದನೇ ಸಮಾಸ : ಜನ್ಮ ದುಃಖ ನಿರೂಪಣ | ೩೯ |
| ೨೨) | ಎರಡನೇ ಸಮಾಸ : ಸ್ವಗುಣ ಪರೀಕ್ಷೆ (ಅ) | ೪೧ |
| ೨೩) | ಮೂರನೇ ಸಮಾಸ : ಸ್ವಗುಣ ಪರೀಕ್ಷೆ (ಬ) | ೪೪ |
| ೨೪) | ನಾಲ್ಕನೇ ಸಮಾಸ : ಸ್ವಗುಣ ಪರೀಕ್ಷೆ (ಕ) | ೪೬ |
| ೨೫) | ಐದನೇ ಸಮಾಸ : ಸ್ವಗುಣ ಪರೀಕ್ಷೆ(ಡ) | ೪೯ |
| ೨೬) | ಆರನೇ ಸಮಾಸ : ಆಧ್ಯಾತ್ಮಿಕ ತಾಪ | ೫೧ |
| ೨೭) | ಏಳನೇ ಸಮಾಸ – ಆದಿ ಭೌತಿಕ ತಾಪ | ೫೪ |
| ೨೮) | ಎಂಟನೇ ಸಮಾಸ : ಆಧಿ ದೈವಿಕ ತಾಪ | ೫೯ |
| ೨೯) | ಒಂಬತ್ತನೇ ಸಮಾಸ : ಮೃತ್ಯು ನಿರೂಪಣೆ | ೬೦ |
| ೩೦) | ಹತ್ತನೇ  ಸಮಾಸ – ವೈರಾಗ್ಯ ನಿರೂಪಣೆ | ೬೩ |

ನಾಲ್ಕನೇ ದಶಕ : ನವವಿಧ ಭಕ್ತಿ

೩೧) ಮೊದಲನೇ ಸಮಾಸ : ಶ್ರವಣ ಭಕ್ತಿ ೬೭

೩೨) ಎರಡನೇ ಸಮಾಸ : ಕೀರ್ತನ ಭಕ್ತಿ ೬೮

೩೩) ಮೂರನೇ ಸಮಾಸ : ನಾಮಸ್ಮರಣ ಭಕ್ತಿ ೭೦

೩೪) ನಾಲ್ಕನೇ ಸಮಾಸ : ಪಾದ ಸೇವೆನೆ ಭಕ್ತಿ ೭೧

೩೫) ಐದನೇ ಸಮಾಸ : ಅರ್ಚನ ಭಕ್ತಿ ೭೨

೩೬) ಆರನೇ ಸಮಾಸ : ವಂದನಭಕ್ತಿ ೭೪

೩೭) ಏಳನೇ ಸಮಾಸ : ದಾಸ್ಯ ಭಕ್ತಿ ೭೫

೩೮) ಎಂಟನೇ ಸಮಾಸ : ಸಖ್ಯ ಭಕ್ತಿ ೭೬

೩೯) ಒಂಬತ್ತನೇ ಸಮಾಸ : ಆತ್ಮನಿವೇದನ ಭಕ್ತಿ ೭೮

೪೦) ಹತ್ತನೇ ಸಮಾಸ : ಚತುಷ್ಟಯ ೭೯

ಐದನೇ ದಶಕ : ಮಂತ್ರಗಳ

೪೧) ಒಂದನೇ ಸಮಾಸ : ಗುರು ನಿಶ್ಚಯ ೮೧

೪೨) ಎರಡನೇ ಸಮಾಸ : ಗುರು ಲಕ್ಷಣ ೮೩

೪೩) ಮೂರನೇ ಸಮಾಸ : ಶಿಷ್ಯ ಲಕ್ಷಣ ೮೬

೪೪) ನಾಲ್ಕನೇ ಸಮಾಸ : ಉಪದೇಶ ಲಕ್ಷಣ ೯೧

೪೫) ಐದನೇ ಸಮಾಸ : ಬಹುವಿಧ ಜ್ಞಾನ ನಿರೂಪಣೆ ೯೩

೪೬) ಆರನೇ ಸಮಾಸ : ಶುದ್ಧ ಜ್ಞಾನ ನಿರೂಪಣೆ ೯೪

೪೭) ಏಳನೇ ಸಮಾಸ : ಬದ್ಧ ಲಕ್ಷಣ ೯೮

೪೮) ಎಂಟನೇ ಸಮಾಸ : ಮುಮುಕ್ಷು ಲಕ್ಷಣ ೧೦೦

೪೯) ಒಂಬತ್ತನೇ ಸಮಾಸ : ಸಾಧಕ ನಿರೂಪಣೆ ೧೦೨

೫೦) ಹತ್ತನೇ ಸಮಾಸ : 'ಸಿದ್ಧ ಲಕ್ಷಣ' ನಿರೂಪಣೆ ೧೦೫

ಆರನೇ ದಶಕ - ದೇವ ಶೋಧನೆ

೫೧) ಒಂದನೇ ಸಮಾಸ : ದೇವ ಶೋಧನೆ ೧೦೮

೫೨) ಎರಡನೇ ಸಮಾಸ : ಬ್ರಹ್ಮಪ್ರಾಪ್ತಿ ನಿರೂಪಣೆ ೧೦೯

೫೩) ಮೂರನೇ ಸಮಾಸ : ಮಾಯಾ ಉದ್ಭವ ನಿರೂಪಣೆ ೧೧೧

೫೪) ನಾಲ್ಕನೇ ಸಮಾಸ : ಬ್ರಹ್ಮ ನಿರೂಪಣೆ ೧೧೩

೫೫) ಐದನೇ ಸಮಾಸ : ಮಾಯಾ ಬ್ರಹ್ಮ ನಿರೂಪಣೆ ೧೧೫

೫೬) ಆರನೇ ಸಮಾಸ : ಸೃಷ್ಟಿ ಕಥನ ೧೧೬

೫೭) ಏಳನೇ ಸಮಾಸ : ಸಗುಣ ಭಜನೆ ೧೧೯

೫೮) ಎಂಟನೇ ಸಮಾಸ : ದೃಶ್ಯ ನಿರಸನ ೧೨೧

೫೯) ಒಂಬತ್ತನೇ ಸಮಾಸ : ಸಾರ ಶೋಧನ ೧೨೪

೬೦) ಹತ್ತನೇ ಸಮಾಸ : ಅನಿರ್ವಾಚ್ಯ ನಿರೂಪಣ ೧೨೬

<u>ಏಳನೇ ದಶಕ ಃ ಚತುರ್ದಶ ಬ್ರಹ್ಮಗಳ</u>


೬೧) ಮೊದಲನೇ ಸಮಾಸ ಃ ಮಂಗಲಾಚರಣ ೧೨೯

೬೨) ಎರಡನೇ ಸಮಾಸ - ಬ್ರಹ್ಮ ನಿರೂಪಣೆ ೧೩೨

೬೩) ಮೂರನೇ ಸಮಾಸ : ಚತುರ್ದಶ ಬ್ರಹ್ಮ ನಿರೂಪಣೆ ೧೩೫

೬೪) ನಾಲ್ಕನೇ ಸಮಾಸ ಃ ವಿಮಲ ಬ್ರಹ್ಮ ನಿರೂಪಣೆ ೧೩೭

೬೫) ಐದನೇ ಸಮಾಸ ಃ ದ್ವೈತ ಕಲ್ಪನಾ ನಿರಸನ ೧೪೦

೬೬) ಆರನೇ ಸಮಾಸ ಃ 'ಬದ್ಧ-ಮುಕ್ತ' ನಿರೂಪಣೆ ೧೪೨

೬೭) ಏಳನೇ ಸಮಾಸ ಃ ಸಾಧನ ಪ್ರತಿಷ್ಠಾ ನಿರೂಪಣೆ ೧೪೫

೬೮) ಎಂಟನೇ ಸಮಾಸ ಃ ಶ್ರವಣ ನಿರೂಪಣೆ ೧೪೯

೬೯) ಒಂಬತ್ತನೇ ಸಮಾಸ ಃ ಶ್ರವಣ-ನಿರೂಪಣೆ ೧೫೨

೭೦) ಹತ್ತನೇ ಸಮಾಸ : ದೇಹಾಂತ ನಿರೂಪಣೆ ೧೫೪


<u>ಎಂಟನೇ ದಶಕ ಮಾಯಾ ಉದ್ಭವ</u>


೭೧) ಒಂದನೇ ಸಮಾಸ - ದೇವದರ್ಶನ ೧೫೮

೭೨) ಎರಡನೇ ಸಮಾಸ - ಸೂಕ್ಷ್ಮಶಂಕಾ ನಿರೂಪಣೆ (ಅ) ೧೬೧

೭೩) ಮೂರನೇ ಸಮಾಸ : ಸೂಕ್ಷ್ಮಶಂಕಾ ನಿರೂಪಣೆ(ಆ) ೧೬೪

೭೪) ನಾಲ್ಕನೇ ಸಮಾಸ : ಸೂಕ್ಷ್ಮ - ಪಂಚಭೂತ ನಿರೂಪಣೆ ೧೬೭

೭೫) ಐದನೇ ಸಮಾಸ ಃ 'ಸ್ಥೂಲ-ಪಂಚಮಹಾಭೂತೇಸ್ವರೂಪಾಕಾಶ ಭೇದೊ' ನಾಮಕ ೧೭೦

೭೬) ಆರನೇ ಸಮಾಸ ಃ ದುಶ್ಚಿತ್ತ ನಿರೂಪಣೆ ೧೭೩

೭೭) ಏಳನೇ ಸಮಾಸ ಃ ಮೋಕ್ಷ ಲಕ್ಷಣ ೧೭೬

೭೮) ಎಂಟನೇ ಸಮಾಸ ಃ ಆತ್ಮದರ್ಶನ ೧೭೯

೭೯) ಒಂಬತ್ತನೇ ಸಮಾಸ ಃ 'ಸಿದ್ಧ' ಲಕ್ಷಣ ೧೮೨

೮೦) ಹತ್ತನೇ ಸಮಾಸ ಃ 'ಶೂನ್ಯತ್ವ' ನಿರಸನ ೧೮೫


<u>ಒಂಬತ್ತನೇ ದಶಕ ಃ ಗುಣರೂಪ</u>


೮೧) ಮೊದಲನೇ ಸಮಾಸ : ಶಂಕಾ ನಾಮಕ ೧೯೦

೮೨) ಎರಡನೇ ಸಮಾಸ : ಬ್ರಹ್ಮ ನಿರೂಪಣ ೧೯೧

೮೩) ಮೂರನೇ ಸಮಾಸಃ ನಿಸ್ಸಂದೇಹ ನಿರೂಪಣೆ ೧೯೩

೮೪) ನಾಲ್ಕನೇ ಸಮಾಸ : ಅರುಹಿನ (ಜ್ಞಾನದ) ನಿರೂಪಣೆ ೧೯೫

೮೫) ಐದನೇ ಸಮಾಸ ಃ ಅನುಮಾನ ನಿರಸನ ೧೯೭

೮೬) ಆರನೇ ಸಮಾಸ ಃ ಗುಣ-ರೂಪ ನಿರೂಪಣೆ ೨೦೦

೮೭) ಏಳನೇ ಸಮಾಸ ಃ ವಿಕಲ್ಪ ನಿರಸನ ೨೦೩

೮೮) ಎಂಟನೇ ಸಮಾಸ ಃ ದೇಹಾಂತ ನಿರೂಪಣೆ ೨೦೬

೮೯) ಒಂಬತ್ತನೇ ಸಮಾಸ ಃ ಸಂದೇಹ ನಿವಾರಣೆ ೨೦೮

೯೦) ಹತ್ತನೇ ಸಮಾಸ ಸ್ಥಿತಿ-ನಿರೂಪಣೆ ೨೧೦

## ಹತ್ತನೇ ದಶಕ : ಜಗಜ್ಯೋತಿ ನಾಮ


| | | |
|---|---|---|
| ೯೧) | ಮೊದಲನೇ ಸಮಾಸ : ಸರ್ವರ ಅಂತಃಕರಣ ಏಕ | ೨೧೩ |
| ೯೨) | ಎರಡನೇ ಸಮಾಸ : ದೇಹ-ಶಂಕಾ | ೨೧೪ |
| ೯೩) | ಮೂರನೇ ಸಮಾಸ : ದೇಹ-ಶಂಕಾ ಶೋಧನೆ | ೨೧೬ |
| ೯೪) | ನಾಲ್ಕನೇ ಸಮಾಸ : ಬೀಜ ಲಕ್ಷಣ | ೨೧೭ |
| ೯೫) | ಐದನೇ ಸಮಾಸ : ಪಂಚಪ್ರಳಯ ನಿರೂಪಣೆ | ೨೧೯ |
| ೯೬) | ಆರನೇ ಸಮಾಸ : ಭ್ರಮ ನಿರೂಪಣೆ | ೨೨೧ |
| ೯೭) | ಏಳನೇ ಸಮಾಸ : 'ಸಗುಣ-ಭಜನ' - ನಿರೂಪಣೆ | ೨೨೩ |
| ೯೮) | ಎಂಟನೇ ಸಮಾಸ : ಅನುಭೂತಿ-ನಿರೂಪಣೆ | ೨೨೫ |
| ೯೯) | ಒಂಬತ್ತನೇ ಸಮಾಸ : ಪುರುಷ ಪ್ರಕೃತಿ | ೨೨೭ |
| ೧೦೦) | ಹತ್ತನೇ ಸಮಾಸ : ಚಲಾಚಲ ನಿರೂಪಣೆ | ೨೨೮ |


## ಹನ್ನೊಂದನೇ ದಶಕ : ಭೀಮ-ದಶಕ


| | | |
|---|---|---|
| ೧೦೧) | ಮೊದಲನೇ ಸಮಾಸ : ಸಿದ್ಧಾಂತ ನಿರೂಪಣೆ | ೨೩೨ |
| ೧೦೨) | ಎರಡನೇ ಸಮಾಸ : ಚತುರ್‌ದೇವ ನಿರೂಪಣೆ | ೨೩೪ |
| ೧೦೩) | ಮೂರನೇ ಸಮಾಸ : 'ಬೋಧ' ನಿರೂಪಣೆ | ೨೩೬ |
| ೧೦೪) | ನಾಲ್ಕನೇ ಸಮಾಸ : ಸಾರ ವಿವೇಕ ನಿರೂಪಣೆ | ೨೩೭ |
| ೧೦೫) | ಐದನೇ ಸಮಾಸ : ರಾಜಕಾರಣ ನಿರೂಪಣೆ | ೨೩೯ |
| ೧೦೬) | ಆರನೇ ಸಮಾಸ : ಮಹಂತ ಲಕ್ಷಣ | ೨೪೦ |
| ೧೦೭) | ಏಳನೇ ಸಮಾಸ : ಚಂಚಲ ನದಿ | ೨೪೨ |
| ೧೦೮) | ಎಂಟನೇ ಸಮಾಸ : ಅಂತರಾತ್ಮಾ-ವಿವರಣೆ | ೨೪೩ |
| ೧೦೯) | ಒಂಬತ್ತನೇ ಸಮಾಸ : ಉಪದೇಶ ನಿರೂಪಣೆ | ೨೪೪ |
| ೧೧೦) | ಹತ್ತನೇ ಸಮಾಸ : ನಿಸ್ಪೃಹ ವರ್ತನ | ೨೪೬ |


## ಹನ್ನೆರಡನೇ ದಶಕ : ವಿವೇಕ - ವೈರಾಗ್ಯ


| | | |
|---|---|---|
| ೧೧೧) | ಒಂದನೇ ಸಮಾಸ : ವಿಮಲ ಲಕ್ಷಣ | ೨೪೮ |
| ೧೧೨) | ಎರಡನೇ ಸಮಾಸ : ಪ್ರತ್ಯಯ ನಿರೂಪಣೆ | ೨೪೯ |
| ೧೧೩) | ಮೂರನೇ ಸಮಾಸ : ಭಕ್ತ ನಿರೂಪಣೆ | ೨೫೦ |
| ೧೧೪) | ನಾಲ್ಕನೇ ಸಮಾಸ : ವಿವೇಕ ವೈರಾಗ್ಯ ನಿರೂಪಣೆ | ೨೫೨ |
| ೧೧೫) | ಐದನೇ ಸಮಾಸ : ಆತ್ಮ ನಿವೇದನ | ೨೫೩ |
| ೧೧೬) | ಆರನೇ ಸಮಾಸ : ಸೃಷ್ಟಿಕ್ರಮ ನಿರೂಪಣೆ | ೨೫೪ |
| ೧೧೭) | ಏಳನೇ ಸಮಾಸ : ವಿಷಯ ತ್ಯಾಗ | ೨೫೬ |
| ೧೧೮) | ಎಂಟನೇ ಸಮಾಸ : ಕಾಲರೂಪ ನಿರೂಪಣೆ | ೨೫೭ |
| ೧೧೯) | ಒಂಬತ್ತನೇ ಸಮಾಸ : ಯತ್ನ ಬೋಧ | ೨೫೯ |
| ೧೨೦) | ಹತ್ತನೇ ಸಮಾಸ : ಉತ್ತಮ ಪುರುಷ ನಿರೂಪಣೆ | ೨೬೦ |

## ಹದಿಮೂರನೇ ದಶಕ : ನಾಮರೂಪ


೧೨೧) ಒಂದನೇ ಸಮಾಸ : ಆತ್ಮಾನಾತ್ಮವಿವೇಕ ೨೬೩
೧೨೨) ಎರಡನೇ ಸಮಾಸ : ಸಾರಾಸಾರ ನಿರೂಪಣೆ ೨೬೪
೧೨೩) ಮೂರನೇ ಸಮಾಸ : ಸೃಷ್ಟಿ ನಿರ್ಮಾಣದ ನಿರೂಪಣೆ ೨೬೫
೧೨೪) ನಾಲ್ಕನೇ ಸಮಾಸ : ಪ್ರಲಯ ನಿರುಪಣೆ ೨೬೬
೧೨೫) ಐದನೇ ಸಮಾಸ : ಕಥಾ ನಿರೂಪಣೆ ೨೬೭
೧೨೬) ಆರನೇ ಸಮಾಸಃ ಲಘುಬೋಧ ೨೬೮
೧೨೭) ಏಳನೇ ಸಮಾಸಃ ಪ್ರತ್ಯಯ ವಿವರಣೆ ೨೭೦
೧೨೮) ಎಂಟನೇ ಸಮಾಸಃ ಕರ್ತಾರ ನಿರೂಪಣೆ ೨೭೧
೧೨೯) ಒಂಬತ್ತನೇ ಸಮಾಸ : ಆತ್ಮ ವಿವರಣೆ ೨೭೩
೧೩೦) ಹತ್ತನೇ ಸಮಾಸ : ಪ್ರಬೋಧನ-ನಿರೂಪಣೆ ೨೭೪


## ಹದಿನಾಲ್ಕನೇ ದಶಕ : ಅಖಂಡ ಧ್ಯಾನ ನಾಮಕ


೧೩೧) ಒಂದನೇ ಸಮಾಸ : ನಿಸ್ಪೃಹ ಲಕ್ಷಣ ೨೭೬
೧೩೨) ಎರಡನೇ ಸಮಾಸ : ಭಿಕ್ಷಾ ನಿರೂಪಣೆ ೨೭೯
೧೩೩) ಮೂರನೇ ಸಮಾಸ : ಕವಿತ್ವಕಲಾ ನಿರೂಪಣೆ ೨೮೦
೧೩೪) ನಾಲ್ಕನೇ ಸಮಾಸ : ಕೀರ್ತನ ಲಕ್ಷಣ ೨೮೧
೧೩೫) ಐದನೇ ಸಮಾಸ : ಹರಿಕಥಾ ಲಕ್ಷಣ ೨೮೩
೧೩೬) ಆರನೇ ಸಮಾಸ : ಚಾತುರ್ಯ ಲಕ್ಷಣ ೨೮೫
೧೩೭) ಏಳನೇ ಸಮಾಸ : ಯುಗಧರ್ಮ ನಿರೂಪಣೆ ೨೮೬
೧೩೮) ಎಂಟನೇ ಸಮಾಸಃ ಅಖಂಡ ಧ್ಯಾನ ನಿರೂಪಣೆ ೨೮೭
೧೩೯) ಒಂಬತ್ತನೇ ಸಮಾಸ : ಶಾಶ್ವತ ನಿರೂಪಣೆ ೨೯೦
೧೪೦) ಹತ್ತನೇ ಸಮಾಸಃ ಮಾಯಾ ನಿರೂಪಣೆ ೨೯೧


## ಹದಿನೈದನೇ ದಶಕ ಆತ್ಮ ದಶಕ


೧೪೧) ಒಂದನೇ ಸಮಾಸಃ ಚಾತುರ್ಯ ಲಕ್ಷಣ ೨೯೩
೧೪೨) ಎರಡನೇ ಸಮಾಸಃ ನಿಸ್ಪೃಹ ವ್ಯಾಪ ೨೯೪
೧೪೩) ಮೂರನೇ ಸಮಾಸ : ಶ್ರೇಷ್ಠ ಅಂತರಾತ್ಮಾ ನಿರೂಪಣೆ ೨೯೬
೧೪೪) ನಾಲ್ಕನೇ ಸಮಾಸ : ಶಾಶ್ವತ ಬ್ರಹ್ಮ ನಿರೂಪಣೆ ೨೯೭
೧೪೫) ಐದನೇ ಸಮಾಸಃ ಚಂಚಲ-ಲಕ್ಷಣ-ನಿರೂಪಣೆ ೨೯೮
೧೪೬) ಆರನೇ ಸಮಾಸಃ ಚಾತುರ್ಯ ವಿವರಣೆ ೩೦೦
೧೪೭) ಏಳನೇ ಸಮಾಸಃ ಅಧೋರ್ಧ್ವ ನಿರೂಪಣೆ ೩೦೧
೧೪೮) ಎಂಟನೇ ಸಮಾಸ : ಸೂಕ್ಷ್ಮ ಜೀವ ನಿರೂಪಣೆ ೩೦೩
೧೪೯) ಒಂಬತ್ತನೇ ಸಮಾಸ : ಪಿಂಡೋತ್ಪತ್ತಿ ನಿರೂಪಣೆ ೩೦೪
೧೫೦) ಹತ್ತನೇ ಸಮಾಸ : ಸಿದ್ಧಾಂತ ನಿರೂಪಣೆ ೩೦೬

ಹದಿನಾರನೇ ದಶಕ : ಸಪ್ತಸಪ್ತಿ ಅನ್ವಯ (ಸೂರ್ಯನ ವಂಶ)


೧೫೧) ಮೊದಲನೇ ಸಮಾಸಃ ವಾಲ್ಮೀಕಿ ಸ್ತವನ ನಿರೂಪಣೆ ೩೦೮
೧೫೨) ಎರಡನೇ ಸಮಾಸಃ ಸೂರ್ಯ ಸ್ತವನ ನಿರೂಪಣೆ ೩೦೯
೧೫೩) ಮೂರನೇ ಸಮಾಸ : ಪೃಥ್ವಿಸ್ತವನ ನಿರೂಪಣೆ ೩೧೦
೧೫೪) ನಾಲ್ಕನೇ ಸಮಾಸ : ಆಪ - ನಿರೂಪಣೆ ೩೧೧
೧೫೫) ಐದನೇ ಸಮಾಸ : ಅಗ್ನಿ ನಿರೂಪಣೆ ೩೧೨
೧೫೬) ಆರನೇ ಸಮಾಸಃ ವಾಯು ಸ್ತವನ ೩೧೩
೧೫೭) ಏಳನೇ ಸಮಾಸಃ ಮಹದ್ಭೂತ ನಿರೂಪಣೆ ೩೧೫
೧೫೮) ಎಂಟನೇ ಸಮಾಸ- ಆತ್ಮರಾಮ ನಿರೂಪಣೆ ೩೧೭
೧೫೯) ಒಂಬತ್ತನೇ ಸಮಾಸ : ನಾನಾ ಉಪಾಸನಾ ನಿರೂಪಣೆ ೩೧೮
೧೬೦) ಹತ್ತನೇ ಸಮಾಸ : ಗುಣ-ಭೂತ ನಿರೂಪಣೆ ೩೨೦


ಹದಿನೇಳನೇ ದಶಕ : ಪ್ರಕೃತಿ ಪುರುಷ


೧೬೧) ಮೊದಲನೇ ಸಮಾಸ : ದೇವ-ಬಲಾತ್ಕಾರ ೩೨೨
೧೬೨) ಎರಡನೇ ಸಮಾಸ : ಶಿವಶಕ್ತಿ ನಿರೂಪಣೆ ೩೨೩
೧೬೩) ಮೂರನೇ ಸಮಾಸ : ಶ್ರವಣ ನಿರೂಪಣೆ ೩೨೪
೧೬೪) ನಾಲ್ಕನೇ ಸಮಾಸ : ಅನುಮಾನ ನಿರಸನ ೩೨೬
೧೬೫) ಐದನೇ ಸಮಾಸ : ಅಜಪ ನಿರೂಪಣೆ ೩೨೮
೧೬೬) ಆರನೇ ಸಮಾಸ : ದೇಹಾತ್ಮ ನಿರೂಪಣೆ ೩೩೦
೧೬೭) ಏಳನೇ ಸಮಾಸ : ಜಗ-ಜೀವನ-ನಿರೂಪಣೆ ೩೩೧
೧೬೮) ಎಂಟನೇ ಸಮಾಸ : ತತ್ವ ನಿರಸನ ೩೩೩
೧೬೯) ಒಂಬತ್ತನೇ - ಸಮಾಸ : ತನ-ಚತುಷ್ಟ-ನಿರೂಪಣೆ ೩೩೫
೧೭೦) ಹತ್ತನೇ ಸಮಾಸ : ಟೋಣಪ ಸಿದ್ಧ ಲಕ್ಷಣ ೩೩೬


ಹದಿನೆಂಟನೇ ದಶಕ : ಬಹುವಿಧ ವಿಷಯಗಳ


೧೭೧) ಒಂದನೇ ಸಮಾಸ : ಬಹುದೇವಸ್ಥಾನ ನಿರೂಪಣೆ ೩೩೮
೧೭೨) ಎರಡನೇ ಸಮಾಸ : ಸರ್ವಜ್ಞ ಸಂಗ ನಿರೂಪಣೆ ೩೩೯
೧೭೩) ಮೂರನೇ ಸಮಾಸ : ನಿಸ್ಪೃಹ-ಬೋಧ ೩೪೦
೧೭೪) ನಾಲ್ಕನೇ ಸಮಾಸ : ದುರ್ಲಭದೇಹ ನಿರೂಪಣೆ ೩೪೧
೧೭೫) ಐದನೇ ಸಮಾಸ : ಅನಿಷ್ಟ ನಿರೂಪಣೆ ೩೪೩
೧೭೬) ಆರನೇ ಸಮಾಸ : ಉತ್ತಮ ಪುರುಷ ನಿರೂಪಣೆ ೩೪೫
೧೭೭) ಏಳನೇ ಸಮಾಸ : ಜನ-ಸ್ವಭಾವ-ನಿರೂಪಣೆ ೩೪೬
೧೭೮) ಎಂಟನೇ ಸಮಾಸ : ಅಂತರ್ದೇವ ನಿರೂಪಣೆ ೩೪೭
೧೭೯) ಒಂಬತ್ತನೇ ಸಮಾಸ : ನಿದ್ರಾ ನಿರೂಪಣೆ ೩೪೮
೧೮೦) ಹತ್ತನೇ ಸಮಾಸ : ಶ್ರೋತಾ-ಅವಲಕ್ಷಣ ನಿರೂಪಣೆ ೩೪೯

## ಹತ್ತೊಂಬ್ಬತ್ತನೇ ದಶಕ : ಕಲಿಸುವಿಕೆ (ಬೋಧ)


೧೮೧) ಒಂದನೇ ಸಮಾಸ : ಲೇಖನ ಕ್ರಿಯಾ ನಿರೂಪಣೆ ೩೫೩

೧೮೨) ಎರಡನೇ ಸಮಾಸ : ವಿವರಣೆಯ ನಿರೂಪಣೆ ೩೫೪

೧೮೩) ಮೂರನೇ ಸಮಾಸ : ಭಾಗ್ಯಹೀನನ ಲಕ್ಷಣ ೩೫೫

೧೮೪) ನಾಲ್ಕನೇ ಸಮಾಸ : ಭಾಗ್ಯ-ವಂತನ ಲಕ್ಷಣ ೩೫೬

೧೮೫) ಐದನೇ ಸಮಾಸ : ದೇಹಮನ್ನಣೆ ೩೫೮

೧೮೬) ಆರನೇ ಸಮಾಸ : ಬುದ್ಧಿವಾದ ನಿರೂಪಣೆ ೩೫೯

೧೮೭) ಏಳನೇ ಸಮಾಸ : ಯತ್ನ ನಿರೂಪಣೆ ೩೬೧

೧೮೮) ಎಂಟನೇ ಸಮಾಸ : ಉಪಾಧಿ ಲಕ್ಷಣ ೩೬೨

೧೮೯) ಒಂಬತ್ತನೇ ಸಮಾಸ : 'ರಾಜಕಾರಣ' ನಿರೂಪಣೆ ೩೬೪

೧೯೦) ಹತ್ತನೇ ಸಮಾಸ : ವಿವೇಕ ಲಕ್ಷಣ ನಿರೂಪಣೆ ೩೬೫


## <u>ಇಪ್ಪತ್ತನೇ ದಶಕ : 'ಪೂರ್ಣ ನಾಮಕ' ದಶಕ</u>


೧೯೧) ಒಂದನೇ ಸಮಾಸ : ಪೂರ್ಣಾಪೂರ್ಣ ನಿರೂಪಣೆ ೩೬೮

೧೯೨) ಎರಡನೇ ಸಮಾಸ : ಸೃಷ್ಟಿಯ ತ್ರಿವಿಧ ಲಕ್ಷಣ ೩೬೯

೧೯೩) ಮೂರನೇ ಸಮಾಸ : ಸೂಕ್ಷ್ಮನಾಮಾಭಿಧಾನ ನಿರೂಪಣೆ ೩೭೧

೧೯೪) ನಾಲ್ಕನೇ ಸಮಾಸ : ಆತ್ಮ ನಿರೂಪಣೆ ೩೭೩

೧೯೫) ಐದನೇ ಸಮಾಸ : 'ಚತ್ವಾರ ಜಿನಸು (ವಸ್ತು) ನಿರೂಪಣೆ ೩೭೪

೧೯೬) ಆರನೇ ಸಮಾಸ : 'ಆತ್ಮಗುಣ' ನಿರೂಪಣೆ ೩೭೫

೧೯೭) ಏಳನೇ ಸಮಾಸ : ಆತ್ಮ ನಿರೂಪಣೆ ೩೭೭

೧೯೮) ಎಂಟನೇ ಸಮಾಸ : ದೇಹಕ್ಷೇತ್ರ ನಿರೂಪಣೆ ೩೭೮

೧೯೯) ಒಂಬತ್ತನೇ ಸಮಾಸ : ಸೂಕ್ಷ್ಮ ನಿರೂಪಣೆ ೩೮೦

೨೦೦) ಹತ್ತನೇ ಸಮಾಸ : ವಿಮಲ ಬ್ರಹ್ಮ ನಿರೂಪಣೆ